ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 2 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 77 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನೈತಿಕ ಹೊಣೆ ಹೊತ್ತು ಸಚಿವ ಭೈರತಿ ಸುರೇಶ್ ಮೊದಲು ರಾಜೀನಾಮೆ ಕೊಡಬೇಕು



ಮೈಸೂರು, ಜು. 1(ಆರ್‌ಕೆ)– ಮುಡಾದಲ್ಲಿ ನಡೆದಿರುವ ಸಾವಿರಾರು ಕೋಟಿ ರೂ. ಹಗರಣಕ್ಕೆ ಮೂಲ ಕಾರಣಕರ್ತರಾದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ಮೊದಲು ರಾಜೀನಾಮೆ ನೀಡಬೇಕೆಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಒತ್ತಾಯಿಸಿದ್ದಾರೆ.

ಬಿಹಾರದಲ್ಲಿ ಪ್ರವಾಸದಲ್ಲಿರುವ ಅವರು, ದೂರವಾಣಿ ಮೂಲಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ ಮುಡಾದಲ್ಲಿ ಶೇ. 50:50 ಅನುಪಾತದಡಿ ನಿಯಮ ಬಾಹಿರವಾಗಿ ಸರ್ಕಾರದ ಆದೇಶವನ್ನೂ ಧಿಕ್ಕರಿಸಿ ಸುಮಾರು 4,500 ನಿವೇಶನಗಳನ್ನು ಹಂಚಿಕೆ ಮಾಡಿರುವುದು ದಾಖಲೆಗಳ ಸಮೇತ ರುಜುವಾತಾಗಿರುವುದು ಜಗಜ್ಜಾಹೀರಾಗಿದ್ದರೂ, ನಾಮಕಾವಸ್ತೆಗೆ ಮೈಸೂರಿಗೆ ಬಂದು ಕಳಂಕಿತರನ್ನೇ ಎಡ–ಬಲ ಕೂರಿಸಿಕೊಂಡು ಮೀಟಿಂಗ್ ಮಾಡಿ ಕಣ್ಣೊರೆಸುವ ನಾಟಕವಾಡಿರುವ ಭೈರತಿ ಸುರೇಶ್, ಯಾರನ್ನೂ ರಕ್ಷಿಸಲು ಪ್ರಯತ್ನಿಸುತಿದ್ದಾರೆ ಎಂದು ಪ್ರಶ್ನಿಸಿದರು. ಅವರ ಇಲಾಖೆಯಡಿ ಬರುವ ಪ್ರಾಧಿಕಾರದ ಅಧಿಕಾರಿಗಳು, ಜನಪ್ರತಿನಿಧಿಗಳು, ಮಧ್ಯವರ್ತಿಗಳೊಂದಿಗೆ ಸೇರಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ

● 6ನೇ ಪುಟಕ್ಕೆ

ಮುಡಾದಲ್ಲಿ ಶೇ.50:50 ಅನುಪಾತದಡಿ, ಪ್ರೋತ್ಸಾಹಕ ನಿವೇಶನ ಹಂಚಿಕೆಯ ಭಾರೀ ಹಗರಣ; ದಿಢೀರ್ ಹೆಲಿಕಾಪ್ಟರ್‌ನಲ್ಲಿ ಬಂದು ಸಭೆ ಮಾಡಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಘೋಷಣೆ

ಮುಡಾ ಆಯುಕ್ತ, ಕಾರ್ಯದರ್ಶಿ ಸೇರಿದಂತೆ ಪ್ರಮುಖ ಅಧಿಕಾರಿಗಳ ವರ್ಗಾವಣೆ

ಐಎಎಸ್ ಅಧಿಕಾರಿಗಳ ನೇತೃತ್ವದ ತಂಡದಿಂದ ತನಿಖೆ; ತಿಂಗಳಲ್ಲಿ ವರದಿಗೆ ಸೂಚನೆ



ಮೈಸೂರು, ಜು.1(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಶೇ. 50:50ರ ಅನುಪಾತದಡಿ ಹಾಗೂ ಪ್ರೋತ್ಸಾಹಕ ನಿವೇಶನ ಹಂಚಿಕೆಯಲ್ಲಿ ಭಾರೀ ಹಗರಣ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಆಯುಕ್ತರು ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಕೂಡಲೇ ಎತ್ತಂಗಡಿ ಮಾಡಿ, ಐಎಎಸ್ ಅಧಿಕಾರಿಗಳ ನೇತೃತ್ವದ ತಂಡದಿಂದ ತನಿಖೆ ನಡೆಸಲಾಗುತ್ತದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.



ದಿನೇಶ್

ಮುಡಾದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ಮೈಸೂರಿಗೆ ದಿಢೀರ್ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಸಚಿವರು, ಸಂಸ್ಥೆಯ ಸಭಾಂಗಣದಲ್ಲಿ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಒಂದು ಗಂಟೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

● 6ನೇ ಪುಟಕ್ಕೆ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಸೋಮವಾರ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸುದ್ದಿಗೋಷ್ಠಿ ನಡೆಸಿದರು. ಚಿತ್ರದಲ್ಲಿ ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ ಹಾಗೂ ಶಾಸಕ ಕೆ.ಹರೀಶ್‌ಗೌಡ ಮತ್ತಿತರರಿದ್ದಾರೆ.

ಎರಡು ವರ್ಷದಿಂದ ಆಗಿರುವ ಮಂಜೂರಾತಿ ಅಮಾನತು

ತನಿಖೆ ಮುಗಿಯುವವರೆಗೆ ಮುಡಾ ಸಭೆ ಯಾವುದೇ ನಿರ್ಣಯ ಕೈಗೊಳ್ಳುವಂತಿಲ್ಲ

ಮೈಸೂರು: ಮುಡಾದಿಂದ ಎರಡು ವರ್ಷದಿಂದ ನಿವೇಶನ ಮಂಜೂರು ಮಾಡಿರುವುದನ್ನು ತನಿಖಾ ವರದಿ ಬರುವವರೆಗೆ ಅಮಾನತ್ತಿನಲ್ಲಿಡಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.

ಮೂರ್‍ನಾಲ್ಕು ವಾರದಲ್ಲಿ ತನಿಖಾ ವರದಿ ನೀಡುವಂತೆ ತನಿಖಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇದಕ್ಕೆ ಪೂರಕವಾಗಿ ಮುಡಾ ಆಯುಕ್ತರು, ಕಾರ್ಯದರ್ಶಿ, ಎಇಇ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಜೊತೆಗೆ ನಮ್ಮ ಸರ್ಕಾರದ ಒಂದು ವರ್ಷ ಸೇರಿದಂತೆ ಹಿಂದಿನ ಎರಡು ವರ್ಷಗಳಲ್ಲಿ ಆಗಿರುವ ಎಲ್ಲಾ ಮಂಜೂರಾತಿಗಳನ್ನೂ ಅಮಾನತು ಮಾಡಲು ಆದೇಶಿಸಲಾಗುವುದು. ತನಿಖಾ ವರದಿ ಬಂದ ನಂತರ ಪರಿಶೀಲಿಸಿ,

● 6ನೇ ಪುಟಕ್ಕೆ

ನನ್ನ ಎರಡು ಪತ್ರ ಧಿಕ್ಕರಿಸಿ ಕಮಿಷನರ್ ಮನಬಂದಂತೆ ಶೇ.50:50, ಪ್ರೋತ್ಸಾಹಕ ನಿವೇಶನ ಮಂಜೂರು ಮಾಡಿದ್ದಾರೆ

ಮುಡಾ ಅಧ್ಯಕ್ಷ ಮರೀಗೌಡರ ಅಸಹಾಯಕತೆ

ಮೈಸೂರು, ಜು.1(ಬಿಎಲ್‌ಯು)– ಶೇಕಡ 50:50 ಅನುಪಾತದಡಿ ನಿವೇಶನ ಹಂಚಿಕೆ, ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರೋತ್ಸಾಹಕ ನಿವೇಶನ ಮಂಜೂರಾತಿ ನೀಡಬಾರದೆಂದು ನಾನು ಅಧಿಕಾರಕ್ಕೆ ಬಂದ ಒಂದೆರಡು ದಿನದಲ್ಲೇ ಆಯುಕ್ತರಿಗೆ ಪತ್ರ ಬರೆದಿದ್ದರೂ, ನನ್ನ ಸೂಚನೆ ಧಿಕ್ಕರಿಸಿ ಹಂಚಿಕೆ ಮಾಡಿದ್ದಾರೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡುವುದರ ಜೊತೆಗೆ ಆಯುಕ್ತರಿಗೆ ಬರೆದಿರುವ ಪತ್ರಗಳ ಪ್ರತಿಯನ್ನು ಕೂಡ ನೀಡಿದರು.

ಪರಸ್ಪರ ಒಪ್ಪಂದದಡಿ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಈಗಾಗಲೇ ಪ್ರೋತ್ಸಾಹಕ ನಿವೇಶನ ನೀಡಲಾಗಿದೆ. ಆದರೂ ಹೆಚ್ಚುವರಿಯಾಗಿ ಪ್ರೋತ್ಸಾಹಕ ನಿವೇಶನ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚುವರಿ

● 6ನೇ ಪುಟಕ್ಕೆ

ಮುಡಾ ಹಗರಣ: ತನಿಖಾ ತಂಡ ರಚಿಸಿ ಆದೇಶ ಹೊರಡಿಸಿದ ನಗರಾಭಿವೃದ್ಧಿ ಇಲಾಖೆ

ಮೈಸೂರು, ಜು.1(ಬಿಎಲ್ ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣದ ಬಗ್ಗೆ ತನಿಖೆ ನಡೆಸಿ ಒಂದು ವಾರದಲ್ಲಿ ವರದಿ ನೀಡಲು ಇಬ್ಬರು ಐಎಎಸ್ ಅಧಿಕಾರಿಗಳು ಸೇರಿದಂತೆ ನಾಲ್ವರು ಅಧಿಕಾರಿಗಳ ಸಮಿತಿ ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಈ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಲತಾ ಸಮಿತಿ ರಚಿಸಿ, ಆದೇಶಿಸಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಆರ್.ವೆಂಕಟಾಚಲಪತಿ ಅಧ್ಯಕ್ಷರಾಗಿರುವ ಸಮಿತಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಪರ ನಿರ್ದೇಶಕ ಎಂ.ಸಿ.ಶಶಿಕುಮಾರ್, ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಜಂಟಿ ನಿರ್ದೇಶಕಿ ಶಾಂತಲಾ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕೇಂದ್ರ ಕಚೇರಿಯ ಉಪ ನಿರ್ದೇಶಕ ಪ್ರಕಾಶ್ ಅವರನ್ನು ಸದಸ್ಯರಾಗಿ ನಿಯೋಜಿಸಲಾಗಿದೆ.

ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರ ಹೆಸರಿನಲ್ಲಿ ಫಲಾನುಭವಿ ಎಂಬುವುದಾಗಿ ಹೇಳಿ ಒಂದು ನಿವೇಶನದ ಬದಲು 60 ಕ್ಕೂ ಹೆಚ್ಚು ನಿವೇಶನ ನೀಡಿರುವುದು,

● 6ನೇ ಪುಟಕ್ಕೆ

ಎಸ್ಪಿಗೆ ತನ್ನ ವಿರುದ್ಧ ದೂರು ನೀಡಲು ಬಂದ ಪತ್ನಿಯನ್ನು ಇರಿದು ಕೊಂದ ಕಾನ್‌ಸ್ಟೇಬಲ್

ಹಾಸನದ ಎಸ್ಪಿ ಕಚೇರಿ ಆವರಣದಲ್ಲೇ ಘೋರ ಘಟನೆ

ಹಾಸನ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ತನ್ನ ವಿರುದ್ಧ ಎಸ್ಪಿಗೆ ದೂರು ನೀಡಲು ಬಂದ ಪತ್ನಿಯನ್ನೇ ಪೊಲೀಸ್ ಕಾನ್‌ಸ್ಟೇಬಲ್ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ.

ಹಾಸನದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಆವರಣದಲ್ಲೇ ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದ್ದು, ಹಾಸನ ನಗರ ಠಾಣೆಯ ಕಾನ್‌ಸ್ಟೆಬಲ್ ಲೋಕನಾಥ್ ತಮ್ಮ ಪತ್ನಿ ಮಮತಾ ಅವರನ್ನು ಚಾಕುವಿನಿಂದ ಇರಿದು ಕೊಂದಿದ್ದಾರೆ.

ಮೂಲಗಳ ಪ್ರಕಾರ ಲೋಕನಾಥ್ ಮತ್ತು ಮಮತಾ ಮಧ್ಯೆ 4–5 ದಿನಗಳಿಂದ ಜಗಳ ನಡೆದಿತ್ತು. ಇಂದು ಪತಿ ವಿರುದ್ಧ ದೂರು ನೀಡಲು ಎಸ್‌ಪಿ ಕಚೇರಿಗೆ ಪತ್ನಿ ಮಮತಾ



ಕೊಲೆಯಾದ ಮಮತಾ | ಕೊಲೆಗೈದ ಲೋಕನಾಥ್

● 9ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗಾದಿಯಿಂದ ಇಳಿಯುವ ಇಂಗಿತ

- ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಗೆ ರಾಜ್ಯದಲ್ಲಿನ ಪಕ್ಷ, ಸರ್ಕಾರ ಸ್ಥಿತಿ–ಗತಿ ಮಾಹಿತಿ
- ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ವೇಳೆ ನಡೆದ ಮಾತುಕತೆಗೆ ಬದ್ಧರಿರುವುದಾಗಿ ವಾಗ್ದಾನ

ಬೆಂಗಳೂರು, ಜು. 1(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗಾದಿಯಿಂದ ಕೆಳಗಿಳಿಯುವ ಇಂಗಿತವನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವರಿಷ್ಠರ ಮುಂದೆ ವ್ಯಕ್ತಪಡಿಸಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

ಕೇಂದ್ರದ ಮುಂದಿರುವ ರಾಜ್ಯದ ಬಾಕಿ ಯೋಜನೆಗಳ ಅನುಷ್ಠಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರ ಸಚಿವರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ಶಿವಕುಮಾರ್ ಕಳೆದ ವಾರ ದೆಹಲಿಯಲ್ಲಿ ಮೂರು ದಿನಗಳ ಕಾಲ ಬಿಡಾರ ಹೂಡಿದ್ದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಪ್ರತ್ಯೇಕವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಸರ್ಕಾರ ಮತ್ತು ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದಾರೆ.



ನಾಯಕತ್ವ ಬದಲಾವಣೆ ಹಾಗೂ ಉಪಮುಖ್ಯಮಂತ್ರಿಗಳ ಸೃಷ್ಟಿಗೆ ಸಂಬಂಧಿಸಿದಂತೆ ಕರ್ನಾಟಕ ಕಾಂಗ್ರೆಸ್‌ನಲ್ಲಿ ಎದ್ದಿರುವ ಬೇಡಿಕೆಗಳ ಬಗ್ಗೆ ಚರ್ಚೆ ನಡೆದಿದೆ ಎನ್ನಲಾಗಿದೆ. ಮುಖ್ಯಮಂತ್ರಿ ಅವರು, ದೆಹಲಿಯಿಂದ

● 9ನೇ ಪುಟಕ್ಕೆ

ಸೂರಜ್ ರೇವಣ್ಣ ಮತ್ತೆರಡು ದಿನ ಸಿಐಡಿ ಪೊಲೀಸ್ ಕಸ್ಟಡಿಗೆ!



ಬೆಂಗಳೂರು: ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ವಿಧಾನ ಪರಿಷತ್ ಸದಸ್ಯ ಸೂರಜ್ ಅವರ ಸಿಐಡಿ ಪೊಲೀಸ್ ಕಸ್ಟಡಿ ಅವಧಿಯನ್ನು ಮತ್ತೆ ಎರಡು ದಿನ ವಿಸ್ತರಿಸಿ ಕೋರ್ಟ್ ಆದೇಶಿಸಿದೆ.

ಸೂರಜ್ ರೇವಣ್ಣ ಅವರ ಪೊಲೀಸ್ ಕಸ್ಟಡಿ ಅವಧಿ ಸೋಮವಾರ ಕೊನೆಗೊಂಡಿತ್ತು. ಹೀಗಾಗಿ ನ್ಯಾಯಾಲಯಕ್ಕೆ ಅವರನ್ನು ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ

● 9ನೇ ಪುಟಕ್ಕೆ

ಮೈಸೂರು ನಗರ, ಜಿಲ್ಲೆಯಲ್ಲಿ ವಾಹನ ಚಾಲಕರ ಮೇಲೆ ಎಐ ಕ್ಯಾಮರಾ ಕಣ್ಣು!

ಸಂಚಾರ ನಿಯಮ ಉಲ್ಲಂಘನೆಗೆ ಮುಲಾಜಿಲ್ಲದೆ ಪ್ರಯೋಗವಾಗುತ್ತೆ 'ದಂಡಾಸ್ತ್ರ'

- ದೂರವಿದ್ದರೂ ನಿಯಮ ಉಲ್ಲಂಘನೆ ಗುರುತಿಸುವ ತೀಕ್ಷ್ಣ ಕ್ಯಾಮರಾಗಳು
- ಎಸ್‌ಎಂಎಸ್ ಮೂಲಕ ಮಾಹಿತಿ, ಮನೆಗೆ ದಂಡದ ನೋಟಿಸ್
- ಪೊಲೀಸ್ ಠಾಣೆ, ಆನ್‌ಲೈನ್‌ನಲ್ಲಿ ದಂಡ ಪಾವತಿಗೆ ಅವಕಾಶ
- 7 ದಿನದಲ್ಲಿ ದಂಡ ಪಾವತಿಸದಿದ್ದರೆ ನ್ಯಾಯಾಲಯದಲ್ಲಿ ಮೊಕದ್ದಮೆ





ಮೈಸೂರಿನ ದೊಡ್ಡ ಗಡಿಯಾರದ ಬಳಿ T ಆಕಾರದ ಕಂಬದಲ್ಲಿ ನಾಲ್ಕು ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಬಲಚಿತ್ರದಲ್ಲಿ ಮೈಸೂರಿನ ಎಸ್ಪಿ ಕಚೇರಿಯಲ್ಲಿ ಆರಂಭಿಸಲಾಗಿರುವ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಸಿಬ್ಬಂದಿ ವಾಹನ ಸಂಚಾರದ ಮೇಲೆ ನಿಗಾ ಇರಿಸಿರುವುದು.

ಮೈಸೂರು, ಜು.1(ಬಿಎಲ್‌ಯು)– ವಾಹನ ಸವಾರರು ಸಂಚಾರ ನಿಯಮಗಳನ್ನು ಇನ್ನು ಮುಂದೆ ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲದಿದ್ದಲ್ಲಿ ಮುಲಾಜಿಲ್ಲದೆ 'ದಂಡಾಸ್ತ್ರ' ಪ್ರಯೋಗವಾಗಲಿದೆ. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 300 ಸ್ವಯಂಚಾಲಿತ ಕೃತಕ ಬುದ್ಧಿಮತ್ತೆ (ಎಐ) ಕ್ಯಾಮರಾ ಸೇರಿದಂತೆ 420 ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರಿಗೆ ಕ್ಯಾಮರಾ ದೃಶ್ಯ ಆಧರಿಸಿ ಇಂದಿನಿಂದ ದಂಡ ವಿಧಿಸಲಾಗುತ್ತಿದೆ.

ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡುವುದು, ಸಿಗ್ನಲ್ ಜಂಪ್ ಮಾಡುವುದು, ಅತೀ ವೇಗದ ಚಾಲನೆ, ಸೀಟ್ ಬೆಲ್ಟ್ ಧರಿಸದಿರುವುದು ಸೇರಿದಂತೆ ಹಲವು ರೀತಿಯ ಸಂಚಾರ ನಿಯಮಗಳ ಉಲ್ಲಂಘನೆ ವೇಳೆ ಸಂಚಾರಿ ಪೊಲೀಸರಿಗೆ ಸಿಕ್ಕಿಬಿದ್ದಾಗ ದಂಡ ಪಾವತಿ ಮಾಡಲಾಗುತ್ತಿತ್ತು. ಒಂದು ವೇಳೆ ಸಂಚಾರಿ ಪೊಲೀಸರನ್ನು ದೂರದಲ್ಲಿ ಗಮನಿಸಿದರೆ ಗಲ್ಲಿಗಳನ್ನು ಸುತ್ತಿ ದಂಡದಿಂದ ಪಾರಾಗುತ್ತಿದ್ದರು. ಆದರೆ ಇನ್ನು ಮುಂದೆ ವಾಹನ ಸವಾರರ ಇದ್ಯಾವುದೇ ಚಾಕಚಕ್ಯತೆ ಕೆಲಸ ಮಾಡಲ್ಲ. ಸಂಚಾರಿ ಪೊಲೀಸರು ಇರಲಿ, ಇಲ್ಲದಿರಲಿ, ವಾಹನ ಸವಾರರ ಸಂಚಾರ ನಿಯಮ ಉಲ್ಲಂಘನೆಯನ್ನು ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ (ANPR- Automatic Number Plate Recognition) ಕ್ಯಾಮರಾಗಳು ಕ್ಷಣಮಾತ್ರದಲ್ಲಿ ಸೆರೆ ಹಿಡಿಯಲಿವೆ. ಈ ಮೂಲಕ ಸಂಚಾರ ನಿಯಮ ಉಲ್ಲಂಘನೆ ಮೇಲೆ ಕ್ಯಾಮರಾಗಳು ಹದ್ದಿನ ಕಣ್ಣಿಟ್ಟಿರುತ್ತದೆ. ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರ ತುಂಬಾ ದೂರದಲ್ಲಿದ್ದರೂ ಅತ್ಯಾಧುನಿಕ ತಂತ್ರಜ್ಞಾನದ ಈ ಕ್ಯಾಮರಾಗಳು ಗುರುತಿಸುತ್ತವೆ. ಇದರಿಂದ ನಾವು ದೂರದಲ್ಲಿದ್ದೇವೆ, ಇದರಿಂದ ಕ್ಯಾಮರಾ ಕಣ್ಣಿಗೆ ಸಿಕ್ಕಿ ಬೀಳುವುದಿಲ್ಲ ಎಂಬ ಭ್ರಮೆ ವಾಹನ ಸವಾರರಿಗೆ ಬೇಡ.

ಆನ್‌ಲೈನ್ ವೆಬ್‌ಸೈಟ್: https://payfine.mchallan.com:7271

ಈಗಾಗಲೇ ಮೈಸೂರು ನಗರದಲ್ಲಿ 120 ರೆಡ್‌ಲೈಟ್ ವೈಲೇಷನ್ ಡಿಟೆಕ್ಷನ್ ಕ್ಯಾಮರಾಗಳ ಜೊತೆಗೆ 250 ಆರ್ಟಿಫಿಷಿಯಲ್ ಇಂಟಲಿಜೆಂಟ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳು ಅಳವಡಿಸಿದ ದಿನದಿಂದಲೇ ಕಾರ್ಯನಿರ್ವಹಿಸುತ್ತಿದ್ದು, ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರಿಗೆ ದಂಡದ ರಸೀದಿ ಮನೆಗೆ ತಲುಪಲಿದೆ ಎಂದು ಡಿಸಿಪಿ ಪಿ.ಜಾಹ್ನವಿ ತಿಳಿಸಿದರು. ಮೈಸೂರು ಜಿಲ್ಲೆಯ ತಾಲೂಕು ಮಟ್ಟದಲ್ಲಿ ಯಾವುದೇ ವ್ಯವಸ್ಥೆ ಈತನಕ ಇರಲಿಲ್ಲ. ಆದರೆ ಈಗ ಮೈಸೂರು ಜಿಲ್ಲೆಯ 23 ಸ್ಥಳಗಳಲ್ಲಿ 50 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳ ದೃಶ್ಯ ಆಧರಿಸಿ ಇಂದಿನಿಂದಲೇ ದಂಡ ವಿಧಿಸುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಮೈಸೂರು ಹೆಚ್ಚುವರಿ ಜಿಲ್ಲಾ

● 9ನೇ ಪುಟಕ್ಕೆ

ಮಲಬಾರ್ ಗೋಲ್ಡ್ & ಡೈಮಂಡ್ಸ್ NUWA ಡೈಮಂಡ್ ಕಲೆಕ್ಷನ್ ಅನಾವರಣ



ಮೈಸೂರಿನ ಸಬ್‌ಅರ್ಬನ್ ಬಸ್ ನಿಲ್ದಾಣದ ಸಮೀಪವಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ಶೋರೂಮ್‌ನಲ್ಲಿ 'NUWA' ಹೆಸರಿನ ಇತ್ತೀಚಿನ ವಜ್ರ ಆಭರಣ ಸಂಗ್ರಹವನ್ನು ಅನಾವರಣಗೊಳಿಸಲಾಯಿತು.

ಮೈಸೂರು,ಜು.1–ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣದ ಸಮೀಪವಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ಶೋರೂಮ್‌ನಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ 'NUWA' ಹೆಸರಿನ ಇತ್ತೀಚಿನ ವಜ್ರ ಆಭರಣ ಸಂಗ್ರಹವನ್ನು ಅನಾವರಣಗೊಳಿಸಲಾಯಿತು. ವಿಶೇಷ ಗ್ರಾಹಕರು ಹಾಗೂ ರೂಪದರ್ಶಿ ಮಿಸ್ ಪ್ರಶಸ್ತಿ ಎಸ್.ರಾಜ್, ಮಿಸ್ ಆತ್ಮಿಕಾ ಕಾವಲಿ, ಮಿಸ್ ಅನುಷಾ ಕಾವಲಿ, ಭೂಮಿಕಾ ರಾಜ್ ಮತ್ತು ದಕ್ಷಿಣ ವಲಯ ಮುಖ್ಯಸ್ಥ ಹಾಗೂ ಮೈಸೂರು ಶೋರೂಂ ಸ್ಟೋರ್ ಹೆಡ್ ಶರಫುದ್ದೀನ್ ಉಪಸ್ಥಿತರಿದ್ದರು.

ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂಪಿ ಅಹಮ್ಮದ್ ಮಾತನಾಡಿ, ಪ್ರಕೃತಿ ಮತ್ತು ಮಹಿಳೆಯರ ಅದಮ್ಯ ಮನೋಭಾವವನ್ನು ಆಚರಿಸುವ NUWA ಸಂಗ್ರಹವನ್ನು ಪರಿಚಯಿಸುತ್ತಿರುವುದಕ್ಕೆ ಹೆಮ್ಮೆಯಾಗುತ್ತಿದೆ. ಈ ಸಂಗ್ರಹದಲ್ಲಿರುವ ಪ್ರತಿಯೊಂದು ತುಣುಕನ್ನು ಅಪಾರ ಕಾಳಜಿ ಮತ್ತು ನಿಖರತೆಯಿಂದ ರಚಿಸಲಾಗಿದೆ, ಇದು ಪ್ರಕೃತಿಯ ಸಂಕೀರ್ಣ ಸೌಂದರ್ಯ ಮತ್ತು ಮಹಿಳೆಯರ ಸ್ಥಿತಿಸ್ಥಾಪಕತ್ವವನ್ನು ಪ್ರತಿಬಿಂಬಿಸುತ್ತದೆ. ಕರೀನಾ ಕಪೂರ್ ಖಾನ್ NUWAಅನ್ನು ಪ್ರತಿನಿಧಿಸುವ ಅನುಗ್ರಹ ಮತ್ತು ವಿಸ್ಮಯವನ್ನು ಸಂಪೂರ್ಣವಾಗಿ ಪ್ರತಿನಿಧಿಸುವುದರಿಂದ ಈ ಸಂಗ್ರಹ ಪ್ರಾರಂಭಿಸುತ್ತಿರುವುದು ಹರ್ಷದ ಸಂಗತಿ.

ಮೈಸೂರು ಅಂಚೆ ವಿಭಾಗದಿಂದ ಬ್ಯಾರಿಕೇಡ್ ಹಸ್ತಾಂತರ



ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಡಾ.ಏಂಜಲ್‌ರಾಜ್ ಬ್ಯಾರಿಕೇಡ್‌ಗಳನ್ನು ಮೈಸೂರು ಟ್ರಾಫಿಕ್ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ ಅವರಿಗೆ ಹಸ್ತಾಂತರಿಸಿದರು. ಮೈಸೂರು ಪೂರ್ವ ಉಪವಿಭಾಗದ ಅಂಚೆ ನಿರೀಕ್ಷಕ ಅನೂಪ್‌ರಾಯ್, ಮಾರುಕಟ್ಟೆ ವ್ಯವಸ್ಥಾಪಕ ಡಾ.ಸುರೇಶ್‌ಕುಮಾರ್ ಹಾಜರಿದ್ದರು.

ಯುವ ಓದುಗರ ಸಾಹಿತ್ಯ ಪ್ರೇಮ!



'ಅಪರಿಚಿತ ಓದುಗರು' ಅಭಿಯಾನವು ಮೈಸೂರಿನಲ್ಲಿ ಸೋಮವಾರ ನಡೆಯಿತು.


ಮೈಸೂರು, ಜು. 1–ಬೆಂಗಳೂರಿನಲ್ಲಿ ಆರಂಭವಾದ 'ಅಪರಿಚಿತ ಓದುಗರು' ಅಭಿಯಾನವು ಮೈಸೂರಿನಲ್ಲೂ ಯುವ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಸಾಂಸ್ಕೃತಿಕ ನಗರಿಯ ವಿದ್ಯಾರ್ಥಿಗಳ ತಂಡವೊಂದು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್ಸ್ಟಾಗ್ರಾಮ್ ಹಾಗೂ ವಾಟ್ಸಾಪ್‌ಗಳಲ್ಲಿ ಮೈಸೂರು ಸಾಹಿತ್ಯ ಓದುಗರ ಗ್ರೂಪನ್ನು ತೆರೆದಿದ್ದಾರೆ. ಇದರಲ್ಲಿ ಯುವ ಓದುಗರ ಜೊತೆಗೆ ಹಿರಿಯರನ್ನು ಸೇರಿಸಿಕೊಂಡು ಮೈಸೂರಿನಲ್ಲಿ ಓದುಗ ಬಳಗವನ್ನು ಸೃಷ್ಟಿಸಿದ್ದಾರೆ.

ಮೈಸೂರು ಆಕಾಶವಾಣಿಯ ಎದುರಿಗಿರುವ ಚೆಲುವಾಂಬ ಉದ್ಯಾನವನದಲ್ಲಿ ತಿಂಗಳಿಗೆ ಒಮ್ಮೆ ಸೇರಿ ತಾವು ಇಷ್ಟಪಟ್ಟು ತಂದಂತಹ ಪುಸ್ತಕಗಳನ್ನು ಓದುತ್ತಾರೆ. ಅಷ್ಟೇ ಅಲ್ಲದೇ, ಕೃತಿಗಳ ಬಗ್ಗೆ ಚರ್ಚೆ ಮಾಡುವುದು ಸಾಹಿತ್ಯ ಹಾಗೂ ಸಂಸ್ಕೃತಿ ಬಗ್ಗೆ ರಸಪ್ರಶ್ನೆಗಳನ್ನು ಏರ್ಪಡಿಸುವುದು. ಈ ರೀತಿ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡುತ್ತಾರೆ. ಪ್ರತಿ ಭಾನುವಾರ ಏನಿಲ್ಲ ಅಂದ್ರೂ 40 ರಿಂದ 50 ಜನ ಓದುಗರು ಒಂದೆಡೆ ಸೇರುತ್ತಾರೆ.

ಅದರಂತೆ ಈ ತಿಂಗಳ ಆಹ್ವಾನಿತ ಲೇಖಕರು ಅನೇಕ ಪ್ರಶಸ್ತಿಗಳಿಗೆ ಭಾಜನವಾದ ಜನಪ್ರಿಯ ಪ್ರವಾಸ ಕಥನ 'ಜಗವ ಸುತ್ತುವ ಮಾಯೆ' ಯ ಲೇಖಕ ಸುಚಿತ್ರಾ ಹೆಗಡೆ ಮತ್ತು ಯುವ ಬರಹಗಾರ ಮಣಿಕಂಠ ತ್ರಿಶಂಕರ್ ಭಾಗವಹಿಸಿದ್ದರು. ತಮ್ಮ ಕೃತಿಯ ಹಿಂದಿನ ಕಥೆಯನ್ನು ಹೇಳುತ್ತಾ ಪುಸ್ತಕದ ಕುರಿತು ಸಂವಾದದಲ್ಲಿ ಭಾಗಿಯಾದ ಲೇಖಕಿ ಸುಚಿತ್ರಾ ಹೆಗಡೆ ಯುವ ಜನತೆಯ ಸೃಜನಶೀಲತೆಗೆ ಮತ್ತು ಓದಿನ ಪ್ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇಂಥದ್ದೊಂದು ಸ್ಫೂರ್ತಿಯುತ ಸಾಹಿತ್ಯ ಚಟುವಟಿಕೆಯನ್ನು ಆರಂಭಿಸಿದ ಬೆಂಗಳೂರಿನ ಅವ್ವ ಪುಸ್ತಕಾಲಯದ ಅನಂತ ಕುಣಿಗಲ್, ಮೈಸೂರಿನ ಯುವ ಮುಂದಾಳು ಕಿರಣ ಪಿ ಕೌಶಿಕ್ ಮತ್ತು ಸಾಂಸ್ಕೃತಿಕ ನಗರಿ ಮೈಸೂರಿನ ಸಾಹಿತ್ಯ ಪ್ರೇಮಿಗಳನ್ನು ಶ್ಲಾಘಿಸಿದರು.

ಶಾಲಾ ಮಂತ್ರಿ ಮಂಡಲ ರಚನೆ



ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ಶಾಲೆಯಲ್ಲಿ ಶಾಲಾ ಮಂತ್ರಿ ಮಂಡಲ ಸಮಾರಂಭ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಉದ್ಯಮಿ ಪಿ.ವಿ. ನಾಗೇಶ್, ವಿದ್ಯಾರ್ಥಿಗಳಿಗೆ ಜವಾಬ್ದಾರಿ ಬಗ್ಗೆ ತಿಳಿಹೇಳಿದರು. ಶಾಲೆಯ ಆಡಳಿತ ಮಂಡಳಿ ಜಂಟಿ ಕಾರ್ಯದರ್ಶಿ ಎಸ್.ವೈ.ಹೊಂಬಾಳ್, ಅಧ್ಯಕ್ಷ ಬಿ.ಕೆ.ಸುರೇಶ್‌ಬಾಬು, ಕಾರ್ಯದರ್ಶಿ ಎಮ್.ಎನ್.ಮಹೇಂದ್ರ, ಸದಸ್ಯ ಆರ್.ಕೆ.ರಾಜು, ಕಾರ್ಯಾಧ್ಯಕ್ಷ ಎಮ್.ಎನ್. ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್.ಸುಧಾ ಉಪಸ್ಥಿತರಿದ್ದರು.

ಸಿ.ಆರ್.ಕೃಷ್ಣಗೆ ಪಿಎಚ್.ಡಿ ಪದವಿ



ಮೈಸೂರು, ಜು.1– ಡಾ.ಎನ್.ರವಿಕುಮಾರ್ ಮಾರ್ಗದರ್ಶನದಲ್ಲಿ ಸಿ.ಆರ್. ಕೃಷ್ಣ ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಐಜಿಆರ್‌ಎಂಎಸ್‌ನಲ್ಲಿ ವಿಶ್ವದರ್ಜೆಯ ಮ್ಯೂಸಿಯಂ ಸ್ಥಾಪನೆ

ಹಳೇ ಡಿಸಿ ಕಚೇರಿ ಕಟ್ಟಡದಲ್ಲಿ ಉದ್ದೇಶಿತ ಕಲಾ ಗ್ಯಾಲರಿಗೆ ಡಿಪಿಆರ್ ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಸಲ್ಮಾ ಫಾಹಿಮ್ ಸೂಚನೆ

ಮೈಸೂರು, ಜು.1 (ಆರ್‌ಕೆ)–ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ (ಐಜಿಆರ್‌ಎಮ್‌ಎಸ್) ದಲ್ಲಿ ವಿಶ್ವದರ್ಜೆಯ ಕಲಾ ಗ್ಯಾಲರಿ ಮಾಡಲಾಗುವುದೆಂದು ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಸಲ್ಮಾ ಫಾಹಿಮ್ ಅವರು ತಿಳಿಸಿದ್ದಾರೆ.

ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಪ್ರವಾಸಿ ತಾಣಗಳನ್ನು ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಪುನಶ್ಚೇತನಗೊಳಿಸಿ ಪ್ರಪಂಚದಾದ್ಯಂತ ಪ್ರವಾಸಿಗರನ್ನು ಸಾಂಸ್ಕೃತಿಕ ನಗರಿಯತ್ತ ಸೆಳೆಯುವ ಸಲುವಾಗಿ ಇಂದು ಮೈಸೂರಿಗೆ ಆಗಮಿಸಿದ್ದ ಅವರು, ಇರ್ವಿನ್ ರಸ್ತೆಯ ಸಬರ್ಬನ್ ಬಸ್ ನಿಲ್ದಾಣದ ಸಮೀಪವಿರುವ ವೆಲ್ಲಿಂಗ್‌ಟನ್‌ನ ಮ್ಯೂಸಿಯಂ ಹಾಗೂ ಐಜಿಆರ್ ಎಂಎಸ್‌ಗೆ ಭೇಟಿ ನೀಡಿ, ಪರಿಶೀಲಿಸಿದರು.

ದಕ್ಷಿಣ ವಲಯ ಕೇಂದ್ರದ ಇಂದಿರಾ ಗಾಂಧಿ ರಾಷ್ಟ್ರೀಯ, ಮಾನವ ಸಂಗ್ರಹಾಲಯವು ದೇಶದ ಕಲೆ, ಸಂಸ್ಕೃತಿ, ಸಂಪ್ರದಾಯ, ಐತಿಹಾಸಿಕ ಸಮೃದ್ಧತೆಯನ್ನು ಪ್ರದರ್ಶಿಸುವ ಕೇಂದ್ರವಾಗಿರುವುದರಿಂದ ಅದನ್ನು ವಿಶ್ವಮಟ್ಟದ ಸಾಂಸ್ಕೃತಿಕ ಸಂಗ್ರಹಾಲಯವನ್ನಾಗಿ ರೂಪಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.



ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಸಲ್ಮಾ ಫಾಹಿಮ್ ಅವರು ಸೋಮವಾರ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ವೆಲ್ಲಿಂಗ್‌ಟನ್ ಹೌಸ್‌ಗೆ ಭೇಟಿ ನೀಡಿದ್ದರು. ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಹಾಗೂ ಹೆರಿಟೇಜ್ ಆಯುಕ್ತ ಎ.ದೇವರಾಜು ಅವರನ್ನು ಚಿತ್ರದಲ್ಲಿ ಕಾಣಬಹುದು.

ಅದೇ ಆವರಣದಲ್ಲಿರುವ ವೆಲ್ಲಿಂಗ್‌ಟನ್ ಹೌಸ್ ಮ್ಯೂಸಿಯಂ ವೀಕ್ಷಿಸಿದ ಫಾಹಿಮ್ ಅವರು, ಮಕ್ಕಳ ಸ್ನೇಹಿ ವಸ್ತು ಪ್ರದರ್ಶನವನ್ನಾಗಿ ಪ್ರವಾಸಿ ತಾಣವನ್ನಾಗಿ ಪರಿವರ್ತಿಸಲು ವಿಫುಲ ಅವಕಾಶವಿರುವುದರಿಂದ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಿದ್ಧಪಡಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಹಳೇ ಜಿಲ್ಲಾಧಿಕಾರಿ ಕಚೇರಿ ಪಾರಂಪರಿಕ ಕಟ್ಟಡಕ್ಕೆ ಭೇಟಿ ನೀಡಿದ ಪ್ರಧಾನ ಕಾರ್ಯದರ್ಶಿಗಳು, ಪಾರಂಪರಿಕ ಶೈಲಿಗೆ ಧಕ್ಕೆಯಾಗದಂತೆ ಕಟ್ಟಡವನ್ನು ರಿಪೇರಿ ಮಾಡಿಸಿ ಸಂರಕ್ಷಿಸಬೇಕು. ಅಲ್ಲಿ ಕಲಾ ಗ್ಯಾಲರಿ ಆರಂಭಿಸಿ ಸಾರ್ವಜನಿಕರು, ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸುವುದು ಸೂಕ್ತ. ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಂಡ ನಂತರ ಡಿಪಿಆರ್ ತಯಾರಿಸಿ ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಅನುದಾನದಲ್ಲಿ ಕಟ್ಟಡಕ್ಕೆ ಕಾಯಕಲ್ಪ ನೀಡಿ ಅಲ್ಲಿ ಪಾರಂಪರಿಕ ಮ್ಯೂಸಿಯಂ ಅಥವಾ ಕಲಾ ಗ್ಯಾಲರಿ ಸ್ಥಾಪಿಸಬಹುದಾಗಿದ್ದು, ಈ ನಿಟ್ಟಿನಲ್ಲಿ ಕ್ರಮ ವಹಿಸಿ ಎಂದು ಸಲ್ಮಾ ಫಾಹಿಮ್ ತಿಳಿಸಿದರು.

ಅಲ್ಲಿಂದ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ (ಕೆಇಎ)ಕ್ಕೂ ಭೇಟಿ ನೀಡಿ ಆವರಣದ ಪಾರಂಪರಿಕ ಇಲಾಖಾ ಆಯುಕ್ತರ ಕಚೇರಿಯ ಮ್ಯೂಸಿಯಂ ಅನ್ನು ಪರಿಶೀಲಿಸಿದ ಅವರು, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಪಾರಂಪರಿಕ ಆಯುಕ್ತ ಎ.ದೇವರಾಜು, ಐಜಿಆರ್ ಎಂಎಸ್‌ನ ವಿಜಯ್ ಮೋಹನ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಕೆಆರ್‌ಎಸ್ ಸುತ್ತಮುತ್ತ ಟ್ರಯಲ್ ಬ್ಲಾಸ್ಟ್‌ಗೆ ಅವಕಾಶ ಕೊಡಲ್ಲ

ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಘೋಷಣೆ



ನಾಗೇಂದ್ರ

ಮೈಸೂರು, ಜು.1(ಜಿಎ)– ನ್ಯಾಯಾಲಯ ಆದೇಶಿಸಿದೆ ಎಂಬ ಕಾರಣ ನೀಡಿ ಕೆಆರ್‌ಎಸ್ ಸುತ್ತಮುತ್ತ ಟ್ರಯಲ್ ಬ್ಲಾಸ್ಟ್ ಮಾಡಲು ಅಧಿಕಾರಿ ವರ್ಗ ಸಿದ್ಧತೆ ನಡೆಸಿದ್ದು, ಇದಕ್ಕೆ ರೈತ ಸಂಘ ಅವಕಾಶ ಕೊಡುವುದಿಲ್ಲ ಎಂದು ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಘೋಷಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕೋರ್ಟ್ ಸಹ ಗಣಿಗಾರಿಕೆಗಿಂತ ಜಲಾಶಯ ಮುಖ್ಯ ಎಂದು ಹೇಳಿದೆ. ಆದರೆ ವೈಜ್ಞಾನಿಕ ಕಾರಣಕ್ಕಾಗಿ ಪ್ರಾಯೋಗಿಕವಾಗಿ ಸ್ಫೋಟ ನಡೆಸುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ರೀತಿಯ ಪ್ರಯತ್ನಗಳಿಗೆ ರೈತರು ವಿರೋಧ ವ್ಯಕ್ತಪಡಿಸಿ ವಾಪಸು ಕಳುಹಿಸಿದ್ದರು. ಈಗಲೂ ಮತ್ತೆ ಇದಕ್ಕಾಗಿ ಬರುವ ಸೂಚನೆಯಿದ್ದು, ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಟ್ರಯಲ್ ಬ್ಲಾಸ್ಟ್ ಕಂಪನದಿಂದ ಈಗಲ್ಲದಿದ್ದರೂ ಮುಂದೆಂದಾದರೂ ಜಲಾಶಯಕ್ಕೆ ಅಪಾಯ ಒದಗಬಹುದಾಗಿದೆ. ಆದ್ದರಿಂದ ಸರ್ಕಾರ ಜನರ ಅಭಿಪ್ರಾಯವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಕೆಲಸ ಮಾಡಬೇಕು. ಇನ್ನು ಟ್ರಯಲ್ ಬ್ಲಾಸ್ಟ್ ನಡೆಸಬೇಕೆಂಬ ಸರ್ಕಾರದ ನಿರ್ಧಾರದ ಬಗ್ಗೆ ನಮಗೆ ಅನುಮಾನವಿದೆ. ವ್ಯತಿರಿಕ್ತ ವರದಿ ಪಡೆದು ಗಣಿಗಾರಿಕೆಗೆ ಅವಕಾಶ ದೊರಕಿಸುವ ಹುನ್ನಾರ ಇದೆ ಎಂಬ ಶಂಕೆ ಕಾಡುತ್ತಿದೆ ಎಂದು ಬಡಗಲಪುರ ನಾಗೇಂದ್ರ ಹೇಳಿದರು.

ಸರ್ಕಾರಗಳ ಜನವಿರೋಧಿ ನೀತಿ ವಿರುದ್ಧ ಚಳವಳಿ ಗಟ್ಟಿಗೊಳಿಸಲು ಜು.10ರಂದು ದೆಹಲಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಕರೆದಿರುವ ಸಭೆಯಲ್ಲಿ ನಾವು ಭಾಗವಹಿಸುತ್ತಿದ್ದೇವೆ. ರಾಜ್ಯದಲ್ಲಿ ರೈತ ಸಂಘಟನೆ ಬಲಗೊಳಿಸಲು ಮನೆಗೊಬ್ಬ ಸದಸ್ಯ, ಊರಿಗೊಬ್ಬ ಕಾರ್ಯಕರ್ತ ಎಂಬ ಅಭಿಯಾನ ಆರಂಭಿಸಿ, ಮುಂದಿನ ಎರಡು ವರ್ಷದಲ್ಲಿ ಸುಮಾರು ಎರಡು ಕೋಟಿ ಸದಸ್ಯರನ್ನು ಹೊಂದುವ ಗುರಿ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ನಾಗನಹಳ್ಳಿ ವಿಜೇಂದ್ರ, ಪ್ರಸನ್ನ ಎನ್.ಗೌಡ ಉಪಸ್ಥಿತರಿದ್ದರು.

ಪೌರಕಾರ್ಮಿಕರ ನೇಮಕಾತಿ ನೆಪದಲ್ಲಿ ಸುಲಿಗೆ ಯತ್ನ

ಮೈಸೂರು,ಜು.1(ಜಿಎ)–ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ 252 ಪೌರಕಾರ್ಮಿಕರ ನೇಮಕಾತಿಗೆ ಅರ್ಜಿ ಕರೆಯಲಾಗಿದ್ದು, ಇದನ್ನು ನೆಪವಾಗಿರಿಸಿಕೊಂಡು ಕೆಲವರು ಹಣ ಸುಲಿಗೆ ಮಾಡಲು ಯತ್ನಿಸುತ್ತಿದ್ದಾರೆಂಬ ಮಾಹಿತಿ ಬಂದಿದೆ. ಹೀಗಾಗಿ ಬಡ ಪೌರಕಾರ್ಮಿಕರು ಇದಕ್ಕೆ ಬಲಿಯಾಗಬಾರದೆಂದು ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷ ನಾರಾಯಣ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೇಮಕಾತಿ ಹಿರಿತನದ ಆಧಾರದ ಮೇಲೆ ನಡೆಯಲಿದೆ. ಅಧಿಕಾರಿ ವರ್ಗ ಸಹಾ ಪಾರದರ್ಶಕ, ನಿಯಮಾನುಸಾರವಾಗಿ, ಭ್ರಷ್ಟಾಚಾರ ರಹಿತವಾಗಿ ನೇಮಕಾತಿ ನಡೆಸಬೇಕು. ಸಿಎಂ ಸಿದ್ದರಾಮಯ್ಯ ಅವರು ಬಜೆಟ್ ಹಾಗೂ ಪಕ್ಷದ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಅನ್ವಯ ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರನ್ನು ಏಕಕಾಲದಲ್ಲಿ ಕಾಯಂಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಸಂಬಂಧ ಹಣಕಾಸು ಇಲಾಖೆಗೂ ಕಡತ ಮಂಡನೆಯಾಗಿದೆ. ಆದ್ದರಿಂದ ನಗರ ಹಾಗೂ ರಾಜ್ಯದಲ್ಲಿನ ಎಲ್ಲ ಪೌರಕಾರ್ಮಿಕರು ಆತಂಕ, ಸುಳ್ಳು ವದಂತಿಗಳಿಗೆ ಬಲಿಯಾಗಬಾರದೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಾಗರಾಜು, ಆರ್.ದಾಸು, ಆರ್.ಶಿವಣ್ಣ ಆರ್.ಲಕ್ಷ್ಮಣ್, ಯತಿರಾಜ್ ಮತ್ತಿತರರು ಉಪಸ್ಥಿತರಿದ್ದರು.

ಜು.5ರಿಂದ ಉಚಿತ ತೆರಿಗೆ ಸಮಾಲೋಚನಾ ಎಕ್ಸ್‌ಪೋ

ಮೈಸೂರು, ಜು.1(ಜಿಎ)–ರಾಮ್ ಪತಂಗೆ ಅಂಡ್ ಕಂಪನಿ ವತಿಯಿಂದ ಜು.5ರಿಂದ 7ರವರೆಗೆ ಕಂಪನಿ ಆವರಣದಲ್ಲಿ ಉಚಿತ ತೆರಿಗೆ ಸಮಾಲೋಚನೆ ಎಕ್ಸ್‌ಪೋ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಿಇಓ ಹಣಕಾಸು ತಜ್ಞ ಟಿ.ಆರ್. ರಾಮ್‌ಕೀರ್ತ್ ಈ ವಿಷಯ ತಿಳಿಸಿ, ಎಕ್ಸ್‌ಪೋದಲ್ಲಿ ತೆರಿಗೆ ಪಾವತಿದಾರರಿಗೆ ವಿವಿಧ ತೆರಿಗೆ, ವೈಯಕ್ತಿಕ ಮತ್ತು ಕಾರ್ಪೋರೇಟ್ ತೆರಿಗೆ ಪಾವತಿ ವಿಷಯದ ಮಾಹಿತಿ ನೀಡಲಾಗುವುದು. ಆದಾಯ ತೆರಿಗೆ ರಿಟರ್ನ್ ಸಲ್ಲಿಸುವವರು ಅದರ ಪ್ರಯೋಜನ ಏನೆಂಬ ಬಗ್ಗೆ ಅರಿವು ಹೊಂದಿರುವುದು ಅಗತ್ಯ. ಇದರಿಂದಾಗಿ ದೇಶದ ಆರ್ಥಿಕತೆಗೆ ಪ್ರಯೋಜನವಾಗುತ್ತದೆ. ಅಲ್ಲದೆ, ಆದಾಯ ತೆರಿಗೆ, ಹೂಡಿಕೆ ಆಯ್ಕೆ ಮತ್ತು ಹಣಕಾಸು ಸಾಲಗಾರರ ಬಗ್ಗೆಯೂ ಉಚಿತ ಮಾಹಿತಿ ಇಲ್ಲಿ ದೊರೆಯಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶೋಮಿಕಾ ಉಪಸ್ಥಿತರಿದ್ದರು.

ಪರಿಸರ ಪ್ರೀತಿ ಕವಿಗೋಷ್ಠಿ

ಮೈಸೂರು,ಜು.1–ಒಲವು ಫೌಂಡೇಷನ್ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಪರಿಸರ ಪ್ರೀತಿ ಕವಿಗೋಷ್ಠಿ ಹಾಗೂ ಪರಿಸರ ಸ್ನೇಹಿ ಸಾಧಕರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ. ವಾಚಿಸುವ ಕವನವು 12 ಸಾಲುಗಳು ಇರಬೇಕು. ಜು.7ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆಯಲಿದೆ. ಕವನ ವಾಚಿಸುವ ಆಸಕ್ತ ಕವಿಗಳು ಜು.4 ರೊಳಗೆ ವಾಟ್ಸಾಪ್ ಸಂಖ್ಯೆ 888404 5858, 94489–42998 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಳೆಯ ನೆನಪು ಹೊಸ ಹುರುಪು ನೃತ್ಯ ಸಂಗಮ ಕಾರ್ಯಕ್ರಮ



ಓಂ ಶ್ರೀ ಸಾಯಿ ರಾಮ್ ಸಾಂಸ್ಕೃತಿಕ ಕಲಾವೇದಿಕೆ ಬೆಂಗಳೂರು ಹಾಗೂ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಜಗನ್ಮೋಹನ ಪ್ಯಾಲೇಸ್‌ನಲ್ಲಿ ಓಲ್ಡ್ ಇಸ್ ಗೋಲ್ಡ್ (ಹಳೆಯ ನೆನಪು ಹೊಸ ಹುರುಪು) ನೃತ್ಯ ಸಂಗಮ ಕಾರ್ಯಕ್ರಮ ಸೋಮವಾರ ನಡೆಯಿತು.

ಮೈಸೂರು, ಜು. 1– ಓಂ ಶ್ರೀ ಸಾಯಿ ರಾಮ್ ಸಾಂಸ್ಕೃತಿಕ ಕಲಾವೇದಿಕೆ ಬೆಂಗಳೂರು ಹಾಗೂ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಜಗನ್ಮೋಹನ ಪ್ಯಾಲೇಸ್‌ನಲ್ಲಿ ಓಲ್ಡ್ ಇಸ್ ಗೋಲ್ಡ್ (ಹಳೆಯ ನೆನಪು ಹೊಸ ಹುರುಪು) ನೃತ್ಯ ಸಂಗಮ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಲಾವಿದರಾದ ಜೂನಿಯರ್ ಮಾಲಾಶ್ರೀ, (ಮೈಸೂರು ಮಂಜುಳಾ), ಜೂನಿಯರ್ ಅಂಬರೀಶ್, ಜೂನಿಯರ್ ರಕ್ಷಿತಾ, ಜೂನಿಯರ್ ರಾಜ್‌ಕುಮಾರ್, ಜೂನಿಯರ್ ವಿಷ್ಣುವರ್ಧನ್, ಹಾಸ್ಯನಟರಾದ ಎಂ.ಎನ್. ಸುರೇಶ್, ಮನ್ವಿತಾ ರಾಜ್, ಡಿಂಗ್ರಿ ನಾಗರಾಜ್, ಹಾಸ್ಯ ನಟಿ ರೇಖಾದಾಸ್, ಜೂನಿಯರ್ ಜಗ್ಗೇಶ್ ಮುಂತಾದ ಹಾಸ್ಯ ಕಲಾವಿದರು ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಲಯನ್ ಸುರೇಶ್ ಟಿ. (ಗೋಲ್ಡ್), ಗೌರವಾಧ್ಯಕ್ಷ ರವಿಪ್ರಕಾಶ್, ಲಯನ್ ಪ್ರಮೀಳಾ, ಡಾ.ನಾಗರಾಜ್ ವಿ ಭೈರಿ, ಡಾ.ಶೋಭಾ, ವೈದ್ಯಕೀಯ ಅಧೀಕ್ಷಕ (ಕೆ ಆರ್ ಹಾಸ್ಪಿಟಲ್), ಪೂರ್ಣಚಂದ್ರ ತೇಜಸ್ವಿ, ಡಾ.ಚೇತನ್, ಡಿ.ಟಿ.ಪ್ರಕಾಶ್, ಕೆಆರ್.ಮಿಲ್ ಶಿವಣ್ಣ ಲಕ್ಷ್ಮಿಪತಿ ಬಾಲಾಜಿ, ಮಾಧುರಿ ಜೈನ, ಲೋಕೇಶ್ ರಾಮನಾಥಪುರ, ಮಹೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.07.2024 ಮಂಗಳವಾರ, ಮಳೆ ನಕ್ಷತ್ರ: ಆರ್ದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.


■ **ಮೈಸೂರು ವಿಶ್ವವಿದ್ಯಾನಿಲಯ, ಬಟಾನಿಕಲ್ ಸೊಸೈಟಿ, ಬಾಟ್ನಿ ಅಧ್ಯಯನ ವಿಭಾಗ :** ಇತ್ತೀಚಿನ ಅಡ್ವಾನ್ಸ್ಡ್ ಸೀಡ್ ಸೈನ್ಸ್, ಟೆಕ್ನಾಲಜಿ ಮತ್ತು ಪರಿಸರ ಬಯಾಲಜಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಅರುಣಾಚಲ ವಿವಿ ವಿಶ್ರಾಂತ ಉಪಕುಲಪತಿ ಡಾ. ಬಿ. ಮೋಹನ್ ಕುಮಾರ್, ಮುಖ್ಯ ಅತಿಥಿಗಳು : ಡಾ. ಕೆ.ಆರ್. ಶಿವಣ್ಣ, ಡಾ. ಯು.ಎಂ. ಚಂದ್ರಶೇಖರ, ಡಾ. ಸುದೀಶಾ ಜಗದೀಶ್, ಡಾ. ಎಲ್. ರಾಜಣ್ಣ, ಅಧ್ಯಕ್ಷತೆ : ಪ್ರೊ. ಡಿ. ಸೋನೆರ್ ನಂದಪ್ಪ, ಉಪಸ್ಥಿತರು : ಪ್ರೊ. ರಾಜ್‌ಕುಮಾರ್ ಹೆಚ್. ಗರಂಪಲ್ಲಿ, ಪ್ರೊ. ಕೆ.ಎನ್. ಅಮೃತೇಶ್, ಸ್ಥಳ: ಲೀನಿಯರ್ಸ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ :** ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತ ದಿನ ಅಂಗವಾಗಿ ಮನೆ ಮನೆಗೆ ತೆರಳಿ ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ ಬಟ್ಟೆ ಬ್ಯಾಗ್ ಬಳಸಿ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ಸಹಾಯಕ ಆಯುಕ್ತ ಮಂಜುನಾಥ್ ರೆಡ್ಡಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಹಿರಿಯ ಆರೋಗ್ಯ ನಿರೀಕ್ಷಕ ಶಿವಪ್ರಸಾದ್, ಸ್ಥಳ: ಚಾಮುಂಡಿಪುರಂ ವೃತ್ತ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಎಸ್‌ಟಿ ಘಟಕದ ಅಧ್ಯಕ್ಷರಾದ ನಾಗವಾಲ ಮಹೇಶ್ ಅಧಿಕಾರ ಸ್ವೀಕಾರ ಸಮಾರಂಭ, ಅಧ್ಯಕ್ಷತೆ : ಡಿಸಿಸಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉಪಸ್ಥಿತರು : ಶಾಸಕ ತನ್ವೀರ್ ಸೇಠ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಘಟಕದ ರಾಜ್ಯಾಧ್ಯಕ್ ವಿಜಯ ನಾಯಕ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ ಜನ್ಮದಿನೋತ್ಸವ, ವಚನ ಸಂರಕ್ಷಣಾ ದಿನಾಚರಣೆ ಹಾಗೂ ಗುರುವಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಬಸವತತ್ವ ಪ್ರವಚನಕಾರರಾದ ಡಾ. ಮಾತೆ ಬಸವಾಂಜಲಿದೇವಿ ಪುಷ್ಪಾರ್ಚನೆ : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಡಾ.ಬಿ.ಆರ್. ನಟರಾಜ್ ಜೋಯಿಸ್, ಅಧ್ಯಕ್ಷತೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ವರುಣಾ ಮಹೇಶ್, ಸುಪ್ರೀತ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಬಿ. ಸಿ. ನಾಗೇಂದ್ರ ಕುಮಾರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು. 6.40 ಪದಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್. ಎಸ್, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿಜಯಶ್ರೀ ವೈದ್ಯನಾಥನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳೀಮಠ್ ಹಾಗೂ ಚೈತ್ರಿಕಾ. ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 1.20 ಭಾವಗೀತೆಗಳು– ರೋಹಿಣಿ ಸುಧಾಮ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಪ್ರಪಂಚಂ. ಎಸ್. ಬಾಲಚಂದ್ರನ್– ಕೊಳಲು ವಾದನ, 4.00 ಕಥಾ ಕಾಲಕ್ಷೇಪ–ಶ್ರೀ ರಾಘವೇಂದ್ರ ವಿಜಯ, ಪ್ರಸ್ತುತಿ: ಬೇಲೂರು ಹೆಚ್. ಎ. ವಸಂತಲಕ್ಷ್ಮೀ, 5.30 ಪಶುಧನ್ ಸೆ ಬೆಹತರ್ ಜೀವನ್, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸೋಂಕು ನಿವಾರಣೆ ಹಾಗೂ ನೈರ್ಮಲ್ಯತೆಯ ಪ್ರಾಮುಖ್ಯತೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಡಾ. ಜಿ. ಮಲ್ಲಿಕಾರ್ಜುನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ: ಅಂತರಾಷ್ಟ್ರೀಯ ಪ್ಯಾರ ಈಜುಪಟು ಪುನೀತ್ ನಂದಕುಮಾರ್ ಸಾಧನೆಯ ಪರಿಚಯ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ನಾರಾಯಣ ಅಯ್ಯರ್ – ಗೋಟುವಾದ್ಯ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ– ಹೆಚ್.ಎಲ್.ಶ್ರೀಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣಧಾಮ :** ಶ್ರೀ ಅದಮಾರು ಪೀಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಗಳವರಿಂದ ಶ್ರೀಮದ್ ವಾದಿರಾಜ ವಿರಚಿತ ರುಕ್ಮಿಣೀಶ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6 ರಿಂದ.

■ **ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು :** ಡಾ. ಫ.ಗು. ಹಳಕಟ್ಟಿಯವರ ಜಯಂತಿ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನ ಮತ್ತು ದತ್ತಿ ಉಪನ್ಯಾಸ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಅವರಿಂದ ಡಾ. ಫ.ಗು. ಹಳಕಟ್ಟಿಯವರ ಜೀವನ–ಸಾಧನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಆಶಯ ನುಡಿ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ. ಚಂದ್ರಶೇಖರ್, ಮುಖ್ಯ ಅತಿಥಿಗಳು : ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ ಕಾರ್ಯದರ್ಶಿ ಎಂ.ಎಸ್. ನಾಗೇಶ್, ತಾಲೂಕು ಶರಣ ಸಾಹಿತ್ಯ ಪರಿಷತ್‌ನ ಪಿ. ದೇವರಾಜು ಚಿಕ್ಕಹಳ್ಳಿ, ಸ್ಥಳ: ಶ್ರೀ ವಿವೇಕ ವಿದ್ಯಾಲಯ ಪದವಿಪೂರ್ವ ಕಾಲೇಜು ಆವರಣ, ಸಂಜೆ 6.30ಕ್ಕೆ.

ಮೈಸೂರು ಮಿತ್ರ ಮಂಗಳವಾರ 2 ಜುಲೈ 2024

ಮೈಸೂರಿನ ಉದ್ಯಾನಗಳಲ್ಲಿ ಹೆಚ್ಚು ಮರಗಿಡ ಬೆಳೆಸುವುದು ಅವಶ್ಯ

● ಮಾಜಿ ಮೇಯರ್ ಸಂದೇಶ್‌ಸ್ವಾಮಿ ● 'ಏಕ್ ಪೆಡ್ ಮಾ ಕೆ ನಾಮ್' ಅಭಿಯಾನದಡಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರಿನ ಕೆಸರೆಯ ಉದ್ಯಾನವನದಲ್ಲಿ ಸೋಮವಾರ ಗಿಡ ನೆಡುವ ಕಾರ್ಯಕ್ರಮಕ್ಕೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಚಾಲನೆ ನೀಡಿದರು.

ಮೈಸೂರು, ಜು.1(ಪಿಎಂ)– ನಮ್ಮ ಮೈಸೂರಿನ ಉದ್ಯಾನವನಗಳಲ್ಲಿ ಹೆಚ್ಚಾಗಿ ಮರಗಿಡಗಳನ್ನು ಬೆಳೆಸಲು ಆದ್ಯತೆ ನೀಡಬೇಕಿದೆ. ಆ ಮೂಲಕ ಉತ್ತಮ ಪರಿಸರ ನಿರ್ಮಿಸುವ ಜವಾಬ್ದಾರಿ ನಮ್ಮದಾಗಿದೆ ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹೇಳಿದರು.

ಮೈಸೂರಿನ ಕೆಸರೆಯ ಉದ್ಯಾನವನದಲ್ಲಿ 'ತಾಯಿಗಾಗಿ ಒಂದು ಸಸಿ ನೆಡಿ (ಏಕ್ ಪೆಡ್ ಮಾ ಕೆ ನಾಮ್ ಅಭಿಯಾನ)' ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ನರಸಿಂಹರಾಜ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಉದ್ಯಾನವನಗಳಲ್ಲಿ ಆಟೋಟ ಹಾಗೂ ವಾಯುವಿಹಾರಕ್ಕೆ ಪೂರಕ ವ್ಯವಸ್ಥೆ ಮಾಡುವ ಜೊತೆಗೆ ಉದ್ಯಾನವನಗಳಲ್ಲಿ ಹೆಚ್ಚಿನ ಮರಗಿಡಗಳನ್ನು ಬೆಳೆಸುವುದು ಹಾಗೂ ಲಾನ್‌ಗಳನ್ನು ನಿರ್ಮಿಸುವುದು ಅಗತ್ಯ. ಏಕೆಂದರೆ ನಗರ ಪ್ರದೇಶಗಳಲ್ಲಿ ಜನವಸತಿ ಹಾಗೂ ಅಭಿವೃದ್ಧಿಗಾಗಿ ಹಸಿರು ಮಾಯವಾಗುತ್ತಿದೆ. ಆದ್ದರಿಂದ ಇರುವ ಇಂತಹ ಜಾಗದಲ್ಲಿ ಹೆಚ್ಚಿನ ಮರಗಿಡಗಳನ್ನು ಬೆಳೆಸಿ ಉತ್ತಮ ಪರಿಸರ ನಿರ್ಮಿಸುವುದು ಅಗತ್ಯ ಎಂದು ತಿಳಿಸಿದರು.

ನರಸಿಂಹರಾಜ ಕ್ಷೇತ್ರದಲ್ಲಿ ಜನಸಾಂದ್ರತೆ ಹೆಚ್ಚಾಗಿದ್ದು, ಮರಗಿಡಗಳು ತುಂಬಾ ಕಡಿಮೆ ಇವೆ. ಆದ್ದರಿಂದ ಇಲ್ಲಿನ ಜನರ ಆರೋಗ್ಯ ರಕ್ಷಣೆಗೆ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಆಮ್ಲಜನಕ ಉಳಿಸುವ ಸಲುವಾಗಿ ಇಂತಹ ಕಾರ್ಯಕ್ರಮ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಾಗಿ ನಡೆಯಬೇಕಿದೆ ಎಂದು ಆಶಿಸಿದರು.

ಎನ್‌ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸ್ಮಾರ್ಟ್ ಮಂಜು, ಪ್ರಧಾನ ಕಾರ್ಯದರ್ಶಿ ಗಿರಿಧರ್, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ಮುಖಂಡರಾದ ಮಂಜುಶ್ರೀಗೌಡ, ಪದ್ಮನಾಭ್, ಮಾಲಿನಿ ಮತ್ತಿತರರು ಹಾಜರಿದ್ದರು.

ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.1– ಕೆ.ಆರ್.ನಗರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಮೆಟ್ರಿಕ್ ನಂತರ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ (ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸಿನ) ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ವಿವರಗಳಿಗೆ ಕೆ.ಆರ್.ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯ ದೂ.ಸಂ 08223–262230 ನ್ನು ಸಂಪರ್ಕಿಸಬಹುದು ಎಂದು ಕೆ.ಆರ್.ನಗರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಬೈ ಶ್ರಮಿಕರ ಹೃದಯ ಸಾಮ್ರಾಜ್ಯ...!

●ಇವರಲ್ಲಿ ಜಾತಿ, ಧರ್ಮ, ಅಂತಸ್ತು ಯಾವುದೂ ಇಲ್ಲ: ಹಿರಿಯ ಸಾಹಿತಿ ಜಯಂತ್ ಕಾಯ್ಕಿಣಿ ಪ್ರಶಂಸೆ

●ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ; ಜೆಎಸ್‌ಎಸ್ ಡಯಲ್ ಕ್ಲಬ್ 7ನೇ ವಾರ್ಷಿಕೋತ್ಸವ

ಮೈಸೂರು, ಜು.1(ಎಸ್‌ಪಿಎನ್)– ಮುಂಬೈ ಶ್ರಮಿಕರ ಲೋಕ. ಇಲ್ಲಿಗೆ ಅಪರೂಪಕ್ಕೆ ಭೇಟಿ ಕೊಡುವ ಪ್ರವಾಸಿಗರಿಗೆ ಅಷ್ಟೊಂದು ಇಷ್ಟವಾಗುವುದಿಲ್ಲ. ಈ ನಗರಿಯಲ್ಲಿ ಶ್ರಮಿಕರ ನಡುವೆ 24 ವರ್ಷ ವಾಸವಿದ್ದ ನನಗೆ, ಮುಂಬೈ ಎಂದರೆ ಬಲು ಪ್ರೀತಿ ಎಂದು ಹಿರಿಯ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಆಸ್ಪತ್ರೆ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸೋಮವಾರ ನಡೆದ ವೈದ್ಯರ ದಿನಾಚರಣೆ ಮತ್ತು ಜೆಎಸ್‌ಎಸ್ ಡಯಲ್ ಬುಕ್ ಕ್ಲಬ್ 7ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು.

ಮುಂಬೈ ಕಾಯಕ ನಗರಿ: ಮುಂಬೈನಲ್ಲಿ ನಾನು 24 ವರ್ಷಗಳ ಕಾಲ ಉದ್ಯೋಗದಲ್ಲಿದ್ದೆ. ಮುಂಬೈ ನಗರ ಒಂದು ನಿಜವಾದ ಕಾಯಕದ ಕೈಲಾಸ. ಕಾರಣ ಅಲ್ಲಿ ದುಡಿಯುವ ವರ್ಗದವರು ಮತ್ತೊಬ್ಬ ಶ್ರಮಿಕವರ್ಗದವರನ್ನು ಗೌರವಿಸಿ, ಆದರಿಸುವ ರೀತಿ ಆಪ್ಯಾಯಮಾನ. ಮಧ್ಯರಾತ್ರಿಯಲ್ಲಿ ಆಟೋ ಹಿಡಿದು ಮನೆಗೆ ಹೋಗಬೇಕಾಗಿ ಬಂದಾಗ ಆಟೋ ಚಾಲಕ ಒಂದು ರುಪಾಯಿಯೂ ಹೆಚ್ಚಿಗೆ ಪಡೆಯದೆ ನಿಗದಿತ ಶುಲ್ಕವನ್ನೇ ಪಡೆಯುವ ನಿಯಮವನ್ನು ಪಾಲಿಸುವರು. ಸಾಮಾನ್ಯವಾಗಿ ಎಲ್ಲ ಮಧ್ಯಮ ವರ್ಗ, ಕೆಳ ವರ್ಗದ ಜನರು ಚಿಕ್ಕಚಿಕ್ಕ ಮನೆಗಳಲ್ಲಿ ವಾಸಿಸುವವರು. ಚಿಕ್ಕ ಮನೆಯಲ್ಲಿದ್ದರೂ ಅವರಲ್ಲಿ ಹೃದಯ ವೈಶಾಲ್ಯತೆ ಇತ್ತು. ಯಾರೂ ನಮ್ಮ ಜಾತಿ, ಧರ್ಮ, ಅಂತಸ್ತು ಯಾವುದೂ ಕೇಳುತ್ತಿರಲಿಲ್ಲ. ಹಾಗಾಗಿ ಅದು ಒಂದು ರೀತಿಯಲ್ಲಿ ಮುಕ್ತ ಮನಸ್ಸಿನ ನಗರಿ. ಅಂತಹ ವಾತಾವರಣ ಬೇರೆ ನಗರಗಳಲ್ಲಿ ಸಿಗುವುದು ದುರ್ಲಭ. ಹೀಗಾಗಿಯೇ ನನ್ನ ಕಥೆ ಕವನಗಳಲ್ಲಿ ಮುಂಬಯಿ ವಾತಾವರಣವೇ ಹೆಚ್ಚು ಕಾಣುತ್ತದೆ ಎಂದು ಹೇಳಿದರು.

ನನಗೆ ತಿಳಿಯದ ಪದಗಳು ಪರಿಚಯವಾದವು: ಜಾತಿ, ಧರ್ಮ, ಸಮಾಜದಲ್ಲಿ ಕೋಮು ಭಾವನೆ ಎಂಬುದು ಪರಿಚಯವಾಗಿದ್ದೆ ಬೆಂಗಳೂರಿಗೆ ಬಂದ ಮೇಲೆ ಎಂದ ಅವರು, ನನ್ನ ತಂದೆ ಗೌರೀಶ್ ಕಾಯ್ಕಿಣಿ ಬರವಣಿಗೆಯಲ್ಲಿ ತೊಡಗಿದ್ದರು. ನಾನು ಚಿಕ್ಕವನಿದ್ದಾಗ ಸಾಹಿತ್ಯ ಎಂದರೆ ಅಷ್ಟೊಂದು ಇಷ್ಟವಿರಲಿಲ್ಲ. ನಮ್ಮ ತಂದೆ ಬಳಿ ಅನೇಕ ಯುವ ಬರಹಗಾರರು, ತಾವು ಬರೆದ ಪುಸ್ತಕಗಳಿಗೆ ಮುನ್ನುಡಿ, ಬೆನ್ನುಡಿ ಬರೆಸಿಕೊಳ್ಳಲು ಪುಸ್ತಕಗಳನ್ನು ತಂದುಕೊಡುತ್ತಿದ್ದರು. ಆಗ ನಾನು ಆ ಪುಸ್ತಕಗಳನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಒಮ್ಮೆ ಸಾಹಿತಿಯೊಬ್ಬರ ಕವಿತೆ ಓದಿದ ಮೇಲೆ ಬರಹದ ಕಡೆ ಗಮನ ಸೆಳೆಯಿತು. ನಂತರ ಯಶವಂತ ಚಿತ್ತಾಲ ಸೇರಿದಂತೆ ಇತರೆ ಸಾಹಿತಿಗಳು ಪುಸ್ತಕಗಳನ್ನು ಓದುವ ಮೂಲಕ ಸಾರಸ್ವತ ಲೋಕಕ್ಕೆ ಕಾಲಿಟ್ಟ ಸಂದರ್ಭವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ವೈದ್ಯಕೀಯ ಶಿಕ್ಷಣ ಅದ್ಭುತ ಲೋಕ: ವೈದ್ಯ ಸಾಹಿತ್ಯ ಮತ್ತು ಸಾಹಿತ್ಯ, ಕಲೆಗಳು ಬೇರೆ ಅಲ್ಲ. ನೀವು ಆಪರೇಷನ್ ಥಿಯೇಟರ್‌ನಲ್ಲಿ ಒಬ್ಬ ಅನಾಮಿಕನ ಪ್ರಾಣ ಉಳಿಸುವ ಕಾಯಕವೇ ಒಂದು ದೊಡ್ಡ ಆಧ್ಯಾತ್ಮಿಕ ಸಾಧನೆ. ಅದರಿಂದ ನಿಮಗೆ ಸಿಗುವ ಖುಷಿಯೇ ಬೇರೆ. ನಿಮ್ಮ ಶಿಕ್ಷಣ, ನಿಮ್ಮ ವೃತ್ತಿ ಅದ್ಭುತವಾಗಿದೆ. ಹಾಗಾಗಿ ನಾನು ವೈದ್ಯಕೀಯ ಶಿಕ್ಷಣವನ್ನು ಎತ್ತರದ ಸ್ಥಾನದಲ್ಲಿ ನೋಡುತ್ತೇನೆ ಎಂದರು.

ಜ್ಞಾನ ಹೀಗಿರುತ್ತೆ: ಯಾವ ಜ್ಞಾನ ಅಹಂಕಾರ ಕೊಡುವುದೋ ಅದು ಜ್ಞಾನವೇ ಅಲ್ಲ. ನಾನು ಜ್ಞಾನಿ ಎಂದು ಹೇಳುವವನು ಮೂರ್ಖನೇ ಸರಿ. ಯಾರಿಗೆ ಓದಿನ ಸಾಧನೆಯಿಂದ ಅಹಂಕಾರ ಬರುವುದಿಲ್ಲವೋ ಅದೇ ನಿಜವಾದ ಜ್ಞಾನ. ಇಂತಹ ವಿಶಿಷ್ಟ ವೈದ್ಯಕೀಯ ಕ್ಷೇತ್ರದಲ್ಲಿದ್ದುಕೊಂಡು ನಮ್ಮ ತಲೆಯಲ್ಲಿ ಜಾತಿ, ಮತ, ಧರ್ಮ, ಅಸಮಾನತೆಯ ಕಸ ಹೊಕ್ಕಿದರೆ, ಜ್ಞಾನವೆಂಬುದು ಸಂಪೂರ್ಣ ನಿರರ್ಥಕವಾಗುತ್ತದೆ. ಇದು ಮಾನವನ ವಿಕಾಸದ ಬದುಕಿನ ಹಾವು ಏಣಿ ಆಟ ಎಂದರೆ ತಪ್ಪಾಗಲಾರದು ಎಂದರು.

ಬದುಕು ಹಾವು–ಏಣಿ ಆಟ: ಹೀಗಾಗಿ ಸಾವಿರಾರು ವರ್ಷಗಳ ಅವಧಿಯಲ್ಲಿ ಮನುಷ್ಯ ಹಾವು ಕಚ್ಚಿದರೆ ಕೆಳಗಿಳಿಯುವನು, ಏಣಿ ಸಿಕ್ಕಾಗ ಮೇಲೇಳುವನು. ಹೀಗೆ ಹಾವು ಏಣಿ ಆಟವಾಡುತ್ತಾ 97 ಸಂಖ್ಯೆಗೆ ಬಂದಾಗ ಒಂದು ದೊಡ್ಡ ಹೆಬ್ಬಾವು ಎದುರಾಗುವುದು. ಈಗ ನಾವು ಅಂತಹ ಹಂತದಲ್ಲಿ ಅಂದರೆ ಜಾತಿ, ಧರ್ಮ, ಅಸೂಯೆ ಮುಂತಾದ ಹೆಬ್ಬಾವನ್ನು ಎದುರಿಸಬೇಕಾಗಿದ್ದು, ಸೀದಾ ಶಿಲಾಯುಗದತ್ತ ಹೋಗುವ ವಿಷಮ ಪರಿಸ್ಥಿತಿಯಲ್ಲಿ ಇದ್ದೇವೆ ಎಂದರು. ಹೀಗಾಗಿ ನಾವು ವಿದ್ಯಾವಂತರಾದವರು ರಾಜಕಾರಣಿಗಳು, ಪ್ರಗತಿಪರರು ಎಂಬ ಸೋಗಿನಲ್ಲಿರುವವರ ಬಣ್ಣದ ಮಾತುಗಳಿಗೆ, ಮಾರು ಹೋಗದೆ ಮನುಷ್ಯತ್ವದ ಬಗ್ಗೆ ಚಿಂತಿಸುವ ಅಗತ್ಯ ಇದೆ. ನಾವು ಈ ಜಗತ್ತಿಗೇ ಬಾಡಿಗೆಗೆ ಇರಲಿಕ್ಕೆ ಬಂದವರು. ಸ್ವಂತ ಮನೆ ಮಾಡಿಕೊಳ್ಳುವ ಹುಚ್ಚಿನಿಂದ ನಾವು ಹಾಳಾಗಿದ್ದೇವೆ. ಎಲ್ಲರೂ ಬಾಡಿಗೆ ಮನೆಯಲ್ಲಿದ್ದರೆ ಆ ಸುಖವೇ ಬೇರೆ. ಸ್ವಂತ ಮನೆ ಮಾಡಿಕೊಂಡ ಮೇಲೆ ಒಂದರ ನಂತರ ಇನ್ನೊಂದು ಶ್ರೀಮಂತಿಕೆಯ ಕಷ್ಟಗಳು ಎದುರಾಗುತ್ತಿವೆ ಎಂದರು.

ಸಾವನ್ನು ಹೀಗೂ ಕರೆಯುತ್ತಾರೆ: ಮುಂಬೈನಲ್ಲಿ ಯಾರಾದರೂ ಒಬ್ಬರು ತೀರಿಕೊಂಡರೆ ಆ ಸುದ್ದಿಯನ್ನು ಇನ್ನೊಬ್ಬರಿಗೆ ತಿಳಿಸುವ ವೈಖರಿಯೇ ವಿಶೇಷ. ಹೀಗೆ ಯಾರಾದರೂ ತೀರಿಕೊಂಡರೆ ಅವರು 'ಆಫ್' ಆದರು ಎಂದು ಹೇಳುವ ಮುದ್ದಾದ ಮಾತು ರೂಢಿಯಲ್ಲಿ ಇದೆ. ನಾವು ಉಡುವ ಬಟ್ಟೆ–ಬರೆ, ಅನ್ನ, ಮುಂತಾದುವು ಎಲ್ಲವನ್ನು ಯೋಚಿಸಿದರೆ ನಮ್ಮ ಜೀವದ ಹಿಂದೆ ಕೋಟ್ಯಾಂತರ ಶ್ರಮಿಕ ವರ್ಗದ ಋಣದಲ್ಲಿ ಬದುಕುತ್ತಿದ್ದೇವೆ. ನಮಗೆ ಸಾಮಾಜಿಕ ಋಣ ಇದೆ. ಸಾಹಿತ್ಯಕ್ಕೆ ಎಲ್ಲವನ್ನು, ಎಲ್ಲರನ್ನೂ ಒಂದು ಗೂಡಿಸುವ ಶಕ್ತಿ ಇದೆ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸುತ್ತಿದ್ದಾಗ ಸಭೆಯಲ್ಲಿದ್ದ ವೈದ್ಯರೊಬ್ಬರು 'ಈಗ ಸಾವನ್ನು ನಾಟ್ ರೀಚಬಲ್' ಎನ್ನುತ್ತಾರೆ ಎಂದರು.

ವೈದ್ಯರಿಗೆ ಸನ್ಮಾನ: ಈ ವೇಳೆ ಸಭಾಂಗಣದಲ್ಲಿ ನೆರೆದಿದ್ದ ಹಿರಿಯ ವೈದ್ಯರು, ಜಯಂತ್ ಕಾಯ್ಕಿಣಿ ಅವರೊಂದಿಗೆ ಸಂವಾದ ನಡೆಸಿದರು. ವೈದ್ಯರ ದಿನಾಚರಣೆ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವೈದ್ಯರಾದ ಡಾ.ಸುಭಾಷ್ ಚಂದ್ರ, ಡಾ.ಬಿ.ಎಸ್.ಜಯರಾಜ್, ಡಾ. ಎಂ.ಡಿ. ಭಾರತಿ, ಡಾ.ವೀರಣ್ಣ, ಕರ್ನಲ್ ಟಿ.ಎಸ್. ವಾಸು, ಡಾ.ಬಿ.ನಾರಾಯಣಪ್ಪ, ಡಾ. ಪುರುಷೋತ್ತಮ ಶಾಸ್ತ್ರಿ, ಡಾ.ಎಚ್.ಪಿ. ನಂದೀಶ್, ಡಾ.ಅಮೃತ್ ರಾಜ್ ಗೌಡ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಬಸವನಗೌಡಪ್ಪ, ಅಧೀಕ್ಷಕ ಡಾ.ಸಿ.ಪಿ. ಮಧು, ಡಾ.ಪ್ರವೀಣ್ ಕುಲಕರ್ಣಿ, ಡಾ, ಮಹಾಂತಪ್ಪ ಮತ್ತಿತರರು ಉಪಸ್ಥಿತರಿದ್ದರು.



ರಾಷ್ಟ್ರೀಯ ವೈದ್ಯರ ದಿನಾಚರಣೆ ಮತ್ತು ಜೆಎಸ್‌ಎಸ್ ಡಯಲ್ ಬುಕ್ ಕ್ಲಬ್ 7ನೇ ವಾರ್ಷಿಕೋತ್ಸವದಲ್ಲಿ ಹಿರಿಯ ವೈದ್ಯರಾದ ಡಾ.ಸುಭಾಷ್ ಚಂದ್ರ, ಡಾ.ಬಿ.ಎಸ್.ಜಯರಾಜ್, ಡಾ.ಎಂ.ಡಿ.ಭಾರತಿ, ಡಾ.ವೀರಣ್ಣ, ಕರ್ನಲ್ ಟಿ.ಎಸ್.ವಾಸು, ಡಾ.ಬಿ.ನಾರಾಯಣಪ್ಪ, ಡಾ.ಪುರುಷೋತ್ತಮ ಶಾಸ್ತ್ರಿ, ಡಾ.ಎಚ್.ಪಿ.ನಂದೀಶ್, ಡಾ.ಅಮೃತ್‌ರಾಜ್‌ಗೌಡ ಅವರನ್ನು ಸನ್ಮಾನಿಸಲಾಯಿತು.

ನಿಮ್ಮನ್ನು ಬಲಿಷ್ಠಗೊಳಿಸುವ ಸಾಧನ ಎಂದರೆ ಪುಸ್ತಕಗಳು

"ಯಾವುದೇ ವಸ್ತುವನ್ನು ನೀವು ಪ್ರೀತಿಯಿಂದ ನೋಡಿದರೆ ಅದು ಸುಂದರವಾಗಿ ಕಾಣುತ್ತದೆ. ಈಗಿನ ಯುವಕರಿಗೆ ತಿಳಿದಿರುವುದು ಫೇಸ್‌ಬುಕ್, ಪಾಸ್‌ಬುಕ್, ಚೆಕ್ ಬುಕ್ ಆಗಿದೆ. ಇದೇ ಪುಸ್ತಕ ಲೋಕ ಎಂದು ತಿಳಿದುಕೊಂಡಿದ್ದಾರೆ. ಈ ಹಿಂದೆ ಸಾಮಾಜಿಕ ಮೌಲ್ಯಗಳನ್ನು ತಿಳಿದುಕೊಳ್ಳಲು ಗ್ರಂಥಾಲಯಗಳು ಇದ್ದವು. ನಮ್ಮ ಮನಸ್ಸಿಗೆ ಗ್ರಂಥಾಲಯವೇ ಒಂದು ಜಿಮ್ ಇದ್ದಂತೆ. ನೀವು ಪಠ್ಯಪುಸ್ತಕಗಳನ್ನು ಓದಿ, ಜೀವನದಲ್ಲಿ ಸಾವಿರಾರು ಪರೀಕ್ಷೆಗಳನ್ನು ಎದುರಿಸಿ ಗೆದ್ದಿದ್ದೀರಿ. ಆಗ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸು ಮಾಡಲು ಯಾವ ಪ್ರಶ್ನೆಪತ್ರಿಕೆಗಳೂ ಲೀಕ್ ಆಗಿರುವುದಿಲ್ಲ. ಹಾಗಾಗಿ ನಿಮ್ಮ ಜೀವನದಲ್ಲಿ ಬರುವ ಪರೀಕ್ಷೆಗಳಿಗೆ ನಿಮ್ಮನ್ನು ತಯಾರು ಮಾಡುವ ಸಾಧನ ಎಂದರೆ ಸಾಹಿತ್ಯ ಪುಸ್ತಕಗಳು.

–ಜಯಂತ್ ಕಾಯ್ಕಿಣಿ, ಹಿರಿಯ ಸಾಹಿತಿ

ಸಾತಗಳ್ಳಿ ಒಂದನೇ ಹಂತದಲ್ಲಿ ಕೊಳಚೆ ನೀರಿನ ದುರ್ವಾಸನೆ; ಆತಂಕದಲ್ಲಿ ನಿವಾಸಿಗಳು



ಕೊಳಚೆ ನೀರಿನಿಂದ ಆವೃತ್ತವಾಗಿರುವ ಸಾತಗಳ್ಳಿ 1ನೇ ಹಂತದ ಪಾರ್ಕ್.

"ವರ್ಷದ ಹಿಂದೆ ಚೆನ್ನಾಗಿದ್ದ ಪಾರ್ಕ್ ಇಂದು ಸರ್ವನಾಶವಾಗಿದೆ. ಪಾರ್ಕ್‌ನ ಕಾಂಪೌಂಡ್ ಒಡೆದು ಹಾಕಿ, ಅಳವಡಿಸಿದ್ದ ಕಬ್ಬಿಣದ ಗ್ರಿಲ್‌ಗಳನ್ನು ಕಳ್ಳತನ ಮಾಡಿದರು. ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರ ವಾಯುವಿಹಾರ ತಾಣವಾಗಿದ್ದ ಉದ್ಯಾನವನ ಇಂದು ಗಬ್ಬೆದ್ದು ನಾರುತ್ತಿದೆ. ಪಾರ್ಕ್ ನಡುವೆ ನೀರು ಹರಿಯುತ್ತಿದ್ದ ಮೋರಿಯನ್ನು ಮುಚ್ಚಿದ್ದರಿಂದಾಗಿ ನರಕ ಅನುಭವಿಸುತ್ತಿದ್ದೇವೆ. ಇದಕ್ಕೆ ಖಾಸಗಿ ಬಡಾವಣೆಗಳೂ ಕಾರಣವಾಗಿವೆ. ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಅನುಮತಿ ನೀಡಿ ವಸೂಲಿ ದಂಧೆ ನಡೆಸುವ ಅಧಿಕಾರಿಗಳು ನಮ್ಮ ಕಷ್ಟ ಕೇಳುತ್ತಾರೆಯೇ... ಇಲ್ಲಿ ಎಲ್ಲವೂ ಇಲ್ಲೀಗಲ್ (ಅಕ್ರಮ)...

- ನೊಂದ ನಿವಾಸಿಗಳು, *ಸಾತಗಳ್ಳಿ 1 ಹಂತ*

"ಸಾತಗಳ್ಳಿ ಪಾರ್ಕ್‌ನಲ್ಲಿ ತುಂಬಿರುವ ನೀರನ್ನು ಹೊರ ಹಾಕಲು ಈಗಾಗಲೇ ಕ್ರಮವಹಿಸಲಾಗಿದೆ. ನೀರಿನ ಪ್ರಮಾಣ ಜಾಸ್ತಿ ಇರುವುದರಿಂದ ನಾಳೆ(ಜು.2) ಯಿಂದ ಮೋಟಾರ್‌ಗಳನ್ನು ಅಳವಡಿಸಿ, ನೀರು ಹೊರ ಹಾಕಲಾಗುವುದು. ನೀರನ್ನು ಹೊರಹಾಕಿದ ಬಳಿಕ ಪಾರ್ಕ್ ಅಭಿವೃದ್ಧಿಗೆ ಗಮನ ಹರಿಸಲಿದ್ದು, ಅಭಿವೃದ್ಧಿಗಾಗಿ ಅನುದಾನವೂ ನಿಗದಿಯಾಗಿದೆ.

- ಕೆ.ಸಿ.ಶೌಕತ್ ಪಾಷಾ, *ಮಾಜಿ ಸದಸ್ಯ, ನಗರಪಾಲಿಕೆ*

ಮೈಸೂರು, ಜು.1(ಎಂಕೆ)– ಮೈಸೂರಿನ ಸಾತಗಳ್ಳಿ ಬಡಾವಣೆಯ 1ನೇ ಹಂತದಲ್ಲಿ ಡೆಂಗ್ಯೂ ಆತಂಕ ಎದುರಾಗಿದ್ದು, ಕೊಳಚೆ ನೀರಿನ ಹೊಲಸು ದುರ್ವಾಸನೆ ನಿವಾಸಿಗಳನ್ನು ಕಂಗೆಡಿಸಿದೆ...!

ನಗರ ಪಾಲಿಕೆ ವಾರ್ಡ್ ನಂ.34ರ ವ್ಯಾಪ್ತಿಯ ಸಾತಗಳ್ಳಿ ಪಾರ್ಕ್‌ನಲ್ಲಿ ಕಳೆದ ಒಂದೂವರೆ ವರ್ಷದಿಂದ ಮಳೆ ಹಾಗೂ ಕೊಳಚೆ ನೀರು ಶೇಖರಣೆಗೊಂಡು ಕೆರೆಯಂತಾಗಿದ್ದು, ನಿವಾಸಿಗಳು ನಿತ್ಯ ನರಳುವಂತಾಗಿದೆ. ವಿಪರೀತ ಸೊಳ್ಳೆಗಳ ಕಾಟ, ಕೊಳೆತು ನಾರುತ್ತಿರುವ ಗಿಡ–ಗಂಟಿ, ಕಸದ ರಾಶಿ ಪಾದಚಾರಿಗಳ ತಲೆ ತಿರುಗಿಸುವಂತಿದೆ.

ಸಾತಗಳ್ಳಿ ಪಾರ್ಕ್‌ನ ಸುತ್ತಲೂ ನೂರಾರು ಮನೆಗಳು, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಿವೆ. ಹಾಗೆಯೇ ಇಲ್ಲಿನ ಖಾಸಗಿ ಬಡಾವಣೆಗಳಲ್ಲಿಯೂ ಮನೆಗಳು ನಿರ್ಮಾಣವಾಗುತ್ತಿದ್ದು, ದಿನವಿಡೀ ದುರ್ವಾಸನೆಯುಳ್ಳ ಗಾಳಿಯನ್ನೇ ಉಸಿರಾಡುವ ವಿಷಮ ಪರಿಸ್ಥಿತಿ ನಿರ್ಮಾಣವಾಗಿದೆ.

ಕಲ್ಯಾಣಗಿರಿ ಹಾಗೂ ಸಾತಗಳ್ಳಿಯ ಯುಜಿಡಿ ಮತ್ತು ಮೋರಿ ನೀರು ನಿತ್ಯ ಹರಿದು ಬಂದು ಪಾರ್ಕ್‌ನಲ್ಲಿ ಶೇಖರಣೆಯಾಗುತ್ತಿದೆ. ಪಾರ್ಕ್‌ನಿಂದ ಶೇಖರಣೆಯಾದ ನೀರು ಹೊರಗಡೆ ಹರಿದು ಹೋಗಲು ಎಲ್ಲಿಯೂ ಜಾಗವಿಲ್ಲ. ಕಳೆದೊಂದೂವರೆ ವರ್ಷದಿಂದಲೂ ಇದೇ ಪರಿಸ್ಥಿತಿ ಇದ್ದು, ಸುಮಾರು ಒಂದೂವರೆ ಎಕರೆ ವಿಸ್ತೀರ್ಣದ ಅಭಿವೃದ್ಧಿ ಹೊಂದಿದ್ದ ಪಾರ್ಕ್ ಇಂದು ಹಾಳು ಕೊಂಪೆಯಾಗಿದೆ.

ಸಾತಗಳ್ಳಿ ಪಾರ್ಕ್ ಅಕ್ಷರಶಃ ಕೊಳಚೆ ನೀರು ತುಂಬಿರುವ ಮಿನಿ ಕೆರೆಯಂತಾಗಿದೆ. ಕೊಳಚೆ ನೀರಿನ ದುರ್ವಾಸನೆಯಿಂದಾಗಿ ಪಾರ್ಕ್ ಹತ್ತಿರ ಸುಳಿಯಲು ಹತ್ತು ಬಾರಿ ಯೋಚನೆ ಮಾಡಬೇಕಿದೆ. ಕೊಳಚೆ ನೀರಿನ ಮೇಲೆ ಸೊಳ್ಳೆ, ನೊಣಗಳ ಹಿಂಡಿವೆ. ಕಸದ ರಾಶಿ ಕಣ್ಣಿಗೆ ರಾಚುತ್ತಿದ್ದು, ಅನೈರ್ಮಲ್ಯತೆ ತಾಂಡವವಾಡುತ್ತಿದೆ.

ಡೆಂಗ್ಯೂ ರಿಪೋರ್ಟ್!: ಸಾತಗಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದವರು, ಈ ಭಾಗದ ಹೆಚ್ಚು ಜನರಲ್ಲಿ ಡೆಂಗ್ಯೂ ಕಾಣಿಸಿಕೊಳ್ಳುತ್ತಿದೆ ಎಂದು ರಿಪೋರ್ಟ್ ನೀಡಿದ್ದರು. ವಿಪರೀತ ಸೊಳ್ಳೆಗಳು, ಉಸಿರಾಟಕ್ಕೂ ಕಷ್ಟ ಪಡುವಂತಹ ದುರ್ವಾಸನೆಯಿಂದ ಪ್ರತಿನಿತ್ಯ ಆತಂಕದಲ್ಲೇ ಬದುಕುತ್ತಿದ್ದೇವೆ. ಮನೆ ಮಂದಿಯೆಲ್ಲಾ ಮೂರ್ ಮೂರ್ ದಿನಕ್ಕೂ ಆಸ್ಪತ್ರೆಗೆ ಅಲೆದಾಡುವಂತಾಗಿದೆ ಎಂದು ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡರು. ಕೊಳಚೆ ನೀರು ನಿಂತಿರುವ ಸಾತಗಳ್ಳಿ ಪಾರ್ಕ್ ಸಮೀಪದಲ್ಲಿಯೇ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಿವೆ. ಪುಟಾಣಿ ಮಕ್ಕಳು, ಶಾಲಾ–ಕಾಲೇಜು ವಿದ್ಯಾರ್ಥಿಗಳ ಓಡಾಟ ಹೆಚ್ಚು. ಕೊಳಚೆ ನೀರಿನ ದುರ್ವಾಸನೆಯಿಂದ ನೆಮ್ಮದಿ ಇಲ್ಲದಂತಾಗಿದೆ ಆದರೂ ಸಂಬಂಧಪಟ್ಟ ಪಾಲಿಕೆ ಹಾಗೂ ಮುಡಾ ಅಧಿಕಾರಿಗಳು ಕಷ್ಟ ಕೇಳುತ್ತಿಲ್ಲ. ವಾರದಲ್ಲಿ ಕನಿಷ್ಠ ಮೂರು ದಿನವಾದರೂ ಆರೋಗ್ಯದಲ್ಲಿ ಏರುಪೇರಾಗಿ ಆಸ್ಪತ್ರೆಗೆ ಅಲೆಯುತ್ತಿದ್ದೇವೆ. ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ದಿನ ದೂಡುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಹೊಸ ಕಾನೂನಿನಡಿ ಹಾಸನದಲ್ಲಿ ಮೊದಲ ಪ್ರಕರಣ ದಾಖಲು

ರಾಜ್ಯದಲ್ಲಿ ಒಟ್ಟಾರೆ 63 ಕೇಸ್ ದಾಖಲಾಗಿವೆ

ಬೆಂಗಳೂರು, ಜು.1– ಇಂದು (ಸೋಮವಾರ)ದೇಶಾದ್ಯಂತ ಹೊಸ ಕ್ರಿಮಿನಲ್ ಕಾನೂನುಗಳು ಜಾರಿಯಾಗಿದ್ದು, ಭಾರತ ದಂಡ ಸಂಹಿತೆಯು (ಐಪಿಸಿ) ಈಗ ಭಾರತೀಯ ನ್ಯಾಯ ಸಂಹಿತೆಯಾಗಿದೆ (ಬಿಎನ್‌ಎಸ್). ಅಪರಾಧ ಪ್ರಕ್ರಿಯಾ ಸಂಹಿತೆಯು (ಸಿಆರ್‌ಪಿಸಿ) ಭಾರತೀಯ ನಾಗರಿಕ ಸುರಕ್ಷತಾ ಸಂಹಿತೆಯಾಗಿ ಮತ್ತು ಸಾಕ್ಷ್ಯ ಕಾಯ್ದೆಯು ಭಾರತೀಯ ಸಾಕ್ಷ್ಯ ಕಾಯ್ದೆಯಾಗಿ ಜಾರಿಗೆ ಬಂದಿದೆ.

ದೇಶದಲ್ಲಿ ಹೊಸ ಕ್ರಿಮಿನಲ್ ಕಾನೂನುಗಳು ಜಾರಿಗೆ ಬಂದ ಮೊದಲ ದಿನವೇ ರಾಜ್ಯದಲ್ಲಿ ರಾತ್ರಿ 8ಗಂಟೆವರೆಗೆ 63 ಎಫ್‌ಐಆರ್‌ಗಳು ದಾಖಲಾಗಿದ್ದು, ಪ್ರಥಮ ಎಫ್‌ಐಆರ್ ಹಾಸನ ಗ್ರಾಮಾಂತರ ಠಾಣೆಯಲ್ಲಿ ಇಂದು ಬೆಳಗ್ಗೆ 9.15ಕ್ಕೆ ದಾಖಲಾಗಿದೆ.

ಪ್ರಕರಣ ವಿವರ: ಹಾಸನ ಜಿಲ್ಲೆ ಹಳೇಬೀಡು ರಸ್ತೆಯ ಸೀಗೆಗೇಟ್ ಬಳಿ ಸೇತುವೆ ಮೇಲಿಂದ ಕಾರು ಉರುಳಿ ಬಿದ್ದು ಗೃಹಿಣಿ ಸಾವನ್ನಪ್ಪಿದ ಪ್ರಕರಣ ಬಿಎನ್‌ಎಸ್ ಅಡಿ ದಾಖಲಾದ ರಾಜ್ಯದ ಪ್ರಥಮ ಪ್ರಕರಣವಾಗಿದೆ.


ಈ ಅಪಘಾತದಲ್ಲಿ ಇಂದುಮತಿ(67) ಎಂಬುವರು ಸಾವನ್ನಪ್ಪಿದ್ದು, ಕಾಶಿಯಾತ್ರೆ ಮುಗಿಸಿ ಹಾಸನಕ್ಕೆ ದಂಪತಿ ಭಾನುವಾರ ಹಿಂತಿರುಗಿದ್ದರು. ಇಂದುಮತಿ ಪತಿ ಯೋಗೇಶ್ ಅವರು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಾಗರ್ ಎಂಬುವರ ಟ್ಯಾಕ್ಸಿಯಲ್ಲಿ ಪತ್ನಿಯೊಂದಿಗೆ ಬರುತ್ತಿದ್ದರು. ಇವರ ಕಾರು ಹಳೇಬೀಡು ರಸ್ತೆಯ ಸಮೀಪ ಸೇತುವೆ ಮೇಲಿಂದ ಉರುಳಿ ಬಿದ್ದು, ಇಂದುಮತಿ ಸಾವನ್ನಪ್ಪಿದರೆ, ಅವರ ಪತಿ ಯೋಗೇಶ್ ಮತ್ತು ಕಾರು ಚಾಲಕ ಸಾಗರ್ ಗಾಯಗೊಂಡರು.


ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ವಾಹನ ಚಾಲನೆ ಮಾಡಿದ ಕಾರು ಚಾಲಕ ಸಾಗರ್ ಮಹಿಳೆಯ ಸಾವಿಗೆ ಕಾರಣನಾಗಿದ್ದಾನೆಂದು ಅವರ ಅಳಿಯ ಹೆಚ್.ಎಸ್.ರವಿ ಎಂಬುವರು ಸೋಮವಾರ ಬೆಳಗ್ಗೆ 9.15ರಲ್ಲಿ ನೀಡಿದ ದೂರನ್ನು ಹಾಸನ ಗ್ರಾಮಾಂತರ ಠಾಣೆ ಪೊಲೀಸರು ರಾಜ್ಯದಲ್ಲಿ ಬಿಎನ್‌ಎಸ್ ಜಾರಿಯಾದ ನಂತರ ಪ್ರಥಮ ಪ್ರಕರಣವಾಗಿ ದಾಖಲಿಸಿಕೊಂಡಿದ್ದಾರೆ. ಎಫ್‌ಐಆರ್ ಅನ್ನು ಬಿಎನ್‌ಎಸ್ ಕಲಂ 281 ಮತ್ತು 106ರ ಅಡಿ ದಾಖಲಿಸಿಕೊಳ್ಳಲಾಗಿದೆ.

ದೇಶದಲ್ಲಿ ಇಂದು ಹೊಸ ಕ್ರಿಮಿನಲ್ ಕಾನೂನುಗಳು ಜಾರಿಯಾಗಿದ್ದು ಬ್ರಿಟಿಷರ ಕಾಲದ ಕ್ರಿಮಿನಲ್ ಕಾನೂನುಗಳಿಗೆ ಇತಿಶ್ರೀ ಹಾಡಲಾಗಿದೆ. ಹೊಸ ಕಾನೂನುಗಳಲ್ಲಿ 20 ಹೊಸ ಅಪರಾಧಗಳನ್ನು ಸೇರಿಸಲಾಗಿದೆ. 33 ಅಪರಾಧಗಳಿಗೆ ಶಿಕ್ಷೆ ಪ್ರಮಾಣ ಹೆಚ್ಚಿಸಲಾಗಿದೆ. 83 ಅಪರಾಧಗಳಿಗೆ ಅಧಿಕ ದಂಡ ವಿಧಿಸುವ ಜೊತೆಗೆ 23 ಅಪರಾಧಗಳಿಗೆ ಕಠಿಣ ಶಿಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ. ಹಣಕಾಸು ಅಥವಾ ಬೇರೆ ಯಾವುದೇ ಆಮಿಷ ಒಡ್ಡಿ ವಂಚಿಸಿದ ಪ್ರಕರಣವನ್ನು ಐಪಿಸಿ ಸೆಕ್ಷನ್ 420ರ ಅಡಿ ದಾಖಲಿಸಲಾಗುತ್ತಿತ್ತು. ಆದರೆ ಈಗ ಅದನ್ನು ಬಿಎನ್‌ಎಸ್ 318 ಅಡಿ ದಾಖಲಿಸಲಾಗುತ್ತದೆ. ಕೊಲೆ ಪ್ರಕರಣಕ್ಕೆ ಐಪಿಸಿ 302 ಬಳಸಲಾಗುತ್ತಿತ್ತು ಇದೀಗ ಬಿಎನ್‌ಎಸ್ 103 ಬಳಸಲಾಗುತ್ತದೆ.

ಅತ್ಯಾಚಾರಕ್ಕೆ ಐಪಿಸಿ ಸೆಕ್ಷನ್ 376 ಆಗಿದ್ದು ಇದೀಗ ಬಿಎನ್‌ಎಸ್ 64 ಆಗಿದೆ. ವರದಕ್ಷಿಣೆ ಕಿರುಕುಳಕ್ಕೆ ಬಳಸುತ್ತಿದ್ದ ಐಪಿಸಿ 304 ಬಿ ಇದೀಗ ಬಿಎನ್‌ಎಸ್ 80 ಆಗಿದೆ. ನಿರ್ಲಕ್ಷ್ಯದಿಂದ ಮರಣ (ರಸ್ತೆ ಅಪಘಾತ ಅಥವಾ ಇನ್ನಿತರ ಸಂದರ್ಭ) ಐಪಿಸಿ 304 ಎ ಬಳಸಲಾಗುತ್ತಿತ್ತು ಈ ಅಪರಾಧಕ್ಕೆ ಈಗ ಬಿಎನ್‌ಎಸ್ 106 ಬಳಸಲಾಗುತ್ತಿದೆ. ವ್ಯಕ್ತಿ ಅಪಹರಣಕ್ಕೆ ಬಳಸುತ್ತಿದ್ದ ಐಪಿಸಿ 359 ಅನ್ನು ಇದೀಗ ಬಿಎನ್‌ಎಸ್ 137 ಬಳಸಲಾಗುತ್ತದೆ

ಸಚಿವ ಭೈರತಿ ಸುರೇಶ್ ವಿರುದ್ಧ ವಿನಯ್ ಕುಲಕರ್ಣಿ ಅಸಮಾಧಾನ





ಭೈರತಿ ಸುರೇಶ್ ವಿನಯ್ ಕುಲಕರ್ಣಿ

ಬೆಂಗಳೂರು, ಜು.1– ಸಚಿವರಾದ ಬಳಿಕ ಎಲ್ಲದರಲ್ಲಿಯೂ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಸಚಿವ ಭೈರತಿ ಸುರೇಶ್ ವಿರುದ್ಧ ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ್ ಕುಲಕರ್ಣಿ ಆರೋಪ ಮಾಡಿದ್ದಾರೆ. ಈ ಹಿಂದೆ ದೆಹಲಿಗೆ ಹೋಗಿ ನಾಯಕರ ಭೇಟಿ ಮಾಡಿ ಭೈರತಿ ಸುರೇಶ್ ವಿರುದ್ಧ ದೂರು ಸಲ್ಲಿಸಿದ್ದರು. ಇದೀಗ ಮತ್ತೊಮ್ಮೆ ಅವರ ವಿರುದ್ಧ ಬಹಿರಂಗವಾಗಿ ವಿನಯ್ ಕುಲಕರ್ಣಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾವೆಲ್ಲರೂ ಸೇರಿದರೆ ಅವರು ಸಚಿವರು. ಅವರೇನು ಮೇಲಿಂದ ಬಂದಿಲ್ಲ. ಸಚಿವರು ಮೊದಲು ಶಾಸಕರೇ ಅಲ್ವಾ, ಅದನ್ನು ಅರ್ಥಮಾಡಿಕೊಳ್ಳಿ. ಅವರಿಗೂ ನೋಟಿಸ್ ಕೊಡಲೇಬೇಕಾಗುತ್ತದೆ. ಪ್ರಸಂಗ ಬಂದರೆ ದಾಖಲೆ ಕೊಡುತ್ತೇನೆ. ನಾನು ಭಯಪಡುವುದಿಲ್ಲ ಬಹಿರಂಗವಾಗಿಯೇ ಹೇಳುತ್ತೇನೆ. ಗೌರವ ಇಲ್ಲದ ಕಡೆ ನಾವು ಯಾಕೆ ಇರಬೇಕು ಎಂದು ಭೈರತಿ ಸುರೇಶ್ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ನಾನು ದೆಹಲಿಗೆ ಹೋಗಿದ್ದು ನಿಜ. ಪಕ್ಷದ ಮುಖಂಡರಿಗೆ ಏನು ಹೇಳಬೇಕು ಅದನ್ನು ಹೇಳಿದ್ದೇನೆ. ಎಲ್ಲಾ ಕಂಪನಿಗಳ ಬಗ್ಗೆ ತನಿಖೆ ಆಗಬೇಕು. ಯಾವ ಕಂಪನಿಗಳು ಗೋಲ್‌ಮಾಲ್ ಮಾಡಿವೆ ಅಂತಹ ಕಂಪನಿಗಳನ್ನು ಬ್ಲಾಕ್‌ಲಿಸ್ಟ್‌ಗೆ ಹಾಕಲಿ. ತನಿಖೆಗೆ ಎಂದು ನಾನು ಪತ್ರ ಕೊಟ್ಟು ಎರಡುವರೆ ತಿಂಗಳು ಆಗಿದೆ. 10–15 ಕಂಪನಿಗಳು ಇದ್ದಾವೆ ಎಂದಿದ್ದಾರೆ.

ಮಂತ್ರಿಗಳಿಗೆ ಬೇಕಾದ ಕಂಪನಿಗಳನ್ನು ಬ್ಲಾಕ್‌ಲಿಸ್ಟ್ ಹಾಕುವುದು, ಮಂತ್ರಿಗಳ ಆಪ್ತರ ಕಂಪನಿಗಳು ಹೋಗುವುದು (ಟೆಂಡರ್ ಆಗುವುದು ಬೇಡ) ಅದು ಸೂಕ್ತವಲ್ಲ, ಸಮಯ ಬಂದಾಗ ಮಾತಾಡುತ್ತೇನೆ. ಸಿಎಂ ಅವರ ಗಮನಕ್ಕೆ ಹಲವಾರು ಬಾರಿ ತಂದಿದ್ದೇನೆ. ಇಂತಹದನ್ನು ನಾವು ಸಹಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

12ನೇ ಶತಮಾನದಲ್ಲಿ ಕಾಮನ್ ಸಿವಿಲ್ ಕೋಡ್ ಜಾರಿಗೆ ತಂದ ಏಕೈಕ ವ್ಯಕ್ತಿ ಬಸವಣ್ಣ

ಆದರೀಗ ಎಷ್ಟೋ ಮಂದಿ ದೇಶದ ಪ್ರಧಾನಿಗಳಾದರೂ ಕಾಮನ್ ಸಿವಿಲ್ ಕೋಡ್ ಜಾರಿಗೊಳಿಸುವ ತಾಕತ್ತು ಒಬ್ಬರಿಗೂ ಇಲ್ಲವಾಯಿತು ; ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ವಿಷಾದ



ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಯಂತ್ಯುತ್ಸವದಲ್ಲಿ ಬಸವ, ಅಕ್ಕ ಮಹಾದೇವಿ ಹಾಗೂ ರೇಣುಕ ಅವರ ಫೋಟೋಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ಮೈಸೂರು,ಜು.1(ಪಿಎಂ)– ಎಷ್ಟೋ ಮಂದಿ ದೇಶದ ಪ್ರಧಾನಿಗಳಾದರೂ ಯಾರಿಗೂ ಕಾಮನ್ ಸಿವಿಲ್ ಕೋಡ್ (ಏಕರೂಪ ನಾಗರಿಕ ಸಂಹಿತೆ) ಜಾರಿಗೊಳಿಸುವ ತಾಕತ್ತು ಇಲ್ಲವಾಯಿತು. ಆದರೆ 12ನೇ ಶತಮಾನದಲ್ಲಿ ಕಾಮನ್ ಸಿವಿಲ್ ಕೋಡ್ ಜಾರಿಗೆ ತಂದ ಏಕೈಕ ವ್ಯಕ್ತಿ ಬಸವಣ್ಣ ಎಂದು ಪಾಂಡವಪುರದ ಶ್ರೀಕ್ಷೇತ್ರ ಬೇಬಿ ಮಠದ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಹೇಳಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ನೀಲಗಂಗಾ ಮಹಿಳಾ ಬಳಗದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಬಸವ, ಅಕ್ಕ ಮಹಾದೇವಿ ಹಾಗೂ ರೇಣುಕ ಜಯಂತ್ಯುತ್ಸವದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ತಳಸಮುದಾಯದವರನ್ನು ಮುಟ್ಟಿಸಿಕೊಳ್ಳಬಾರದು ಎಂಬ ಸ್ಥಿತಿ ಇದ್ದಾಗ 'ಇವ ನಮ್ಮವ' ಎಂದು ಸಮಾನತೆ ಕೊಟ್ಟಿದ್ದು ಶರಣ ಸಿದ್ಧಾಂತ. ಶರಣರು ಅನುಷ್ಠಾನಗೊಳಿಸಿದ ಎಷ್ಟೋ ವಿಚಾರಗಳನ್ನು ಈಗ ತಿರುಚಲಾಗಿದೆ. ಬಸವಾದಿ ಶರಣರ ಸಂಸ್ಕೃತಿ ಇಡೀ ಮನಕುಲಕ್ಕೆ ಕೂಡಿಬಾಳುವ ಸಂದೇಶ ನೀಡಿದೆ ಎಂದರು.

ಶರಣರು ಎಲ್ಲರನ್ನೂ ಒಂದಾಗಿ ಸೇರಿದರು. ಈಗ ಅಂತಹ ಸ್ಥಿತಿ ಇಲ್ಲ. ಬಸವ ಜಯಂತಿಯನ್ನು ಎಲ್ಲಾ ಸಮುದಾಯದವರು ಸೇರಿ ಆಚರಣೆ ಮಾಡಬೇಕು. ಆದರೆ ಈಗ ಬಸವ ಜಯಂತಿ ಎಂದರೆ ಲಿಂಗಾಯತರು ಮಾತ್ರ ಮಾಡಬೇಕು ಎನ್ನುವಂತಾಗಿದೆ. ಅನುಭವ ಮಂಟಪದಲ್ಲಿ ಎಲ್ಲಾ ಶರಣರು ಕೂಡಿಕೊಂಡಿದ್ದರು. ಆದರೆ ಈಗ ಮಡಿವಾಳ ಮಾಚೀದೇವರು ನಮ್ಮ ಜಾತಿಯೆಂದು ಮಡಿವಾಳರು ಕಟ್ ಮಾಡಿಕೊಂಡರು. ಮಾದಾರ ಚೆನ್ನಯ್ಯ ನಮ್ಮವರು ಎಂದು ಅವರು ಕಟ್ ಮಾಡಿಕೊಂಡರು. ಬಸವಣ್ಣನವರು ಎಲ್ಲರೂ ಒಂದಾಗಿರಲಿ ಎಂದು ಮಾಡಿದ್ದನ್ನು ಮತ್ತೆ ನಾವು ಬೇರೆ ಬೇರೆಯಾಗಿ ವಿಂಗಡಿಸುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ವೀರಶೈವ ಲಿಂಗಾಯತ ಧರ್ಮದಲ್ಲೂ ವಿವಿಧ ಪಂಗಡಗಳನ್ನು ಮಾಡಿಕೊಳ್ಳುವ ಮೂಲಕ ಭೇದ–ಭಾವ ಮಾಡಿಕೊಂಡಿದ್ದೇವೆ. ಹೀಗೆ ಮಾಡಿ ಲಿಂಗ ಕಟ್ಟಿಕೊಂಡರೆ ಸಾರ್ಥಕತೆಯಾದರೂ ಏನು? ನಮ್ಮ ಎದೆ ಮೇಲೆ ಲಿಂಗ ಭಾರವೆನ್ನಿಸಿದರೇ ಇದಕ್ಕಿಂತ ಅವಿವೇಕ ಬೇರೆ ಯಾವುದೂ ಇಲ್ಲ. ಎಲ್ಲಾ ಧರ್ಮಗಳಲ್ಲೂ ದೇವರನ್ನು ಕಟ್ಟಿಕೊಂಡು ಓಡಾಡಲು ಸಾಧ್ಯವಿಲ್ಲವೆಂದು ದೇವರನ್ನು ಮನೆಯಲ್ಲಿ ಇಟ್ಟಿದ್ದರೆ, ವೀರಶೈವ ಲಿಂಗಾಯತ ಧರ್ಮವು ಎದೆ ಮೇಲೆ ಕಟ್ಟಿಕೊಂಡು ಓಡಾಡುವ ತಾಕತ್ತು ತೋರಿದೆ ಎಂದು ತಿಳಿಸಿದರು.

ಹಾನಗಲ್ ಕುಮಾರಸ್ವಾಮಿಗಳು ಇದ್ದಂತಹ ಸಂದರ್ಭದಲ್ಲಿ 23 ಸಾವಿರ ಮಠಗಳಿದ್ದವು. 110 ವರ್ಷಕ್ಕೆ ಇಂದು 3,100 ಮಠಗಳಿಗೆ ಇಳಿಕೆಯಾಗಿದ್ದು, ಇನ್ನಷ್ಟು ವರ್ಷಗಳು ಕಳೆದರೆ ಎಷ್ಟು ಮಠಗಳು ಉಳಿಯಬಹುದು ಎಂದು ಗಂಭೀರವಾಗಿ ಚಿಂತನೆ ಮಾಡಬೇಕಿದೆ. ಇಂದು ಪರಸ್ಪರರಲ್ಲಿ ಬಾಂಧವ್ಯವೇ ಇಲ್ಲವಾಗಿದೆ. ಎಲ್ಲವೂ ವ್ಯವಹಾರಿಕವಾಗುತ್ತಿದ್ದು, ಗೀವ್ ಅಂಡ್ ಟೇಕ್, ಟೇಕ್ ಅಂಡ್ ಗೀವ್ ಎನ್ನುವಂತಾಗಿದೆ. ಮಠಕ್ಕೆ ಹೋದರೆ ಯಾವ ರೀತಿ ವ್ಯವಹಾರಿಕ ಪ್ರಯೋಜನ ಆಗುತ್ತದೆ ಎಂದು ಚಿಂತಿಸುವ ಕಾಲಘಟ್ಟದಲ್ಲಿದ್ದೇವೆ ಎಂದು ವಿಷಾದಿಸಿದರು.

ಧರ್ಮ ಎನ್ನುವುದು ಶೋಷಣೆಯಲ್ಲ. ಅದು ಪೋಷಣೆಯಾಗಿದ್ದು, ನಾವು ಧರ್ಮದ ಪೋಷಣೆ ಮಾಡಲು ಬಂದಿರುತ್ತೇವಷ್ಟೇ. ಬಸವಣ್ಣನವರು ಶ್ರಮವಹಿಸಿ ಮಾಡಿದ್ದನ್ನು ಉಳಿಸಿ ಬೆಳೆಸಲು ನಮ್ಮಿಂದ ಆಗುತ್ತಿಲ್ಲ ಎಂಬ ದುಃಖ ನನ್ನನ್ನು ಕಾಡುತ್ತಿದೆ. ಅಖಂಡ ವೀರಶೈವ ಲಿಂಗಾಯತ ಧರ್ಮವನ್ನು ನಾವಿಂದು ವಿಂಗಡಣೆ ಮಾಡುತ್ತಿದ್ದೇವೆ. ಹೀಗೆ ವಿಂಗಡಿಸುವುದು ಶರಣ ಸಂಸ್ಕೃತಿಯಲ್ಲ. ಅದೇನಿದ್ದರೂ ಕೂಡಿಸುವ ಸಂಸ್ಕೃತಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು. ಇದಕ್ಕೂ ಮುನ್ನ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವರಕೋಡು ಶಿಕ್ಷ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ದೇವರಾಜು ಪಿ.ಚಿಕ್ಕಹಳ್ಳಿ (ದೇಚಿ) ಮಾತನಾಡಿ, ಬಸವಾದಿ ಶರಣರ ಚಿಂತನೆಯಲ್ಲಿ ಎಲ್ಲದಕ್ಕೂ ಮದ್ದು ಇದೆ. ಆದರೆ ಆ ಬಗ್ಗೆ ನಮಗೆ ಆಸಕ್ತಿ ಇಲ್ಲವಾಗುತ್ತಿದೆ. ವಚನಗಳ ಪರಿಪಾಲನೆ ಮಾಡಬೇಕಿರುವ ಮಹತ್ವವನ್ನು ನಾವು ಅರಿಯಬೇಕು. ನೆಲ–ಗಡಿ ಯೋಗಿಗಳ ಸ್ಮರಣೆಗೆ ಶರಣರು ಮಹತ್ವ ನೀಡಿದ್ದಾರೆ. ಶರಣರ ವಚನಗಳಲ್ಲಿ ಯಾವುದೇ ಕಟ್ಟು ಕಥೆ ಇಲ್ಲ. ಅವುಗಳು ಅವರ ಅನುಭವ ಮತ್ತು ಅನುಭಾವದಲ್ಲಿ ಸೃಜಿಸಿವೆ ಎಂದರು.

ಶರಣರ ವಚನ ಸಾಹಿತ್ಯವನ್ನು ಮಕ್ಕಳು ಹಾಗೂ ಯುವ ಜನರಿಗೆ ವಿಶೇಷವಾಗಿ ತಿಳಿಸಲು ಹೆಚ್ಚು ಆದ್ಯತೆ ನೀಡಬೇಕಿದೆ. ಆಗ ನಮ್ಮ ಸಮಾಜವು ಶರಣರ ತತ್ವದೊಂದಿಗೆ ಸ್ವಾಸ್ಥ್ಯದಿಂದ ಮುಂದೆ ಸಾಗಲಿದೆ ಎಂದು ಹೇಳಿದರು. ನೀಲಗಂಗಾ ಮಹಿಳಾ ಬಳಗದ ಅಧ್ಯಕ್ಷೆ ಗೀತಾ ರಾಜಶೇಖರ್, ನಿವೃತ್ತ ಶಿಕ್ಷಕಿ ಮಂಗಳಾ ಮುದ್ದುಮಾದಪ್ಪ, ಹಿರಿಯ ಛಾಯಾಚಿತ್ರ ಪತ್ರಕರ್ತ ಜಂಬುಕೇಶ್ವರ ಸೇರಿದಂತೆ ಬಳಗದ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಒಬ್ಬ : ಈ ಸಲಾನೂ ಎಲ್ಲಾ ಸಬ್ಜೆಕ್ಟ್ ಫೇಲು. ತುಂಬಾ ಬೇಜಾರಾಗ್ತಿದೆ.
ಇನ್ನೊಬ್ಬ : ಹೂ ಕಣೋ. ನಂದೂ ಅಷ್ಟೆ, ಎಲ್ರೂ ಆತ್ಮಹತ್ಯೆ ಮಾಡ್ಕೊಂಡು ಬಿಡೋಣ್ವಾ?
ಮತ್ತೊಬ್ಬ : ಬೇಡಪ್ಪಾ... ಆಮೇಲೆ ಮುಂದಿನ ಜನ್ಮದಲ್ಲಿ ಮತ್ತೆ ಎಲ್‌ಕೆಜಿಯಿಂದ ಓದಬೇಕಾಗುತ್ತೆ.

ಮೈಸೂರು ಮಿತ್ರ

ಮಂಗಳವಾರ, 2 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಿಯವರೆಗೂ ಉಪಯೋಗಕ್ಕೆ ಬರುತ್ತೀಯೋ ಅಲ್ಲಿಯವರೆಗೂ ಜನರು ನಿನ್ನನ್ನು ಪ್ರೀತಿಸುತ್ತಾರೆ.–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೃತ್ಯು ಬಂದ ಮೇಲೆ ವೈದ್ಯ ಬಂದ.

ನಿಮ್ಮ ಪತ್ರಗಳು

ಮುಡಾ (MUDA) ಅವ್ಯವಹಾರಗಳಿಗೆ ಮಂಗಳ ಹಾಡೋದು ಯಾವಾಗ?

ಮಾನ್ಯರೆ,

ಕಳೆದ ಒಂದು ವಾರದಿಂದ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅವ್ಯವಹಾರಗಳ ಬಗೆಗಿನ ವರದಿಗಳನ್ನು ನೋಡಿದರೆ

MUDA ಎಂದರೆ
M = ಮಧ್ಯವರ್ತಿಗಳ
U = ಉಳ್ಳವರ
D = ಡೆವಲಪ್ಮೆಂಟ್
A = ಅಥಾರಿಟಿ ಅನ್ನೋ ಹಾಗೆ ಭಾಸವಾಗುತ್ತಿದೆ

ಸೂರಿಲ್ಲದ, ಬಡ ಮಧ್ಯಮ ವರ್ಗದ ಜನರಿಗೆ ಒಂದು ಆಶ್ರಯ ಕಲ್ಪಿಸುವ ಸದುದ್ದೇಶದಿಂದ ರಚಿತವಾದ ಪ್ರತಿಷ್ಠಿತ ಪ್ರಾಧಿಕಾರ ತನ್ನ ಮೂಲ ಉದ್ದೇಶವನ್ನೇ ಬದಿಗಿಟ್ಟು ಶ್ರೀಮಂತರ – ಭೂದಾಹಿಗಳ ಏಳಿಗೆಗೆ ಕಂಕಣ ಕಟ್ಟಿ ನಿಂತಿದೆ. ಸುಮಾರು 85 ಸಾವಿರ ನಿವೇಶನ ಆಕಾಂಕ್ಷಿಗಳ ಅರ್ಜಿ ಕೊಳೆಯುತ್ತಾ ಬಿದ್ದಿದ್ದರೂ 50:50ರ ಅನುಪಾತದಲ್ಲಿ ಹಾಗೂ ಇನ್ಸೆಂಟಿವ್ ನಿವೇಶನಗಳನ್ನು ಬೇಕಾಬಿಟ್ಟಿ ಹಂಚಿಕೆ ಮಾಡಿದ್ದಾರೆ.

ಇನ್ನು ಪತ್ರಿಕೆಯಲ್ಲಿ ಬಂದಂತೆ ಈ ಆಕ್ಷನ್ ಸೈಟ್ ಬೇಕಿದ್ದರೂ ಅದಕ್ಕೂ ಆಕ್ಷನ್ ಕಟ್ ಹೇಳುವ ಚಾಲಾಕಿಗಳಿದ್ದಾರೆ ಅನ್ನೋ ವಿಷಯವಂತೂ ಮುಡಾದಲ್ಲಿನ ಪಾರದರ್ಶಕತೆಯನ್ನು ಅಣಕಿಸುವಂತೆ ಮಾಡಿದೆ. ಸಾವಿರಾರು ಕೋಟಿ ನಷ್ಟವಾಗುವಂತೆ ಆಗಿದೆ ಎಂಬ 'ಮೈಸೂರು ಮಿತ್ರ'ನ ವರದಿ ನಿಜಕ್ಕೂ ಮೈಸೂರಿನ ಕಳಕಳಿಯುಳ್ಳ ನಾಗರಿಕರನ್ನು ಬೆಚ್ಚಿ ಬೀಳಿಸಿದೆ.

ಇನ್ನು ಕಡತ ನಾಪತ್ತೆ, ಮಧ್ಯವರ್ತಿಗಳೇ ಪ್ರತಿ ಕೆಲಸಕ್ಕೆ ದರ ನಿಗದಿ ಮಾಡಿ ಕೆಲಸ ಮಾಡಿಸಿಕೊಡುವ ಹಗಲುದರೋಡೆ, ಮುಡಾದಲ್ಲಿ ಸಾಮಾನ್ಯವೇ ಆದರೂ ಈಗಿನ ಪ್ರಕರಣ ಮುಡಾ ಅಸ್ತಿತ್ವವನ್ನೇ ಅಲುಗಾಡಿಸುವಂತಹದ್ದು. ಆಸ್ತಿ ತೆರಿಗೆ ಕಟ್ಟಲು ಒಂದು PID ಮಾಡಿಸಲು ದಿನಗಟ್ಟಲೇ ಕಾಯಬೇಕು. ಸೂಕ್ತ ಮಾಹಿತಿ ನೀಡದೆ ಸಾರ್ವಜನಿಕರನ್ನು ಅಲೆದಾಡಿಸುವುದರಲ್ಲಿ ಅಧಿಕಾರಿಗಳಿಗೆ ಅದೇನೋ ಒಂಥರ ಮಜಾ, ಪಿಎಂಒ ಕಚೇರಿಯ ಸಿಬ್ಬಂದಿಗಳಾದರೂ ಸ್ವಲ್ಪ ಸೌಜನ್ಯದಿಂದ ವರ್ತಿಸುತ್ತಾರೆ. ಆದರೆ ಇಲ್ಲಿನ ಸಿಬ್ಬಂದಿ ಮಾತ್ರ ತೀರಾ ಭಿನ್ನ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇ, ಇದರ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಸೂಕ್ತ ತನಿಖೆ ಮೂಲಕ ಮುಡಾವನ್ನು ಭ್ರಷ್ಟರ ಕಪಿಮುಷ್ಟಿಯಿಂದ ಬಿಡಿಸಿ ಮುಡಾದಲ್ಲಿ ದಶಕಗಳಿಂದ ಬೀಡು ಬಿಟ್ಟಿರುವ ಅಧಿಕಾರಿಗಳನ್ನು ವರ್ಗಾಯಿಸಿ ತಪ್ಪಿತಸ್ಥರಿಗೆ ಶಿಕ್ಷೆ ದೊರಕುವಂತೆ ಮಾಡಿದರೆ ಮಾತ್ರ ಮುಡಾ ಸಾರ್ವಜನಿಕರಿಗೆ ಸೂರು ಒದಗಿಸುವ ಸಂಸ್ಥೆ ಆದೀತು. ಇಲ್ಲವಾದಲ್ಲಿ ಮಧ್ಯವರ್ತಿಗಳ –ಉಳ್ಳವರ –ಅಧಿಕಾರಿಗಳಿಗೆ ಮಾತ್ರ ಅಕ್ಷಯ ಪಾತ್ರೆ ಆಗಲಿದೆ.

–ನಾಗೇಂದ್ರ ಕಿಲಗೆರೆ, ಮೈಸೂರು.

ಎಲ್ಲರೂ ಒಂದೇ ತಕ್ಕಡಿಯಲ್ಲಿರುವವರೇ!

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಇದುವರೆಗೂ ನಡೆದಿರುವ ಭ್ರಷ್ಟಾಚಾರ, ಹಗರಣಗಳು ಆಯಾಯ ಕಾಲದ ಆಡಳಿತರೂಢ ರಾಜಕೀಯ ಪಕ್ಷಗಳ ನಾಯಕರ ಆಣತಿಯಂತೆಯೇ. ಈಗ ನಡೆದಿರುವ ಭಾರಿ ಹಗರಣವನ್ನು ಮತ್ತೊಂದು ರಾಜಕೀಯ ಪಕ್ಷದ ನಾಯಕರು, ನಾವು ಬಯಲಿಗೆಳೆದಿದ್ದೇವೆ. ಇದರಲ್ಲಿ ಅವರಿದ್ದಾರೆ, ಇವರಿದ್ದಾರೆ!! ಅವರು ರಾಜೀನಾಮೆ ನೀಡಬೇಕು ಎಂದೆಲ್ಲಾ ಬೊಬ್ಬೆ ಹೊಡೆಯುತ್ತಿದ್ದಾರೆ. ಇಂತಹವರು ಕಾನೂನಾತ್ಮಕವಾಗಿ ಈ ಹಗರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಾರಾ ಎಂಬ ಪ್ರಶ್ನೆ ಜನರನ್ನು ಕಾಡದೇ ಇರದು. ಕಾರಣ ಇಲ್ಲಿವರೆಗೆ ನಡೆದ ಮುಡಾ ಹಗರಣದಲ್ಲಿ ಒಬ್ಬರಿಗೂ ಶಿಕ್ಷೆಯಾಗಲಿ, ಭ್ರಷ್ಟರಿಂದ ನಷ್ಟ ವಸೂಲಿಯಾಗಲೀ, ಮುಡಾ ಆಸ್ತಿ ಸಂರಕ್ಷಣೆ ಆಗಲಿ ಆಗಿಲ್ಲ. ಹಾಗಾಗಿ ಈಗ ಹಗರಣದ ಬಗೆಗಿನ ಪ್ರಸ್ತಾಪ 'ಪ್ರಸಾದ'ದ ನಂತರ ಪೂಜೆ ಸಮಾಪ್ತಿಯಾದಂತಾಗಬಾರದೆಂದರೆ **ಮೈಸೂರಿನ ಸಾಮಾಜಿಕ ಹೋರಾಟ ಸಂಸ್ಥೆಗಳು ಕೋರ್ಟ್‌ಗೆ ವಿಷಯ ಕೊಂಡೊಯ್ದು, ಕೇಂದ್ರದ ತನಿಖಾ ಸಂಸ್ಥೆ ಮೂಲಕ ವಿಚಾರಣೆ ಆಗುವಂತೆ ಮಾಡಿದರೆ ಮಾತ್ರ ಮುಡಾಗೆ ಉಳಿಗಾಲ.** ದಯವಿಟ್ಟು ಆ ನಿಟ್ಟಿನಲ್ಲಿ ಪ್ರಯತ್ನ ಸಾಗಲಿ.

–ರಾಮಲಿಂಗು, ಅಗ್ರಹಾರ, ಮೈಸೂರು.

ಡಾಂಬರೀಕರಣ ಮಳೆಯಲ್ಲಿ, ಜನರ ತೆರಿಗೆ ಸೋರಿಕೆ



ಮಾನ್ಯರೇ,

ಇದು ಕುಕ್ಕರಹಳ್ಳಿ ಕೆರೆಯ ಪಕ್ಕದ ಗದ್ದಿಗೆ ರಸ್ತೆ. ಈ ರಸ್ತೆ ಏನು ಅಷ್ಟೊಂದು ಕೆಟ್ಟಿರಲಿಲ್ಲ ನಗರದ ತುಂಬಾ ಹಾಳಾಗಿರುವ ನೂರಾರು ರಸ್ತೆಗಳಿವೆ. ಆದರೆ ನಮ್ಮ ಬುದ್ಧಿಗೇಡಿ ಆಡಳಿತ ವ್ಯವಸ್ಥೆ ಈ ಚೆನ್ನಾಗಿರುವ ರಸ್ತೆಗೆ ಮಳೆ ಬೀಳುತ್ತಿದ್ದರೂ ಡಾಂಬರು ಕಾಮಗಾರಿ ಮಾಡಿಸುತ್ತಿದೆ. ಇದು ಯಾವ ಪುರುಷಾರ್ಥಕ್ಕೆ? ಅಥವಾ ಯಾರ ಯಾರ ಜೇಬು ತುಂಬಿಸಲು? ಆಹಾ ಇವರ ಹಗಲುದರೋಡೆಯನ್ನು ಕೊಂಡಾಡಬೇಕು. ಒಂದಂತೂ ನಗ್ನಸತ್ಯ. ಸಾರ್ವಜನಿಕರ ತೆರಿಗೆ ಹಣ ಇಂಜಿನಿಯರ್‌ಗಳು, ಗುತ್ತಿಗೆದಾರರ ಪಾಲಾಗುತ್ತಿದೆ. ಮಳೆ ಬೀಳುತ್ತಿದ್ದರೂ ಡಾಂಬರು ಹಾಕುವ, ಮಾಸ್ಟರ್ ಪ್ಲಾನಿಗೆ ಸಾರ್ವಜನಿಕರು ಛೀಮಾರಿ ಹಾಕುತ್ತಿದ್ದಾರೆ. **–ವಿಜಯ್ ಕೆ.ಎ. ಬೋಗಾದಿ 2ನೇ ಹಂತ, ಮೈಸೂರು**

ಚಾಮುಂಡೇಶ್ವರಿ ದರ್ಶನಕ್ಕೆ ಪ್ರತ್ಯೇಕ ಸಾಲುಗಳ ಜೊತೆಗೆ ಭದ್ರತೆ ಹೆಚ್ಚಾಗಲಿ

ಮಾನ್ಯರೆ,

ಭವ್ಯ ಪರಂಪರೆಯುಳ್ಳ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಪ್ರತಿವರ್ಷ ಆಷಾಢ ಮಾಸದಲ್ಲಿ ದೇವಿ ದರ್ಶನ ಪಡೆಯಲು ಪ್ರತಿ ಶುಕ್ರವಾರಗಳಂದು ವಿಪರೀತ ಜನರು ಬರುತ್ತಾರೆ. ಈಗಾಗಲೇ ಇದೇ ತಿಂಗಳು 12, 19, 26 ಮತ್ತು ಆಗಸ್ಟ್ 2ರ ಆಷಾಢ ಶುಕ್ರವಾರ ಪೂಜೆಗೆ ಆಗಮಿಸುವ ಚಾಮುಂಡೇಶ್ವರಿ ದೇವಿಯ ಭಕ್ತಾದಿಗಳಿಗೆ ಪುರುಷರು, ಮಹಿಳೆಯರು, ಹಿರಿಯ ನಾಗರಿಕರಿಗೆ ಪ್ರತ್ಯೇಕ ಸಾಲುಗಳಾಗಬೇಕು. ಒಂದೇ ಸಾಲಿನಲ್ಲಿ ಮೈ ಕೈ ತಾಗಿಸಿ ಮುಜುಗರ ಉಂಟಾಗುವುದು, ಜಗಳ, ಹೊಡೆದಾಟಗಳಾಗುವುದಕ್ಕೆ ಅವಕಾಶವಾಗಬಾರದು. ಜಿಲ್ಲಾಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು ಇದನ್ನು ಸೂಕ್ಷ್ಮವಾಗಿ ಗಮನಿಸಿ, ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡಲು ಮುಂದಾಗಬೇಕು. ಮತ್ತು ಆಷಾಢ ಶುಕ್ರವಾರಗಳಂದು ಚಾಮುಂಡೇಶ್ವರಿ ದರ್ಶನಕ್ಕೆ ವಿಶೇಷ ಸಮಯ ನಿಗದಿಯಾಗಬೇಕು. ಮುಂಜಾನೆಯ 2, 3, 4 ಗಂಟೆಯಲ್ಲಿ ಬೆಟ್ಟಕ್ಕೆ ಮೆಟ್ಟಿಲುಗಳ ಮೂಲಕ ಆಗಮಿಸುವುದರಿಂದ ಭಕ್ತಾದಿಗಳಿಗೆ ವಿಶೇಷ ದರ್ಶನ ಪಡೆಯಲು ಅವಕಾಶ ಕಲ್ಪಿಸಬೇಕು. ಈಗಾಗಲೇ ನಗರದಾದ್ಯಂತ ಸರಗಳ್ಳತನದ ಸದ್ದು ಸುದ್ದಿಯಾಗುತ್ತಿದೆ. ಆದ್ದರಿಂದ ಮಹಿಳೆಯರು, ಪುರುಷರು ತಮ್ಮ ತಮ್ಮ ಬೆಲೆಬಾಳುವ ವಸ್ತುಗಳಿಗೆ ತಾವೇ ಜವಾಬ್ದಾರರಾಗಿ ಜೋಪಾನ ಮಾಡಿಕೊಳ್ಳಬೇಕು. ಪೊಲೀಸರು ಸಹ ಕಟ್ಟೆಚ್ಚರ ವಹಿಸುವುದು ಅವಶ್ಯ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಹುಮುಖಿ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಕರ್ನಾಟಕದ 'ವಚನಗುಮ್ಮಟ' ಫ.ಗು.ಹಳಕಟ್ಟಿ



ಡಾ.ಫ.ಗು. ಹಳಕಟ್ಟಿ

ಇಂದು ಶ್ರೀಯುತರ ಜಯಂತಿ

ಕರ್ನಾಟಕತ್ವವೆಂದರೆ ದೇಶದ ಸಂಸ್ಕೃತಿಯ ಅರಿವು ಮತ್ತು ಅದನ್ನು ಅರಿತು ಆಚರಿಸುವುದು. ಇಂಥ ಆಚರಣೆಯೇ ದೇಶದ ಪ್ರಗತಿಯ ಕುರುಹು. ಆದರೆ ಈಗಿನ ಕರ್ನಾಟಕಸ್ಥರು ತಮ್ಮದನ್ನು ತಾವು ಮರೆತು ಬಿಟ್ಟಿರುವರು. ಕರ್ನಾಟಕ ಪೂರ್ವ ಕಾಲದಿಂದಲೂ ಪ್ರಸಿದ್ಧವಾದ ನಾಡು. ಇಲ್ಲಿ ಹುಟ್ಟಿದ ಮಹಾ ವಿಭೂತಿಗಳು ಹಿಂದೂ ಧರ್ಮದ ಜ್ಞಾನಮಂದಿರದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಅವರ ಅರಿವು ನಮ್ಮಲ್ಲಿ ಸಂಪೂರ್ಣವಾಗಿ ಹಾರಿಹೋಗಿದೆ ಮತ್ತು ಈಗ ನಾವು ದುರ್ಬಲರು ನಮ್ಮಿಂದೇನೂ ಆಗಲಾರದು ಎಂಬ ಭಾವನೆಯನ್ನು ತಾಳಿಕೊಂಡು ಹತಾಶರಾಗಿ ಉಳಿದಿದ್ದೇವೆ. ಈ ದುಸ್ಥಿತಿಯನ್ನು ತೊಲಗಿಸುವುದರಲ್ಲಿಯೇ ಕರ್ನಾಟಕತ್ವದ ಮಹತ್ವವು ಇದೆ..." ಹೀಗೆಂದು 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಸುಮಾರು ನೂರು ವರ್ಷಗಳ ಹಿಂದೆಯೇ ಖ್ಯಾತ ಸಾಹಿತಿ, ಹೆಸರಾಂತ ಪತ್ರಕರ್ತ ಹಾಗೂ ಸುಪ್ರಸಿದ್ಧ ಸಂಶೋಧಕ ಡಾ.ಫ.ಗು. ಹಳಕಟ್ಟಿಯವರು ನುಡಿದಿದ್ದರು. ಕನ್ನಡ ನಾಡು–ನುಡಿ, ತಾಯ್ನೆಲದ ಸ್ಥಿತಿ–ಗತಿ ಬಗ್ಗೆ ಆ ಕಾಲದಲ್ಲೇ ಅಷ್ಟೊಂದು ಕಾಳಜಿ ಹೊತ್ತು ಕನ್ನಡದ ಅಭಿವೃದ್ಧಿಯ ಕನಸು ಕಂಡ ಕನ್ನಡ ಕಟ್ಟಾಳು ಅವರು. ಬರೀ ಕಾಳಜಿ ಅಥವಾ ಬರೀ ಕನಸು ಕಾಣುವುದರಿಂದ ಪ್ರಯೋಜನ ಆಗದೆಂದು ನಂಬಿದ್ದ ಅವರು ಕ್ರಿಯಾತ್ಮಕವಾಗಿ ಕಂಡ ಕನ್ನಡ ಸಾಹಿತ್ಯ ಪರ ಕನಸುಗಳಿಗೆ ಬಹು ಮುತುವರ್ಜಿಯಿಂದ ನೀರೆರೆದು, ಎದೆಯಲ್ಲಿದ್ದ ಆಸೆಗಳು ಬತ್ತಿ ಹೋಗದಂತೆ ಜೀವತುಂಬಿ ಕನ್ನಡ ಸಾರಸ್ವತ ಲೋಕ ಮತ್ತು ಪತ್ರಿಕಾರಂಗದ ಉಭಯ ಕ್ಷೇತ್ರಗಳಲ್ಲೂ ಅದ್ಭುತವಾದುದನ್ನೇ ಸಾಧಿಸಿ ಅದರಲ್ಲೂ ವಚನ ಸಾಹಿತ್ಯದಲ್ಲಿ ಅತ್ಯದ್ಭುತವನ್ನು ಮಾಡಿ ವಚನ ಪಿತಾಮಹರೆನಿಸಿ ನಾಡಿಗೆ ಅಮೋಘ ಕೊಡುಗೆಗಳನ್ನಿತ್ತ ಕನ್ನಡದ ಅನರ್ಘ್ಯರತ್ನರಿವರು. ಶಿಕ್ಷಣ, ಸಾಹಿತ್ಯ, ಸಹಕಾರ, ಪ್ರಕಟಣೆ ಪತ್ರಿಕೋದ್ಯಮ, ರಾಜಕೀಯ.... ಹೀಗೆ ನಾಡಿನ ಬಹುತೇಕ ಕ್ಷೇತ್ರಗಳಲ್ಲಿ ಬಹುಶ್ರುತ ಪ್ರತಿಭೆಯಾಗಿ ಹೊಳೆದ ಇವರು ವಿಶೇಷವಾಗಿ ವಿಶ್ವಸಾಹಿತ್ಯದೆತ್ತರಕ್ಕೆ ಕನ್ನಡದ ವಚನ ಸಾಹಿತ್ಯವನ್ನು ಬೆಳೆಸಿದರು. ನಾಡವರಿಂದ ಕನ್ನಡದ ಮ್ಯಾಕ್ಸ್‌ಮುಲ್ಲರ್ ಎಂದು ಹೊಗಳಿಸಿಕೊಂಡರು.

ಒಮ್ಮೆ 'ಕನ್ನಡ ಕಣ್ವ' ಬಿಎಂಶ್ರೀ ಅವರು ಕನ್ನಡ ರಾಜ್ಯೋತ್ಸವ ಸಮಾರಂಭವೊಂದರ ನಿಮಿತ್ತ ಬಿಜಾಪುರಕ್ಕೆ ಹೋಗಿದ್ದರಂತೆ. ಆ ಸಂದರ್ಭದಲ್ಲಿ ಅಲ್ಲಿನ ಸಂಘಟಕರು ವಿಶ್ವವಿಖ್ಯಾತಿ ಪಡೆದಿದ್ದ ಬಿಜಾಪುರದ ಗೋಳಗುಮ್ಮಟ ನೋಡುವಂತೆ ಇವರನ್ನು ಕರೆದಾಗ ನಸುನಕ್ಕ ಬಿಎಂಶ್ರೀ ಅವರು ಗೋಳಗುಮ್ಮಟಕ್ಕಿಂತ ಮುಖ್ಯವಾಗಿ ನಾನು ಇಲ್ಲಿರುವ 'ವಚನ ಗುಮ್ಮಟ'ವನ್ನು ನೋಡಬೇಕೆಂದಾಗ, ಯಾವುದೀ ವಚನ ಗುಮ್ಮಟವೆಂದು ಒಂದು ಕ್ಷಣ ಸಂಘಟಕರು ತಲೆಕೆರೆದುಕೊಳ್ಳತೊಡಗಿದರಂತೆ ಆಗ ಬಿಎಂಶ್ರೀ ಅವರೇ ನುಡಿದರಂತೆ ಆ ವಚನ ಗುಮ್ಮಟ ಬೇರಾರೂ ಅಲ್ಲ ವಚನ ಬ್ರಹ್ಮರೆಂದೇ ಹೆಸರಾಗಿರುವ ಫ.ಗು.ಹಳಕಟ್ಟಿಯವರೆಂದು. ಆ ಕಾಲದಲ್ಲಿ ಬಿಜಾಪುರಕ್ಕೆ ಭೇಟಿ ನೀಡಿದ ಸಾಹಿತ್ಯ ಪ್ರೇಮಿಗಳು ಸಾಮಾನ್ಯವಾಗಿ ಈ 'ವಚನ ಗುಮ್ಮಟ' ದರ್ಶನ ಮಾಡಿಯೇ ಬರುತ್ತಿದ್ದರಂತೆ.

ಹೀಗೆ ಬಿಎಂಶ್ರೀ ಅವರಂಥ ದಿಗ್ಗಜರಿಂದ 'ವಚನ ಗುಮ್ಮಟ' ವೆಂದು ಅಭಿಮಾನದಿಂದ ಕರೆಸಿಕೊಂಡ ಫ.ಗು. ಹಳಕಟ್ಟಿ ಹುಟ್ಟಿದ್ದು 1880ರ ಜುಲೈ 2ರಂದು ಧಾರವಾಡದಲ್ಲಿ. ತಂದೆ ಗುರುಬಸಪ್ಪ ಹಳಕಟ್ಟಿ, ತಾಯಿ ದಾನಾದೇವಿ. ಇವರ ಪೂರ್ಣ ಹೆಸರು ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಎಂದಿದ್ದರೂ ಹೆಸರಾದದ್ದು ಮಾತ್ರ ಫ.ಗು. ಹಳಕಟ್ಟಿ ಎಂದೇ! ಹಳಕಟ್ಟಿ ಎಂಬುದು ಇವರ ಮನೆತನದ ಹೆಸರು. ತಂದೆ ಗುರುಬಸಪ್ಪ ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದರು. ಇಂಗ್ಲೆಂಡಿನ ಇತಿಹಾಸ, ಏಕನಾಥ ಸಾಧುಗಳ ಚರಿತೆ, ಫ್ರಾನ್ಸ್ ದೇಶದ ರಾಜ್ಯಕ್ರಾಂತಿ, ಸಿಕಂದರ ಬಾದಶಹನ ಚರಿತ್ರೆ ಮುಂತಾದ ಕೃತಿಗಳನ್ನು ರಚಿಸಿ ಆ ಕಾಲಕ್ಕೇ ಸಾಹಿತಿಗಳಾಗಿ ಸಾಕಷ್ಟು ಹೆಸರುಗಳಿಸಿದ್ದರು. ಜೊತೆಗೆ ಆಗಿನ ಪ್ರಮುಖ ಪತ್ರಿಕೆಯಾದ ವಾಗ್ಭೂಷಣದಲ್ಲಿ ಹಲವಾರು ಲೇಖನಗಳನ್ನು ಬರೆದು ನಾಡಿನ ಗಮನ ಸೆಳೆದಿದ್ದರು. ಇಂಥವರ ಮಗ ಫ.ಗು. ಹಳಕಟ್ಟಿ ಎಂದರೆ ಕೇಳಬೇಕೆ? ಸಾಹಿತ್ಯ ವೆಂಬುದು ಇವರಿಗೆ ರಕ್ತಗತವಾಗಿ ಒಲಿದು ಬಂದಿತ್ತು. ಇದಕ್ಕೆ ತಕ್ಕಹಾಗೆ ಮಗ ಒಳ್ಳೆಯ ಸಾಹಿತಿಯಾಗಿ ಮುಂದೊಂದು ದಿನ ಕನ್ನಡ ನಾಡಿಗೆ ಕೀರ್ತಿತರ ಲೆಂಬ ಹೆಬ್ಬಯಕೆಯಿಂದ ಎಳೆಯ ವಯಸ್ಸಿನಲ್ಲೇ ಮಗನಿಗೆ ಪ್ರೋತ್ಸಾಹದ ಹಾಲೆರೆದಿದ್ದರು. ಹೀಗಾಗಿ ತಂದೆ ಹಾಕಿಕೊಟ್ಟ ಸನ್ಮಾರ್ಗದಲ್ಲಿ ಹೆಜ್ಜೆಗಳನ್ನೂರುತ್ತಾ ಬಂದ ಹಳಕಟ್ಟಿಯವರು ತಮ್ಮ ಹುಟ್ಟೂರು ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿ 1896ರಲ್ಲಿ ಮೆಟ್ರಿಕ್ ಮುಗಿಸಿದರು. ನಂತರ ಮುಂದಿನ ಉನ್ನತ ಶಿಕ್ಷಣಕ್ಕಾಗಿ ಮುಂಬೈಗೆ ತೆರಳಿ ಅಲ್ಲಿನ ಸೇಂಟ್ ಝೇವಿಯರ್ ಕಾಲೇಜು ಸೇರಿದರು. ಅಲ್ಲಿ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಇವರ ಸಹಪಾಠಿಗಳಾಗಿದ್ದರು. ಈ ಸಂದರ್ಭದಲ್ಲಿ ಮುಂಬಯಿಯ ವಿದ್ಯಾರ್ಥಿಗಳು ಮತ್ತು ಅಲ್ಲಿನ ಜನರಲ್ಲಿದ್ದ ಗುಜರಾತಿ ಮತ್ತು ಮರಾಠಿ ಭಾಷಾಭಿಮಾನ, ಕನ್ನಡದ ಬಗ್ಗೆ ಅಲ್ಲಿದ್ದ ನಿರಭಿಮಾನ ಇವರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತು. ಕನ್ನಡಿಗರು ಎಚ್ಚರಗೊಳ್ಳದಿದ್ದರೆ ಕನ್ನಡ ಉದ್ಧಾರವಾಗದೆಂದು ಆ ಕ್ಷಣವೇ ಕನ್ನಡ ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿಗಾಗಿ ದುಡಿಯಲು ವಿದ್ಯಾರ್ಥಿ ದಿಸೆಯಲ್ಲೇ ದೃಢಸಂಕಲ್ಪ ಮಾಡಿದರು. ಕರ್ನಾಟಕ ಏಕೀಕರಣಕ್ಕಾಗಿ ಆಗಲೇ ಹೋರಾಟದಲ್ಲಿ ನಿರತರಾಗಿದ್ದ ಆಲೂರರು ಆಗ ಇವರಿಗೆ ಸ್ಫೂರ್ತಿಯಾಗಿದ್ದರು.

1901ರಲ್ಲಿ ಬಿ.ಎ. ಪದವಿ ಪಡೆದ ಹಳಕಟ್ಟಿಯವರು 1904ರಲ್ಲಿ ಕಾನೂನು ಪದವೀಧರರಾಗಿ ಬೆಳಗಾವಿಯಲ್ಲಿ ವಕೀಲಿವೃತ್ತಿ ಪ್ರಾರಂಭಿಸಿದರಾದರೂ ಕೆಲವು ತಿಂಗಳುಗಳಲ್ಲೇ ಕಾರಣಾಂತರಗಳಿಂದ ಬೆಳಗಾವಿಯಿಂದ ಬಿಜಾಪುರಕ್ಕೆ ವಾಸ್ತವ್ಯ ಬದಲಾಯಿಸಿದ್ದರು. ಅಲ್ಲಿಂದೀಚೆಗೆ ಬಿಜಾಪುರವನ್ನೇ ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರು. ಒಂದೆಡೆ ವಕೀಲಿ ವೃತ್ತಿ, ಮತ್ತೊಂದೆಡೆ ನಾಡು–ನುಡಿಯ ಪ್ರಗತಿಗಾಗಿ ಹಲವು ಹತ್ತು ರೀತಿಯಲ್ಲಿ ದುಡಿಮೆ. ಇದು ಅವರ ನಿತ್ಯ ಕಾಯಕವಾಗಿತ್ತು. ಅದೇ ಸಮಯದಲ್ಲಿ ಚಿಕ್ಕೋಡಿಯ ತಮ್ಮಣ್ಣಪ್ಪನವರ ಪುತ್ರಿ ಭಾಗೀರಥಿದೇವಿಯೊಡನೆ ವಿವಾಹವಾಗಿ ಗೃಹಸ್ಥಾಶ್ರಮ ಪ್ರವೇಶಿಸಿದರಾದರೂ ಸಾರ್ವಜನಿಕ ಬದುಕಿನ ಸೇವಾಹಾದಿಯಿಂದ ಹಿಂದೆ ಸರಿಯದೆ ಮತ್ತಷ್ಟು ದೃಢವಾಗಿ ಮುನ್ನುಗ್ಗಿದರು. ಅಪಾರ ಕಾನೂನು ಜ್ಞಾನದಿಂದಾಗಿ ಆ ಭಾಗದ ಪ್ರಸಿದ್ಧ ವಕೀಲರಾಗಿ ರೂಪುಗೊಂಡ ಇವರು ತಮ್ಮ ಜನಪ್ರಿಯತೆಯಿಂದಲೇ 1905ರಲ್ಲಿ ಬಿಜಾಪುರ ನಗರ ಸಭೆಯ ಶಾಲಾ ಕಾರ್ಯನಿರ್ವಾಹಕ ಮಂಡಳಿಯ ಸಭಾಧ್ಯಕ್ಷರಾಗಿ ಮತ್ತು ಜಿಲ್ಲಾ ಗ್ರಾಮಾಂತರ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ತನ್ಮೂಲಕ ಕನ್ನಡ ಶಾಲೆಗಳ ಅಭ್ಯುದಯಕ್ಕಾಗಿ, ಗ್ರಾಮೀಣ ಜನರ ಉನ್ನತಿಗಾಗಿ ಎಂದೂ ಮರೆಯದಂಥ ಜನಸೇವೆಗೈದ ಹಿರಿಮೆ ಇವರದು. ಅಂತೆಯೇ 1923ರಲ್ಲಿ ಸರ್ಕಾರಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡರಲ್ಲದೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿಯೂ ಆಯ್ಕೆಗೊಂಡರು. ನಂತರದ ದಿನಗಳಲ್ಲಿ ಮುಂಬಯಿ ವಿಧಾನಪರಿಷತ್ತಿನ ಸದಸ್ಯರಾದ ಇವರು ತಮ್ಮ ಶಾಸನಬದ್ಧ ಅಧಿಕಾರದಿಂದ ಕನ್ನಡವನ್ನು ಗಟ್ಟಿಗೊಳಿಸಲು, ಪುಷ್ಟಿಗೊಳಿಸಲು, ಒಟ್ಟಾರೆ ಸಮೃದ್ಧವಾಗಿ ಕನ್ನಡ ಕಟ್ಟಲು ಪ್ರಾಮಾಣಿಕವಾಗಿ ದುಡಿದು ಅಜರಾಮರ ಕೆಲಸ ಮಾಡಿದ್ದಾರೆ.

ಕನ್ನಡವನ್ನು ಉಸಿರಾಗಿಸಿಕೊಂಡಿದ್ದಷ್ಟೇ ವಚನ ಸಾಹಿತ್ಯಕ್ಕೆ ಮಾರುಹೋಗಿದ್ದ ಹಳಕಟ್ಟಿಯವರು ಅಂದು ವಚನಸಾಹಿತ್ಯದ ಹಸ್ತಪ್ರತಿಗಳಿಗಾಗಿ, ಓಲೆಗರಿ ಗ್ರಂಥಗಳಿಗಾಗಿ ಹುಡುಕಾಡಿದ ಊರುಗಳಿಲ್ಲ, ತಡಕಾಡಿದ ಕೇರಿಗಳಿಲ್ಲ, ಅನ್ವೇಷಣೆಗೈದ ಆಲಯಗಳಿಲ್ಲ, ಸಂಶೋಧನೆಗೊಂಡ ಸ್ಥಳಗಳಿಲ್ಲವೆನ್ನಬಹುದು. ಒಂದು ರೀತಿಯಲ್ಲಿ ಇದಕ್ಕಾಗಿ ದೇಶಸುತ್ತಿದವರಿವರು. ಜಗತ್ತನ್ನೇ ಅಲೆದವರಿವರು. ಹೀಗೆ ತಿರುತಿರುಗಿ ತಾವು ತಂದು ಸಂಗ್ರಹಿಸಿದ ಹಸ್ತಪ್ರತಿರೂಪದ ವಚನರಾಶಿಯನ್ನು 1920ರಲ್ಲಿ ಬಿಜಾಪುರದಲ್ಲಿ ಪ್ರದರ್ಶಿಸಿ ಇದರ ಮೌಲ್ಯವನ್ನು ಇಂಚಿಂಚೂ ಬಿಡದಂತೆ ಎಲ್ಲರಿಗೂ ಇವರು ತಿಳಿಸಿದರು. ಆ ಕಾಲದಲ್ಲಿದು ಶರಣರ ನಾಡಿನಲ್ಲಿ ಭಾರಿ ಸಂಚಲನ ಉಂಟುಮಾಡಿತ್ತು. ಆ ನಂತರ ಹಸ್ತಪ್ರತಿ ರೂಪದಲ್ಲಿದ್ದ ಈ ವಚನ ಸಂಪತ್ತನ್ನು ಸಂಪಾದಿಸಿ ಮುದ್ರಿಸಿ ಪುಸ್ತಕ ರೂಪದಲ್ಲಿ ಹೊರತರಲು ಮುಂದಾದ ಇವರು ಇದಕ್ಕಾಗಿ 1925ರಲ್ಲಿ ತಮ್ಮ ಸ್ವಂತ ಮನೆ ಮಾರಿ ಹಿತಚಿಂತಕ ಎಂಬ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅಲ್ಲಿಂದ ವಚನ ಸಾಹಿತ್ಯ ಕೃತಿಗಳ ಸುರಿಮಳೆಯೇ ಶುರುವಾಯಿತು. ನಿಜಕ್ಕೂ ಆಗ ಹಳಕಟ್ಟಿಯವರಿಂದ ವಚನಕ್ರಾಂತಿಯೇ ನಡೆದಿತ್ತು. ಇವರು ಸಂಪಾದಿಸಿ ಪ್ರಕಟಿಸಿದ ಒಂದೊಂದು ವಚನಸಂಕಲನ ಕೃತಿಗಳೂ ಇಂದಿಗೂ ಸಾರಸ್ವತ ಲೋಕದ ಮಾಣಿಕ್ಯಗಳೇ ಆಗಿವೆ. ತಮ್ಮ ಸಂಶೋಧನೆಯ ಮೂಲಕ 250ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದ ಕೀರ್ತಿಯ ಜೊತೆಗೆ ಹರಿಹರನ 42 ರಗಳೆಗಳನ್ನು ಸಂಶೋಧಿಸಿ ಪ್ರಕಟಿಸಿದ ಸಾಧನೆ ಇವರ ಹೆಸರಿನಲ್ಲಿದೆ.

ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ 'ವಚನ ಸಾಹಿತ್ಯಸಾರ' ವಂತೂ ಅಪೂರ್ವವಾದ ವಚನಗಳುಳ್ಳ ಒಂದು ಅದ್ಭುತ ಕೃತಿ. ಈ ಬೃಹತ್ ಗ್ರಂಥ ಹಲವು ಸಂಪುಟಗಳಲ್ಲಿ 1923ರಿಂದ 1939ರ ಅವಧಿಯಲ್ಲಿ ಪ್ರಕಟಗೊಂಡು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಇವರ ಸ್ವತಂತ್ರ ಕೃತಿಗಳು ಸೇರಿದಂತೆ ಸಂಪಾದಿಸಿದ ವಚನ ಸಾಹಿತ್ಯ ಕೃತಿಗಳು 175ಕ್ಕೂ ಹೆಚ್ಚೆಂದರೆ ಯಾರು ಬೇಕಾದರೂ ಊಹಿಸಬಹುದು ಹಳಕಟ್ಟಿಯವರ ವಚನ ಸಾಹಿತ್ಯದ ದೈತ್ಯ ಶಕ್ತಿಯನ್ನು! ಶೂನ್ಯ ಸಂಪಾದನೆ, ಶಿವಾನುಭವ, ಕೃಷಿ ವಿಜ್ಞಾನ, ಪ್ರಭುದೇವರ ವಚನಗಳು, ಹರಿಹರನ ರಗಳೆ, ಪ್ರದೀಪಿಕೆ, ಶಬ್ದಕೋಶ, ಆದಿಶೆಟ್ಟಿ ಪುರಾಣ .... ಮುಂತಾದವುಗಳು ಇವರ ಪ್ರಮುಖ ಕೃತಿಗಳು.

ಪತ್ರಿಕೋದ್ಯಮದಲ್ಲೂ ಬಹಳ ಆಸಕ್ತಿ ಹೊಂದಿದ್ದ ಹಳಕಟ್ಟಿಯವರು 1926ರಲ್ಲಿ ಸಂಶೋಧನೆಗಾಗಿ ಮೀಸಲಾದ 'ಶಿವಾನುಭವ ಪತ್ರಿಕೆ' ಪ್ರಾರಂಭಿಸಿದರು. ಇದನ್ನು ಸತತವಾಗಿ ನಡೆಸಿಕೊಂಡು ಬಂದ ಇವರು 1951ರಲ್ಲಿ ಇದರ ಬೆಳ್ಳಿಹಬ್ಬವನ್ನು ಅದ್ದೂರಿಯಾಗಿ ಆಚರಿಸಿದರು. ಹಾಗೆಯೇ 1927ರಲ್ಲಿ 'ನವ ಕರ್ನಾಟಕ' ಎಂಬ ವಾರಪತ್ರಿಕೆಯನ್ನೂ ಸಹ ಆರಂಭಿಸಿದ್ದರು. ಈ ಎರಡೂ ಪತ್ರಿಕೆಗಳ ಸಂಪಾದಕ ಮತ್ತು ಪ್ರಕಾಶಕ ಹಾಗೂ ಮುದ್ರಕರಾಗಿ ಹಳಕಟ್ಟಿಯವರ ಪತ್ರಿಕಾರಂಗದ ಸಾಧನೆ ಕೂಡ ಗುರುತರವಾದದ್ದೇ.

ದೂರದೃಷ್ಟಿ ವ್ಯಕ್ತಿತ್ವದ ಹಳಕಟ್ಟಿಯವರು ಸಾಹಿತ್ಯ ಮತ್ತು ಪತ್ರಿಕೋದ್ಯಮದ ಜೊತೆ ಜೊತೆಗೆ ಸಂಘಟನೆ, ಬ್ಯಾಂಕಿಂಗ್, ಕೃಷಿ, ನೇಕಾರಿಕೆ, ಸಹಕಾರಿ ... ಹೀಗೆ ಎಲ್ಲದರಲ್ಲೂ ತೊಡಗಿಸಿಕೊಂಡಿದ್ದರು. ಇವರು 1910ರಲ್ಲಿ ಬಿಜಾಪುರ ಜಿಲ್ಲಾ ಲಿಂಗಾಯತ ವಿದ್ಯಾವರ್ಧಕ ಸಂಘ (ಬಿ.ಎಲ್.ಡಿ.ಇ.) ವನ್ನು ಮತ್ತು 1912ರಲ್ಲಿ ಶ್ರೀಸಿದ್ದೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕನ್ನು ಸ್ಥಾಪಿಸಿದ್ದರಲ್ಲದೆ ಗ್ರಾಮೀಣಾಭಿವೃದ್ಧಿ ಸಂಘ, ಒಕ್ಕಲುತನ ಸಹಕಾರಿ ಸಂಘ, ನೇಕಾರರ ಸಂಘ, ಹತ್ತಿ ಮಾರಾಟ ಸಂಘಗಳು ಸೇರಿದಂತೆ ಸಹಕಾರಿ ಸಂಘಗಳನ್ನು ಸಂಸ್ಥಾಪಿಸಿ ತನ್ಮೂಲಕ ಒಟ್ಟಾರೆ ಸಮಾಜಾಭಿವೃದ್ಧಿಗೆ ದುಡಿದ ಅಪರೂಪದ ವ್ಯಕ್ತಿಯಿವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯಲ್ಲಿ ಇವರು ಮಹತ್ತರ ಪಾತ್ರ ವಹಿಸಿದ್ದರು.

ಇಂಥ ಪ್ರಚಂಡ ಸಾಧಕ ಹಳಕಟ್ಟಿಯವರು 1964ರ ಜೂನ್ 27ರಂದು ನಾಡನ್ನು ಬಿಟ್ಟು ಅಗಲಿದರೂ ಇವರು ಮಾಡಿದ ಸೇವೆ, ಸಾಧನೆ, ತ್ಯಾಗ, ಕಟ್ಟಿ ಬೆಳೆಸಿದ ಸಂಸ್ಥೆಗಳು ಎಲ್ಲಕ್ಕಿಂತ ಮಿಗಿಲಾಗಿ ವಚನ ಸಾಹಿತ್ಯ ಕ್ಷೇತ್ರ ಇವರ ಹೆಸರನ್ನು ಅಜರಾಮರಗೊಳಿಸಿವೆ. ಇವರು ಸಂಸ್ಥಾಪಿಸಿದ್ದ ಬಿ.ಎಲ್.ಡಿ.ಇ. ಸಂಸ್ಥೆಯು ಮೂವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ಹದಿನೈದು ಸಂಪುಟಗಳಲ್ಲಿ ಪ್ರಕಟಿಸಿದೆ ಎಂದರೆ ಯಾರಿಗಾದರೂ ಅರ್ಥವಾಗುತ್ತದೆ ಹಳಕಟ್ಟಿಯವರು ಸಂಸ್ಥಾಪಿಸಿದ್ದ ಸಂಸ್ಥೆಯೊಂದರ ಬೆಳವಣಿಗೆಯ ಪರಿ ಎಂಥಾದ್ದೆಂದು!

1920ರಲ್ಲಿ ಮುಂಬಯಿಯ ವಿಧಾನಪರಿಷತ್ತಿನ ಸದಸ್ಯತ್ವ, 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1928ರಲ್ಲಿ ಜರುಗಿದ 3ನೇ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ, 1931ರಲ್ಲಿ ಮುಂಬೈ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯತ್ವ, 1933ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆ, 1956ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಮುಂತಾದವು ಇವರ ಸೇವೆಗೆ ಸಂದ ಗೌರವ ಪುರಸ್ಕಾರಗಳು. ಅಂತೆಯೇ ಫ.ಗು. ಹಳಕಟ್ಟಿ ಅವರಿಗೆ ಅಂದಿನ ಬ್ರಿಟಿಷ್ ಸರ್ಕಾರದಿಂದ ರಾವ್‌ಬಹದ್ದೂರ್ ಮತ್ತು ರಾವ್ ಸಾಹೇಬ ಪ್ರಶಸ್ತಿಗಳು ಹಾಗೂ ವಚನ ಸಾಹಿತ್ಯ ಪ್ರವೀಣ ಪ್ರಶಸ್ತಿಗಳು ದೊರೆತಿದ್ದು, 1962ರಲ್ಲಿ 'ಮಣಿಹ' ಎಂಬ ಅಭಿನಂದನಾ ಗ್ರಂಥವನ್ನು ಇವರಿಗೆ ಅರ್ಪಿಸಿ ಗೌರವಿಸಲಾಗಿದೆ.

> "ಕನ್ನಡವನ್ನು ಉಸಿರಾಗಿಸಿಕೊಂಡಿದ್ದಷ್ಟೇ ವಚನ ಸಾಹಿತ್ಯಕ್ಕೆ ಮಾರುಹೋಗಿದ್ದ ಹಳಕಟ್ಟಿಯವರು ಅಂದು ವಚನ ಸಾಹಿತ್ಯದ ಹಸ್ತಪ್ರತಿಗಳಿಗಾಗಿ, ಓಲೆಗರಿ ಗ್ರಂಥಗಳಿಗಾಗಿ ಹುಡುಕಾಡಿದ ಊರುಗಳಿಲ್ಲ, ತಡಕಾಡಿದ ಕೇರಿಗಳಿಲ್ಲ, ಅನ್ವೇಷಣೆಗೈದ ಆಲಯಗಳಿಲ್ಲ, ಸಂಶೋಧನೆಗೊಂಡ ಸ್ಥಳಗಳಿಲ್ಲವೆನ್ನಬಹುದು. ಒಂದು ರೀತಿಯಲ್ಲಿ ಇದಕ್ಕಾಗಿ ದೇಶಸುತ್ತಿದವರಿವರು. ಜಗತ್ತನ್ನೇ ಅಲೆದವರಿವರು. ಹೀಗೆ ತಿರುತಿರುಗಿ ತಾವು ತಂದು ಸಂಗ್ರಹಿಸಿದ ಹಸ್ತಪ್ರತಿರೂಪದ ವಚನರಾಶಿಯನ್ನು 1920ರಲ್ಲಿ ಬಿಜಾಪುರದಲ್ಲಿ ಪ್ರದರ್ಶಿಸಿ ಇದರ ಮೌಲ್ಯವನ್ನು ಇಂಚಿಂಚೂ ಬಿಡದಂತೆ ಎಲ್ಲರಿಗೂ ಇವರು ತಿಳಿಸಿದರು. ಆ ಕಾಲದಲ್ಲಿದು ಶರಣರ ನಾಡಿನಲ್ಲಿ ಭಾರಿ ಸಂಚಲನ ಉಂಟು ಮಾಡಿತ್ತು. ಆ ನಂತರ ಹಸ್ತಪ್ರತಿ ರೂಪದಲ್ಲಿದ್ದ ಈ ವಚನ ಸಂಪತ್ತನ್ನು ಸಂಪಾದಿಸಿ ಮುದ್ರಿಸಿ ಪುಸ್ತಕ ರೂಪದಲ್ಲಿ ಹೊರತರಲು ಮುಂದಾದ ಇವರು ಇದಕ್ಕಾಗಿ 1925ರಲ್ಲಿ ತಮ್ಮ ಸ್ವಂತ ಮನೆ ಮಾರಿ ಹಿತಚಿಂತಕ ಎಂಬ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅಲ್ಲಿಂದ ವಚನ ಸಾಹಿತ್ಯ ಕೃತಿಗಳ ಸುರಿಮಳೆಯೇ ಶುರುವಾಯಿತು. ನಿಜಕ್ಕೂ ಆಗ ಹಳಕಟ್ಟಿ ಅವರಿಂದ ವಚನಕ್ರಾಂತಿಯೇ ನಡೆದಿತ್ತು.

ಮೋದಿ, ಬಿಜೆಪಿ, ಆರ್‌ಎಸ್‌ಎಸ್ ಮಾತ್ರವೇ ಇಡೀ ಹಿಂದೂ ಸಮುದಾಯವಲ್ಲ

ಸದನದಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ವಾಗ್ದಾಳಿ



ಸೋಮವಾರ ಲೋಕಸಭೆಯಲ್ಲಿ ತಮ್ಮ ಭಾಷಣದ ಸಮಯದಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ಶಿವನ ಚಿತ್ರವನ್ನು ತೋರಿಸಿದರು.

ನವದೆಹಲಿ: ಮೋದಿ, ಬಿಜೆಪಿ, ಆರ್‌ಎಸ್‌ಎಸ್ ಮಾತ್ರ ಇಡೀ ಹಿಂದೂ ಸಮುದಾಯವಲ್ಲ ಎಂದು ಲೋಕಸಭೆಯಲ್ಲಿ ಸೋಮವಾರ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದರು.

ಭಾರತದ ಪರಿಕಲ್ಪನೆ, ಸಂವಿಧಾನ, ಸಂವಿಧಾನದ ಮೇಲಿನ ದಾಳಿಯನ್ನು ತಡೆಯಲು ಮುಂದಾದವರ ಮೇಲೆ ವ್ಯವಸ್ಥಿತ ಪೂರ್ಣಪ್ರಮಾಣದ ದಾಳಿಗಳು ನಡೆದಿವೆ ಎಂದು ರಾಹುಲ್ ಗಾಂಧಿ ಸದನದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದರು.

ನಮ್ಮಲ್ಲಿ ಹಲವರ ಮೇಲೆ ವೈಯಕ್ತಿಕ ದಾಳಿ ನಡೆದಿದೆ. ಇನ್ನೂ ಕೆಲವು ನಾಯಕರು ಜೈಲಿನಲ್ಲಿದ್ದಾರೆ. ಅಧಿಕಾರ ಮತ್ತು ಸಂಪತ್ತಿನ ಕೇಂದ್ರೀಕರಣ, ಬಡವರು ಮತ್ತು ದಲಿತರು ಮತ್ತು ಅಲ್ಪಸಂಖ್ಯಾತರ ಮೇಲಿನ ಆಕ್ರಮಣದ ಕಲ್ಪನೆಯನ್ನು ವಿರೋಧಿಸಿದ ಯಾರೇ ಆದರೂ ಹತ್ತಿಕ್ಕಲ್ಪಟ್ಟರು.

ಗುರುನಾನಕ್, ಬುದ್ಧ, ಮಹಾವೀರ ಸೇರಿದಂತೆ ಭಾರತದಲ್ಲಿ ಯಾವುದೇ ಮಹಾಪುರುಷರ ಉದಾಹರಣೆ ನೋಡಿದರೂ ಅವರೆಲ್ಲರೂ ಅಹಿಂಸೆಯನ್ನು ಬೋಧಿಸಿ, ಹಿಂಸೆಯನ್ನು ವಿರೋಧಿಸಿದವರಾಗಿದ್ದಾರೆ. ಆದರೆ ಕೇಂದ್ರ ಸರ್ಕಾರದಲ್ಲಿರುವ, ಹಿಂದೂಗಳೆಂದು ಕರೆದುಕೊಳ್ಳುವವರು ಹಿಂದೂ ಧರ್ಮದ ಮೂಲಭೂತವಾದ ಅಂಶ ಅಹಿಂಸೆಗೆ ವಿರುದ್ಧವಾಗಿ ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ ಎಂದು ರಾಹುಲ್ ಗಾಂಧಿ ಪ್ರಧಾನಿ ಮೋದಿ, ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಇದಕ್ಕೆ ಸದನದಲ್ಲೇ ಆಕ್ಷೇಪ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ, ಇಡೀ ಹಿಂದೂ ಸಮಾಜವನ್ನು ಹಿಂಸೆಗೆ ಹೋಲಿಕೆ ಮಾಡುವುದು ಗಂಭೀರವಾದ ವಿಷಯ ಎಂದು ಹೇಳಿದರು. ತಕ್ಷಣವೇ ಪ್ರತಿಕ್ರಿಯೆ ನೀಡಿದ ರಾಹುಲ್ ಗಾಂಧಿ ಮೋದಿ, ಬಿಜೆಪಿ, ಆರ್‌ಎಸ್‌ಎಸ್ ಮಾತ್ರ ಇಡೀ ಹಿಂದೂ ಸಮುದಾಯವಲ್ಲ ಎಂದು ಹೇಳಿದರು.

ತಮ್ಮ ಭಾಷಣದ ಸಮಯದಲ್ಲಿ, ರಾಹುಲ್ ಗಾಂಧಿಯವರು ಶಿವನ ಚಿತ್ರವನ್ನು ತೋರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಓಂ ಬಿರ್ಲಾ, ಸದನದಲ್ಲಿ ಫಲಕಗಳನ್ನು ಪ್ರದರ್ಶಿಸಲು ನಿಯಮಗಳು ಅನುಮತಿಸುವುದಿಲ್ಲ ಎಂದು ತಿಳಿಸಿದರು.

ನೀಟ್ ವ್ಯಾಪಾರೀಕರಣ

ನವದೆಹಲಿ: ವೈದ್ಯಕೀಯ ಪ್ರವೇಶ ಪರೀಕ್ಷೆ NEET ಅನ್ನು ವ್ಯಾಪಾರೀಕರಣ ಮಾಡಲಾಗುತ್ತಿದ್ದು, ಶ್ರೀಮಂತರ ಮಕ್ಕಳಿಗೆ ತಕ್ಕಂತೆ ಮಾಡಲಾಗುತ್ತಿದೆ ಎಂದು ಲೋಕಸಭೆಯಲ್ಲಿ ರಾಹುಲ್ ಗಾಂಧಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.


ರಾಷ್ಟ್ರಪತಿ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ವೇಳೆ ಮಾತನಾಡಿದ ರಾಹುಲ್ ಗಾಂಧಿ, ವಿದ್ಯಾರ್ಥಿಗಳು ವರ್ಷಾನುಗಟ್ಟಲೆ ಪರೀಕ್ಷೆಗಾಗಿ ತಯಾರಿ ನಡೆಸುತ್ತಾರೆ. ಅವರ ಕುಟುಂಬದವರು ಆರ್ಥಿಕ ಮತ್ತು ಭಾವನಾತ್ಮಕವಾಗಿ ವಿದ್ಯಾರ್ಥಿಗಳ ಬೆಂಬಲಕ್ಕೆ ನಿಂತಿರುತ್ತಾರೆ. ಆದರೆ, ನೀಟ್ ವಿದ್ಯಾರ್ಥಿಗಳು ಪರೀಕ್ಷೆಯನ್ನು ನಂಬುತ್ತಿಲ್ಲ. ಏಕೆಂದರೆ ಪರೀಕ್ಷೆಯನ್ನು ಶ್ರೀಮಂತರ ಮಕ್ಕಳಿಗೆ ತಕ್ಕಂತೆ ರೂಪಿಸಲಾಗುತ್ತಿದೆ ಎಂದು ಟೀಕಾಪ್ರಹಾರ ನಡೆಸಿದರು. ಹಲವಾರು ಬಾರಿ NEET ವಿದ್ಯಾರ್ಥಿಗಳನ್ನು ಭೇಟಿ ಮಾಡಿದ್ದೇನೆ. ಅವರಲ್ಲಿ ಪ್ರತಿಯೊಬ್ಬರು ಈ ಪರೀಕ್ಷೆಯನ್ನು ಶ್ರೀಮಂತರ ಕೋಟಾ ರಚಿಸಲು, ಅಂತಹ ಮಕ್ಕಳಿಗೆ ತಕ್ಕಂತೆ ಹಾಗೂ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡದಂತೆ ಪತ್ರಿಕೆ ಸಿದ್ಧಪಡಿಸಲಾಗುತ್ತಿದೆ ಹೇಳಿರುವುದಾಗಿ ತಿಳಿಸಿದರು.

ಜು.6, ಡಾ.ಬಾಬು ಜಗಜೀವನ್‌ರಾಂ 38ನೇ ಪುಣ್ಯಸ್ಮರಣೆ



ಮೈಸೂರು,ಜು.1– ಜಿಲ್ಲಾಡಳಿತ, ಮೈಸೂರು ವತಿಯಿಂದ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 38ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಜು.6ರಂದು ಬೆಳಗ್ಗೆ 9.30 ಗಂಟೆಗೆ ಮೈಸೂರಿನ ರೈಲ್ವೆ ನಿಲ್ದಾಣದ ಮುಂಭಾಗದ ವೃತ್ತದಲ್ಲಿರುವ ಡಾ.ಬಾಬು ಜಗಜೀವನ್ ರಾಂ ಅವರ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು,ಜು.1–ಡಾ.ಎಂ.ಎನ್. ಕುಮಾರ ಅವರ ಮಾರ್ಗದರ್ಶನದಲ್ಲಿ ಕೆ.ಎಸ್. ಸಾಗರ್ ರಸಾಯನ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 2 ಜುಲೈ 2024

ಮೈಸೂರು ಜಾನಪದ ಸಂಭ್ರಮ ಕಾರ್ಯಕ್ರಮ
ಕನ್ನಡ ಸೇವಾರತ್ನ ಪ್ರಶಸ್ತಿ ಪ್ರದಾನ



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಕನ್ನಡ ಸೇವಾ ಪ್ರಶಸ್ತಿ ಪ್ರದಾನ ಮತ್ತು ಜಾನಪದ ಸಂಭ್ರಮ ಕಾರ್ಯಕ್ರಮದ ಉದ್ಘಾಟನಾ ಸಂದರ್ಭ.

ಮೈಸೂರು, ಜು. 1–ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಮತ್ತು ಎಸ್‌ಎಸ್ ಕಲಾ ಸಂಭ್ರಮದ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಕನ್ನಡ ಸೇವಾ ಪ್ರಶಸ್ತಿ ಪ್ರಧಾನ ಮತ್ತು ಜಾನಪದ ಸಂಭ್ರಮ ನೆರವೇರಿತು.

ಮೈಸೂರು ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಹಾಗೂ ಸಮಾಜ ಸೇವಕ ಎನ್.ಎಂ.ನವೀನ್ ಕುಮಾರ್ ಅವರಿಗೆ ರಾಜ್ಯ ಮಟ್ಟದ 'ಕನ್ನಡ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಳಿಕ ಮಾತನಾಡಿದ ಅವರು, ನಾವು ಇಂದಿನ ಜಗತ್ತಿನ ಅವಶ್ಯಕತೆಗೆ ತಕ್ಕಂತೆ ಇಂಗ್ಲಿಷ್, ಹಿಂದಿ ಅಥವಾ ಯಾವುದೇ ಭಾಷೆ ಕಲಿತರು ನಮ್ಮ ಮಾತೃ ಭಾಷೆ ಆದ ಕನ್ನಡವನ್ನು ಉತ್ತಮವಾಗಿ ಕಲಿತು, ಕನ್ನಡಕ್ಕೆ ಅಗ್ರಸ್ಥಾನವನ್ನು ನೀಡಬೇಕು ಎಂದರು. ಸಮಾಜ ಸೇವಕ ಕುರುಬಾರ ಹಳ್ಳಿ ಧನಪಾಲ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಲೋಕದ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಅವಧೂತ ಮಹರ್ಷಿ ಸಿದ್ದಾರ್ಥ ಸ್ವಾಮೀಜಿ, ಸಾಹಿತಿ ಮಂಜುಳಾ ಪಾವಗಡ, ಡಾ.ನಾಗರಾಜ ತಂಬ್ರಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ




ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ಸಿಎಸ್‌ಐ ಬಾಲಕರ ಬೋರ್ಡಿಂಗ್ ಹೋಮ್‌ನ ವಿದ್ಯಾರ್ಥಿಗಳಿಗೆ ಎಸ್.ಪ್ರಕಾಶ್ ಪ್ರಿಯದರ್ಶನ ಸ್ನೇಹ ಬಳಗದ ವತಿಯಿಂದ ಪತ್ರಿಕಾ ದಿನಾಚರಣೆ ಅಂಗವಾಗಿ ಪುಸ್ತಕ, ಲೇಖನಿ ಸಾಮಗ್ರಿ ಹಾಗೂ ಹಣ್ಣು–ಹಂಪಲು ವಿತರಿಸಲಾಯಿತು. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್, ಸುಬ್ರಮಣಿ, ಛಾಯಾ, ಯಶವಂತ್ ಕುಮಾರ್, ಮಹದೇವ್, ಮಹೇಶ್, ಚಂದ್ರಶೇಖರ್, ಅಕ್ಷಯ ಪ್ರಿಯಾದರ್ಶನ್, ಸ್ವಾಮಿ, ಶ್ರೀಧರ್ ಇನ್ನಿತರರಿದ್ದರು.

ಪಿ.ಆರ್.ಟಿ.ಪ್ರತಿಷ್ಠಾನದಿಂದ ಡಾ.ವೀರೇಂದ್ರ ಹೆಗ್ಗಡೆ ಭೇಟಿ




ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಧರ್ಮಸ್ಥಳದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದ ಬಗ್ಗೆ ಪೂರ್ವಭಾವಿಯಾಗಿ ಧರ್ಮಾಧಿಕಾರಿ, ರಾಜ್ಯಸಭೆ ಸದಸ್ಯ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಚರ್ಚಿಸಲಾಯಿತು. ಈ ವೇಳೆ ಪಿ.ಆರ್.ಟಿ.ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ, ಕಾರ್ಯದರ್ಶಿ ಮಹದೇವಶೆಟ್ಟಿ ಟ್ರಸ್ಟಿ ಮಾನಸ, ಚಂದ್ರಶೇಖರ ಒಡೆಯರ್ ಹಾಜರಿದ್ದರು.

ಯುವ ಮುಖಂಡ ಜೈರಾಜ್‌ಗೆ ಹುಟ್ಟುಹಬ್ಬದ ಸಂಭ್ರಮ



ಮೈಸೂರು ಅಶೋಕಪುರಂನ ಯುವ ಮುಖಂಡರಾದ ಜೈರಾಜ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ಪಲ್ಲವಿ ಬೇಗಂ, ಮುಖಂಡರಾದ ಪ್ರಸಾದ್, ಮಹ್ಮದ್ ಫಾರೂಖ್, ಮಧುರಾಜ್ ಉಪಸ್ಥಿತರಿದ್ದರು.

ಪಾಲಿಕೆ ವಲಯ ಕಚೇರಿ 7ರಲ್ಲಿ ಮ್ಯಾನೇಜರ್ ಯೋಗೇಂದ್ರರಿಗೆ ಅಭಿನಂದನೆ, ಬೀಳ್ಕೊಡುಗೆ



ಮೈಸೂರು ನಗರಪಾಲಿಕೆ ವಲಯ ಕಚೇರಿ 7ರಲ್ಲಿ ಮ್ಯಾನೇಜರ್ ಆಗಿ ಸೇವೆಯಿಂದ ನಿವೃತ್ತಗೊಂಡ ಯೋಗೇಂದ್ರ ಅವರನ್ನು ಮೈಸೂರು ಯುವ ಬಳಗ ವತಿಯಿಂದ ಬೀಳ್ಕೊಡುಗೆ ನೀಡಿ, ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಜು.1– ಸ್ವಾರ್ಥ, ಅಹಂಕಾರ ದೂರವಿಟ್ಟು ಕರ್ತವ್ಯ ನಿಷ್ಠೆ, ಮಾನವೀಯತೆ ರೂಢಿಸಿಕೊಂಡಾಗ ಮಾತ್ರ ಸರ್ಕಾರಿ ಸೇವೆ ಸಾರ್ಥಕವಾಗಲಿದೆ ಎಂದು ಮೈಸೂರು ಪಾಲಿಕೆ ವಲಯ ಆಯುಕ್ತ ನಂಜುಂಡಯ್ಯ ತಿಳಿಸಿದರು.

ಮೈಸೂರು ನಗರಪಾಲಿಕೆ ವಲಯ ಕಚೇರಿ 7ರಲ್ಲಿ ಮ್ಯಾನೇಜರ್ ಆಗಿದ್ದು, ಸೇವೆಯಿಂದ ಯೋಗೇಂದ್ರ ನಿವೃತ್ತಗೊಂಡಿದ್ದು, ಅವರಿಗೆ ಮೈಸೂರು ಯುವ ಬಳಗ ವತಿಯಿಂದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನಿಸಿ ಮಾತನಾಡಿ, ಪ್ರತಿ ಸರ್ಕಾರಿ ನೌಕರರಿಗೆ ನಿವೃತ್ತಿ ಅನಿವಾರ್ಯ. ಯಾವುದೇ ಇಲಾಖೆಯಲ್ಲಿ ಸಿಬ್ಬಂದಿ ಸೇವಾವಧಿಯಲ್ಲಿ ತಮ್ಮ ಕೆಲಸವನ್ನು ಯಶಸ್ವಿಯಾಗಬೇಕಾದರೆ ಮಾನವೀಯತೆ ಮತ್ತು ಸರಳತೆಯಿರಬೇಕು ಎಂದರು.

ಇದೇ ಸಂದರ್ಭ ವಲಯ ಕಚೇರಿ 7ರ ಕಂದಾಯ ಅಧಿಕಾರಿ ಲೋಕೇಶ್, ಜಾವಿದ್, ಮುಖಂಡರಾದ ರವಿಚಂದ್ರ, ನಂಜುಂಡಸ್ವಾಮಿ ಹಾಗೂ ಇನ್ನಿತರರು ಯೋಗೇಂದ್ರರಿಗೆ ಶುಭ ಹಾರೈಸಿದರು.

ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ 48 ಕೋಟಿ ವೆಚ್ಚದಲ್ಲಿ ಹೊಸ ಮೆರಗು

- ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ 149ನೇ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧಾರ
- ಮೊದಲ ಹಂತದ ಈ ಅಭಿವೃದ್ಧಿ ಪ್ರಸ್ತಾಪ ಸರ್ಕಾರಕ್ಕೆ ಮಂಡಿಸಲು ತೀರ್ಮಾನ

ಮೈಸೂರು, ಜು.1(ಜಿಎ)–ದಸರಾ ಆರಂಭಕ್ಕೂ ಮುನ್ನವೇ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ 48 ಕೋಟಿ ರೂ. ವೆಚ್ಚದಲ್ಲಿ ಮೊದಲ ಹಂತದ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡು ಆಧುನಿಕ ಸ್ಪರ್ಶದೊಂದಿಗೆ ಪಾರಂಪರಿಕ ಮೆರಗು ನೀಡಲು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ 149ನೇ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಯಿತು.

ಮೈಸೂರಿನ ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಕಚೇರಿಯಲ್ಲಿ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮಾ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಕೆ.ಸವಿತಾ, ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿಇಒ ರಾಜೇಶ್ ಜಿ.ಗೌಡ ಮತ್ತು ಹಣಕಾಸು ವಿಭಾಗದ ಕಾರ್ಯದರ್ಶಿ ಸಭೆಯಲ್ಲಿ ಪಾಲ್ಗೊಂಡು 48 ಕೋಟಿ ರೂ. ವೆಚ್ಚದ ಯೋಜನೆಗೆ ಅನುಮೋದನೆ ಪಡೆದುಕೊಳ್ಳಲಾಯಿತು.

ಸಭೆ ಆರಂಭಕ್ಕೂ ಮುನ್ನ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿಗಳು ವಸ್ತು ಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳಕ್ಕೆ ಭೇಟಿ ನೀಡಿ, ಪಾರ್ಕಿಂಗ್ ಸಮಸ್ಯೆ ಬಗ್ಗೆ ಅಧಿಕಾರಿಗಳೊಡನೆ ಚರ್ಚಿಸಿದರು.

ನಂತರ ಕನ್ನಡ ಕಲಾ ಗ್ಯಾಲರಿಯಲ್ಲಿರುವ ಜೀವನದಿ ಕಾವೇರಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಮೈಸೂರಿನ ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಕಚೇರಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ 149ನೇ ಆಡಳಿತ ಮಂಡಳಿ ಸಭೆಯನ್ನು ಸೋಮವಾರ ನಡೆಸಲಾಯಿತು.

ಯೋಜನೆಯಲ್ಲಿ ಸಿದ್ಧಪಡಿಸಿರುವುದು

- ಎ ಬ್ಲಾಕ್ ನವೀಕರಣ
- ನೃತ್ಯ ಕಾರಂಜಿ
- ವರ್ಚ್ಯುವಲ್ ಥೀಮ್ ಬಳಸಿ ಜ್ಯುರಾಸಿಕ್ ಪಾರ್ಕ್
- ಅಮ್ಯೂಸ್‌ಮೆಂಟ್
- ರೆಸ್ಟೋರೆಂಟ್

ಶಾಲಾ ಮಕ್ಕಳಿಗೆ ಉಚಿತ ಪ್ರವೇಶ

"ದಸರಾ ವಸ್ತುಪ್ರದರ್ಶನ ಆವರಣದ ಕನ್ನಡ ಕಲಾ ಗ್ಯಾಲರಿ ಆವರಣದಲ್ಲಿರುವ ಕಾವೇರಿ ನದಿ ಉಗಮ ಮತ್ತು ಹರಿವಿನ ಐತಿಹಾಸಿಕ ವಿಚಾರವಾಗಿ ನಿರ್ಮಿಸಿರುವ ಜೀವನದಿ ಕಾವೇರಿ ಮ್ಯೂಸಿಯಂ ಅನೇಕ ದಿನಗಳಿಂದ ಮುಚ್ಚಿದ್ದು, ಅದನ್ನು ಶಾಲಾ ಮಕ್ಕಳಿಗೆ ಉಚಿತವಾಗಿ ವೀಕ್ಷಿಸಲು ವ್ಯವಸ್ಥೆ ಮಾಡುವಂತೆ ಮೈಸೂರು ಸೇರಿದಂತೆ ಅಕ್ಕ–ಪಕ್ಕದ ಜಿಲ್ಲೆಗಳ ಡಿಡಿಪಿಐಗಳಿಗೆ ಪತ್ರ ಬರೆಯುತ್ತಿದ್ದು, ಸದ್ಯದಲ್ಲಿ ಅದು ಆರಂಭವಾಗಲಿದೆ.

–ಅಯೂಬ್ ಖಾನ್, ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ರಾಜ್ಯ ಸರ್ಕಾರ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ನೀಡಿರುವ ಮೈದಾನದ ಭೋಗ್ಯದ ಅವಧಿಯೂ ಮುಂದಿನ ವರ್ಷ ಅಂತ್ಯಗೊಳ್ಳುತ್ತಿದ್ದು, ಅದನ್ನು ಮುಂದುವರೆಸುವ ಬದಲು ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಇಲ್ಲವೇ ಭೋಗ್ಯದ ಅವಧಿಯನ್ನು ಮತ್ತೆ 30 ವರ್ಷಕ್ಕೆ ವಿಸ್ತರಿಸಿ ಎಂದು ಅಧ್ಯಕ್ಷ ಅಯೂಬ್ ಖಾನ್ ಮನವಿ ಮಾಡಿದರು.

ಮೊದಲ ಹಂತದಲ್ಲಿ 48 ಕೋಟಿ ರೂ. ವೆಚ್ಚದಲ್ಲಿ ಪ್ರಮುಖವಾಗಿ ವಾಣಿಜ್ಯ ಮಳಿಗೆಗಳಿರುವ ಎ ಬ್ಲಾಕ್‌ಗೆ ಆಧುನಿಕ ಸ್ಪರ್ಶದ ಜೊತೆಗೆ ಪಾರಂಪರಿಕ ರೀತಿ ನವೀಕರಣ, ಮಧ್ಯ ಭಾಗದಲ್ಲಿ ಪಾರಂಪರಿಕ ಮಾದರಿಯಲ್ಲೇ ರೆಸ್ಟೋರೆಂಟ್ ವ್ಯವಸ್ಥೆ, ದೀಪಾಲಂಕಾರ ಸಂಬಂಧ ಬಾಂಬೆ ಮೂಲದ ಸಂಸ್ಥೆಯಿಂದ ಸಿದ್ಧಪಡಿಸಿರುವ ಡಿಪಿಆರ್ ವೀಕ್ಷಿಸಲಾಯಿತು.

ಮೈದಾನದ ಮಧ್ಯಭಾಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ ನೃತ್ಯ ಕಾರಂಜಿಯ ಡಿಪಿಆರ್ ಮತ್ತು ವಿಡಿಯೋ ತುಣುಕನ್ನು ವೀಕ್ಷಿಸಿದರು. ಪ್ರಾಧಿಕಾರದ ವತಿಯಿಂದ ಸ್ವಂತ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಿ ವರ್ಷಪೂರ್ತಿ ವಸ್ತುಪ್ರದರ್ಶನ ತೆರೆದಿರುವ ವಿಷಯವೂ ಪ್ರಸ್ತಾಪವಾಯಿತು. ಹಾಗೇ ವರ್ಚ್ಯುವಲ್ ಥೀಮ್ ಬಳಸಿಕೊಂಡು ಜ್ಯುರಾಸಿಕ್ ಪಾರ್ಕ್ ನಿರ್ಮಿಸಲು ಚಿಂತನೆ ನಡೆಸಲಾಗಿದೆ.

ದಸರಾ ಸಂದರ್ಭದಲ್ಲಿ ದೇಶದ ವಿವಿಧ ರಾಜ್ಯಗಳ ವಿಶೇಷತೆಗಳ ಪ್ರದರ್ಶನ ಮತ್ತು ಮಾರಾಟವನ್ನು 'ಒಂದು ರಾಜ್ಯ ಒಂದು ಉತ್ಪನ್ನ' ಶೀರ್ಷಿಕೆಯಡಿ ಎಲ್ಲಾ ರಾಜ್ಯಗಳ ಪ್ರವಾಸೋದ್ಯಮ ಇಲಾಖೆಗೆ ಆಹ್ವಾನ ನೀಡುವಂತೆ ನಿರ್ಧರಿಸಲಾಯಿತು. ಹಾಗೇ ಬ್ರ್ಯಾಂಡ್ ಮೈಸೂರು ಅಡಿ ಜಿಲ್ಲೆಯ ವಿಶೇಷತೆಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸುವ ವಿಚಾರವಾಗಿಯೂ ಚರ್ಚಿಸಲಾಯಿತು.

ಜು.6ರಿಂದ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನದಲ್ಲಿ 82ನೇ ಜಯಂತ್ಯುತ್ಸವ; 20ನೇ ಬ್ರಹ್ಮ ರಥೋತ್ಸವ


ಮೈಸೂರು, ಜು.1–ನಗರದ ವಿ.ವಿ. ಮೊಹಲ್ಲಾ ಮಾತೃಮಂಡಳಿ ವೃತ್ತದಲ್ಲಿರುವ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನದ ವತಿಯಿಂದ ಜು.6ರಿಂದ 19ರವರೆಗೆ 82ನೇ ಜಯಂತ್ಯುತ್ಸವ ಹಾಗೂ 20ನೇ ಬ್ರಹ್ಮರಥೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಜು.6ರಂದು ಬೆಳಗ್ಗೆ 9 ಗಂಟೆಗೆ ಸ್ವಸ್ತಿ ವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ, ಧ್ವಜಾರೋಹಣ ಏರ್ಪಡಿಸಲಾಗಿದೆ. ಜು.7ರಂದು ಬೆಳಗ್ಗೆ 9 ಗಂಟೆಗೆ ನವಗ್ರಹ ಮೃತ್ಯುಂಜಯ ಹೋಮ, ಜು.8ರಂದು ಬೆಳಗ್ಗೆ 9ಕ್ಕೆ ದಕ್ಷಿಣಾಮೂರ್ತಿ ಹೋಮ, ಜು.9ರಂದು ಬೆಳಗ್ಗೆ 9ಕ್ಕೆ ಗಣಪತಿ ಹೋಮ, ಜು.10ರಂದು ಬೆಳಗ್ಗೆ 9ಕ್ಕೆ ಲಲಿತ ಸಹಸ್ರನಾಮ ಹೋಮ, ಜು.11ರಂದು ಬೆಳಗ್ಗೆ 9ಕ್ಕೆ ಸುಬ್ರಹ್ಮಣ್ಯ ಹೋಮ, ಜು.12ರಂದು ಬೆಳಗ್ಗೆ 9ಕ್ಕೆ ಮಹಾನ್ಯಾಸ ಪೂರ್ವಕ ಏಕಾದಶವಾರ ರುದ್ರ ಪಾರಾಯಣ, ಸಂಜೆ 4.30ಕ್ಕೆ ಪವಮಾನ ಪಾರಾಯಣ, ಜು.13ರಂದು ಬೆಳಗ್ಗೆ 9ಕ್ಕೆ ರುದ್ರ ಹೋಮ, ಜು.14ರಂದು ಬೆಳಗ್ಗೆ 9ಕ್ಕೆ ಗಿರಿಜಾ ಕಲ್ಯಾಣ (ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ), ಜು.15ರಂದು ಬೆಳಗ್ಗೆ 9ಕ್ಕೆ ಶ್ರೀ ಕಾಲಭೈರವ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ದತ್ತಾತ್ರೇಯ ಹೋಮ, ಜು.16ರಂದು ಬೆಳಗ್ಗೆ 7.30ಕ್ಕೆ ಬ್ರಹ್ಮ ರಥೋತ್ಸವ, ರಥಾರೋಹಣ, ಸಂಜೆ ಡೋಲೋತ್ಸವ, ಶಯನೋತ್ಸವ, ಜು.17ರಂದು ಬೆಳಗ್ಗೆ 8ಕ್ಕೆ ಅವಭೃತ ಸ್ನಾನ, ವಸಂತೋತ್ಸವ, ಬೆಳಗ್ಗೆ 9ಕ್ಕೆ ಪವಮಾನ ಹೋಮ, ಜು.18ರಂದು ಬೆಳಗ್ಗೆ 9ಕ್ಕೆ ಲಕ್ಷಾರ್ಚನಾ ಹೋಮ, ಜು.19ರಂದು ಬೆಳಗ್ಗೆ 8.30ಕ್ಕೆ ಶತಕಲಶಾಭಿಷೇಕ ಆಯೋಜಿಸಲಾಗಿದೆ.



ಜು.8ರಿಂದ 14ರವರೆಗೆ ಪ್ರತಿದಿನ 6.30ರಿಂದ 8ರವರೆಗೆ ಗಿರಿಜಾ ಕಲ್ಯಾಣದ ಬಗ್ಗೆ ಸಂಗೀತ, ನೃತ್ಯ, ಪ್ರವಚನವನ್ನು ಡಾ.ಜ್ಯೋತಿ ಶಂಕರ್ ಮತ್ತು ತಂಡದವರಿಂದ ಏರ್ಪಡಿಸಲಾಗಿದೆ. ಜು.6ರಿಂದ 16ರವರೆಗೆ ಪ್ರತಿದಿನ ನಿತ್ಯ ಹೋಮ ಏರ್ಪಡಿಸಲಾಗಿದೆ ದೇವಸ್ಥಾನದ ವ್ಯವಸ್ಥಾಪಕ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಪತ್ರಕರ್ತರಾದ ಎಂ.ಬಿ.ಮರಮ್‌ಕಲ್‌ಗೆ ಸನ್ಮಾನ



ಪತ್ರಿಕಾ ದಿನಾಚರಣೆ ಅಂಗವಾಗಿ ಲಾಗೈಡ್ ಕನ್ನಡ ಮಾಸಪತ್ರಿಕೆ ಬಳಗದ ವತಿಯಿಂದ ಹಿರಿಯ ವಕೀಲರೂ ಆದ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಎಚ್.ಎನ್.ವೆಂಕಟೇಶ್ ಅವರು ಹಿರಿಯ ಪತ್ರಕರ್ತ ಎಂ.ಬಿ.ಮರಮ್‌ಕಲ್ ಅವರಿಗೆ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಗೌರವಿಸಿದರು. ಈ ವೇಳೆ ಹಿರಿಯ ಪತ್ರಕರ್ತರಾದ ಕೊಳ್ಳೇಗಾಲ ಮಹೇಶ್, ಕೆ.ಪಿ.ನಾಗರಾಜ್ ರಾಮ್ ಉಪಸ್ಥಿತರಿದ್ದರು.

ಹಿರಿಯ ರಂಗಕರ್ಮಿ ನ.ರತ್ನರಿಗೆ ನುಡಿನಮನ

ರಂಗಭೂಮಿ ಚೈತನ್ಯ, ರಂಗ ಭೀಷ್ಮರಿಗೆ ಭಾರತ ರತ್ನ ದೊರಕಬೇಕಿತ್ತು

ಮೈಸೂರು, ಜು.1(ಜಿಎ)– ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ರತ್ನರ ಬಳಗದ ವತಿಯಿಂದ ಹಿರಿಯ ರಂಗಕರ್ಮಿ ನ.ರತ್ನ ಅವರಿಗೆ 'ರತ್ನ–ಎಂದಿಗೂ ರತ್ನ' ಶೀರ್ಷಿಕೆಯಡಿ ನುಡಿ ನಮನ ಸಲ್ಲಿಸಲಾಯಿತು.

ಈ ವೇಳೆ ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಮಾತನಾಡಿ, ನ.ರತ್ನ ರಂಗಭೂಮಿಯ ಬಹಳ ದೊಡ್ಡ ಚೈತನ್ಯವಾಗಿದ್ದು, ಮಾನವೀಯ, ನೈತಿಕ ಮೌಲ್ಯ ಹಾಗೂ ಸಾಮಾಜಿಕ ಹೊಣೆಗಾರಿಕೆ ಹೊಂದಿದ್ದು ವ್ಯಕ್ತಿಗತವಾಗಿ ಎಷ್ಟೇ ಕಷ್ಟ ಕಾರ್ಪಣ್ಯಗಳು ಬಂದರೂ ತಮ್ಮ ಮೇಲೆ ಹೊತ್ತುಕೊಂಡು ರಂಗಭೂಮಿ ಕಟ್ಟಲು ಶ್ರಮಿಸಿದ್ದಾರೆ ಎಂದು ನೆನೆದರು.

ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಮಾತನಾಡಿ, ನ.ರತ್ನ ಮೈಸೂರಿನ ರಂಗಭೀಷ್ಮ ಮತ್ತು ರಂಗ ರತ್ನವೂ ಆಗಿದ್ದರು. ನಮ್ಮದು ಆರು ದಶಕಗಳ ಒಡನಾಟ. ಅವರು ನೊಬಲ್ ಮ್ಯಾನ್. ಅವರನ್ನು ಕಳೆದುಕೊಂಡಿದ್ದೇವೆ. ಅದೇ ದುಃಖ. ಕನ್ನಡ ರಂಗಭೂಮಿಗೆ ಅವರು ಕೊಟ್ಟ ಕೊಡುಗೆ ಬಹಳ ದೊಡ್ಡದು ಎಂದರು.



ಹಿರಿಯ ರಂಗಕರ್ಮಿ ನ.ರತ್ನ ಅವರಿಗೆ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ರಂಗಗೀತೆಗಳ ಮೂಲಕ ನಮನ ಸಲ್ಲಿಸಿದರು.

ನಿವೃತ್ತ ಇಂಜಿನಿಯರ್ ಬಾಪು ಸತ್ಯನಾರಾಯಣ ಮಾತನಾಡಿ, ನ.ರತ್ನ ಅವರಿಗೆ ಹಲ ವಾರು ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ. ಅವರಿಗೆ ಪದ್ಮಶ್ರೀ, ಭಾರತ ರತ್ನ ಪ್ರಶಸ್ತಿ ದೊರಕಬೇಕಿತ್ತು. ಆದರೆ, ದೊರಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರಂಗ ಗಾಯಕರು ರಂಗಗೀತೆಗಳನ್ನು ಹಾಡಿ ನಮನ ಸಲ್ಲಿಸಿದರು. ಈ ವೇಳೆ ಗಾಯಕರಾದ ಎಚ್.ಆರ್.ಲೀಲಾವತಿ, ಡಾ.ಎನ್. ಪಿ.ನಟರಾಜ್, ಎನ್.ಧನಂಜಯ, ಶ್ರೀನಿವಾಸ್ ಜಿ.ಕಪ್ಪಣ್ಣ, ವೆಂಕಟರಾಜು, ರಾಮಚಂದ್ರ, ರಾಜೇಶ್, ಪ್ರಸಾದ್ ಕುಂದೂರ್, ಸವಿತಾ ಪ.ಮಲ್ಲೇಶ್, ಮೈಸೂರು ದೀಪಕ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೊರಗುತ್ತಿಗೆ ನೇಮಕಾತಿ ಮೀಸಲಾತಿಯಲ್ಲಿನ ಲೋಪ ಸರಿಪಡಿಸುವಂತೆ ಪ್ರತಿಭಟನೆ

ಮೈಸೂರು, ಜು.1(ಜಿಎ)–ಹೊರ ಗುತ್ತಿಗೆ ನೇಮಕಾತಿಗಳಲ್ಲಿ ಮೀಸಲಾತಿ ನಿಯಮ ಜಾರಿಗೆ ತರುವಂತೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿರುವುದು ಸ್ವಾಗತಾರ್ಹ. ಆದರೆ ಅದರಲ್ಲಿನ ಷರತ್ತೊಂದರಲ್ಲಿ 45 ದಿನಗಳಿಗಿಂತ ಕಡಿಮೆ ಅವಧಿಗೆ ನೇಮಕಾತಿ ವೇಳೆ ಈ ನಿಯಮ ಅನ್ವಯವಾಗುವುದಿಲ್ಲ ಎಂದು ತಿಳಿಸಿರುವುದು ಸರಿಯಲ್ಲ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಮಿತಿ ಸಂಚಾಲಕ ಗುರುಪ್ರಸಾದ್ ಕೆರಗೋಡು ಬೇಸರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಷರತ್ತು ಹೊರಗುತ್ತಿಗೆಯಲ್ಲಿನ ಮೀಸಲಾತಿ ನೀತಿಗೆ ತದ್ವಿರುದ್ಧವಾಗಿದೆ. ಹೀಗಾಗಿ ಇದನ್ನು ರದ್ದುಗೊಳಿಸಬೇಕು. ಇದರೊಡನೆ 20 ಕ್ಕಿಂತ ಹೆಚ್ಚು ಜನರನ್ನು ನೇಮಕ ಮಾಡಿಕೊಳ್ಳುವ ವೇಳೆ ಮಾತ್ರ ಮೀಸಲಾತಿ ಅನುಸರಿಸ ಬೇಕೆಂದಿರುವುದು ಸಹ ಸರಿಯಲ್ಲ. ಆದ್ದರಿಂದ ಈ ಎರಡೂ ಷರತ್ತು ರದ್ದುಪಡಿಸಬೇಕೆಂದು ಕೋರಿ ಜು.5ರಂದು ರಾಜ್ಯದ ಎಲ್ಲಾ ಡಿಸಿ ಕಚೇರಿಗಳ ಎದುರು ಸಂಘಟನೆ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಸಿದರು.

ತಮ್ಮವರಿಗೇ ಸಿಎಂ, ಡಿಸಿಎಂ ಹುದ್ದೆ ನೀಡಬೇಕೆಂದು ಕೆಲವು ಮಠಾಧಿಪತಿಗಳು, ಜನಪ್ರತಿನಿಧಿಗಳು ಧ್ವನಿಯೆತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ, ಸದ್ಯದಲ್ಲಿ ಇದರ ಅಗತ್ಯವಿಲ್ಲ. ಆದರೆ ಒಂದು ವೇಳೆ ನೀಡಬೇಕಾಗಿ ಬಂದರೆ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣರಾದ ಹಾಗೂ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದಲಿತ ಸಮುದಾಯದವರಿಗೇ ನೀಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕಲ್ಲಹಳ್ಳಿ ಕುಮಾರ್, ಆಲಗೂಡು ಶಿವಕುಮಾರ್, ಬೆಟ್ಟಯ್ಯಕೋಟೆ ಉಪಸ್ಥಿತರಿದ್ದರು.

ಮೋದಿ ವಿಶ್ವಗುರುವಾಗಲು ಸಾಧ್ಯವಿಲ್ಲ

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಅಭಿಮತ

ಮೈಸೂರು, ಜು.1 (ಜಿಎ)–12ನೇ ಶತಮಾನದ ಬಸವಣ್ಣ, ಸ್ವಾತಂತ್ರ್ಯಕ್ಕೆ ಹೋರಾಡಿದ ಗಾಂಧೀಜಿ, ದೇಶಕ್ಕೆ ಸಂವಿಧಾನ ಕೊಟ್ಟ ಅಂಬೇಡ್ಕರ್ ಇವರು ವಿಶ್ವಗುರು ಹೊರತು, ಮೋದಿ ವಿಶ್ವಗುರುವಾಗಲು ಸಾಧ್ಯವಿಲ್ಲ ಎಂದು ಸಾಮಾಜಿಕ ಕಾರ್ಯಕರ್ತೆ, ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಸಂಶೋಧನಾ ವಿದ್ಯಾರ್ಥಿ ವೇದಿಕೆ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಅಂಬೇಡ್ಕರ್ ಚಿಂತನೆ ಸಮಕಾಲೀನ ಸ್ಪಂದನೆ ಕುರಿತ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ನಮ್ಮನ್ನು, ನಮ್ಮ ಲಿಂಗತ್ವ ನಿರ್ಣಯ ಮಾಡಲು ಯಾರಿಗೂ ಹಕ್ಕಿಲ್ಲ. ನಾವೇ ನಮ್ಮ ಲಿಂಗ ನಿರ್ಧರಿಸುವ ಮಹಾಲಿಂಗಿಗಳು. ಇದನ್ನು ಕೇಳುವ, ಪ್ರಶ್ನಿಸುವ ಹಕ್ಕು ಸಂವಿಧಾನ ಒದಗಿಸಿದೆ. ಇದರಿಂದಲೇ ನಮ್ಮ ರಕ್ಷಣೆಯಾಗುತ್ತಿದೆ. ಲಿಂಗ, ಲಿಂಗತ್ವ, ಲೈಂಗಿಕತೆಯೇ ನನ್ನ ಧರ್ಮ. ಅದನ್ನು ಸಂವಿಧಾನವೇ ರಕ್ಷಿಸುತ್ತಿರುವಾಗ, ನಮ್ಮನ್ನು ತೀರ್ಮಾನಿಸಲು ನೀವೆಲ್ಲ ಯಾರು ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಸಂಶೋಧನಾ ವಿದ್ಯಾರ್ಥಿ ವೇದಿಕೆ ವತಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಉದ್ಘಾಟಿಸಿದರು.

ಅಂಬೇಡ್ಕರ್ ಚಿಂತನೆ: ಸಮಕಾಲೀನ ಸ್ಪಂದನೆ ವಿಷಯ ಕುರಿತು ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಅಂಬೇಡ್ಕರ್ ಶೋಷಣೆ ವಿರುದ್ಧ ಜ್ಞಾನದ ಮಾರ್ಗದ ಕ್ರಾಂತಿ ಹರಿಸಿ ಸಮಾನತೆ ಸಾಧಿಸಿದರು. ಸಾಮಾಜಿಕ ಬದಲಾವಣೆಗೆ ಶ್ರಮಿಸಿದರು. ಎಲ್ಲರಿಗೂ ಸ್ಥಾನಮಾನ, ಸಮಾನತೆ ದೊರಕಬೇಕು ಎಂಬುದು ಅವರ ಆಶಯವಾಗಿತ್ತು. ಜಾತಿ ವ್ಯವಸ್ಥೆಗೆ ಕಾನೂನಿನಲ್ಲಿ ಮಾನ್ಯತೆ ಇರಬಾರದು. ಶ್ರಮ ವಿಭಜನೆಯಲ್ಲಿ ಮೇಲು–ಕೀಳು ಇರಬಾರದು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸೋದರತೆ ದೇಶದಲ್ಲಿ ಹರಡಬೇಕೆಂದು ಅಂಬೇಡ್ಕರ್ ಬಯಸಿದ್ದರು ಎಂದರು.

ದೇಶದಲ್ಲಿ ಸನಾತನ ಮತ್ತು ಸಂವಿಧಾನ ಒಟ್ಟಾಗಿ ಹೋಗಲು ಸಾಧ್ಯವಿಲ್ಲ. ಶೋಷಣೆ, ಮೇಲು ಕೀಳು ವ್ಯವಸ್ಥೆ ತೊಡೆದು ಹಾಕುವ ಸಲುವಾಗಿ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಸಾಮಾಜಿಕ ಸ್ವಾತಂತ್ರ್ಯ ಹೋರಾಟ ಸಹ ಪ್ರಾರಂಭವಾಯಿತು. ಇದಕ್ಕೆ ಸಾವಿರ ವರ್ಷಗಳ ಇತಿಹಾಸ ಇದೆ. ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ಬಲಪಂಥೀಯರು ಹೇಳಿದ್ದರು. ಇದಕ್ಕಾಗಿ 400 ಸ್ಥಾನ ನೀಡಿ ಎಂದು ಕೇಳಿದ್ದರು. ಆದರೆ ಅಧಿಕೃತವಾಗಿ ಪ್ರಣಾಳಿಕೆಯಲ್ಲಿ ಹೇಳಲಿಲ್ಲ. ಕಾರಣ ಆಳುವ ವರ್ಗದ ಸ್ವಭಾವವೇ ವಂಚನೆ. ಯುವಕರ ಮನಸ್ಸು ಗೆದ್ದು, ಮಾಧ್ಯಮ ಖರೀದಿಸಿ, ಮನುಸ್ಮೃತಿ ಜಾರಿ ಮಾಡಲು ಹೊರಟಿದ್ದರು. ಆದರೆ ಭಾರತದ ಜನರು ಇದರ ಪರವಾಗಿರಲಿಲ್ಲ. ಅವರು ಬಯಸಿದ ಬಹುಮತ ಪಡೆಯಲಿಲ್ಲ. ಆದಿವಾಸಿಗಳು, ದಲಿತರು, ಅಸ್ಪೃಶ್ಯರು, ಶೂದ್ರರು, ಮುಸ್ಲಿಂ ಸಮುದಾಯದವರು ಅಂಬೇಡ್ಕರ್ ಸಂವಿಧಾನ ಮತ್ತು ತತ್ವ ಚಿಂತನೆ ಮನಗಂಡು ರುಜುವಾತು ಪಡಿಸಿದರು. ಬಯಸಿದ ಸಂಖ್ಯಾಬಲ ಪಡೆಯಲು ಆಗದೆ ಪ್ರಾದೇಶಿಕ ಪಕ್ಷಗಳ ಆಶ್ರಯ ಪಡೆಯಬೇಕಾಯಿತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಒಯು ಪ್ರಾಧ್ಯಾಪಕರಾದ ಪ್ರೊ.ಕವಿತಾ ರೈ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ



ಮೈಸೂರು, ಜು.1(ಬಿಎಲ್‌ಯು)–ಮೈಸೂರು ಜಿಲ್ಲೆಯ 27 ಪರೀಕ್ಷಾ ಕೇಂದ್ರಗಳಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ನಡೆಯಿತು. ಒಟ್ಟು 4103 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಸಿಕೊಂಡಿದ್ದರು. ಬೆಳಗ್ಗೆ 9.30ರಿಂದ 12 ಗಂಟೆಗೆ ಮೊದಲ ಹಂತದ ಪರೀಕ್ಷೆ ಹಾಗೂ ಮಧ್ಯಾಹ್ನ 2 ರಿಂದ 4.30 ಗಂಟೆ ತನಕ ಎರಡನೇ ಹಂತದ ಪರೀಕ್ಷೆ ನಡೆಯಿತು. ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಮೊಬೈಲ್ ಫೋನ್, ಡಿಜಿಟಲ್ ವಾಚ್ ಸೇರಿದಂತೆ ಇತರೆ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ಕೊಂಡೊಯ್ಯದಂತೆ ನಿಷೇಧಿಸಲಾಗಿತ್ತು.

ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಪೊಲೀಸರನ್ನು ನಿಯೋಜಿಸಿ, ಅಪರಿಚಿತ ವ್ಯಕ್ತಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಬಾರದಂತೆ ಕಣ್ಗಾವಲು ಹಾಕಲಾಗಿತ್ತು.

ಮೈಸೂರು ಮಿತ್ರ

ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಸಿದ್ಧತಾ ಸಭೆ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮನ್ವಯ ಸಮಿತಿ ರಚಿಸಲು ನಿರ್ಧಾರ

ಮಂಡ್ಯ,ಜು.1– ಈ ವರ್ಷದ ಡಿಸೆಂಬರ್ 20, 21 ಹಾಗೂ 22 ರಂದು ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜವಾಬ್ದಾರಿ ನಿರ್ವಹಿಸಲು ಸಮನ್ವಯ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಸಾಪ ಪದಾಧಿಕಾರಿಗಳೊಂದಿಗೆ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಕೆ.ರವಿಕುಮಾರ್ ಚಾಮಲಾಪುರ ನಿಧನದ ಹಿನ್ನೆಲೆಯಲ್ಲಿ ತೆರವಾಗಿರುವ ಅಧ್ಯಕ್ಷರ ಜವಾಬ್ದಾರಿಯನ್ನು ನಿರ್ವಹಿಸಲು ಹಾಗೂ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವ ದೃಷ್ಟಿಯಿಂದ ಸಮ್ಮೇಳನ ಮುಗಿಯುವವರೆಗೆ ತಾತ್ಕಾಲಿಕ ಸಮಿತಿಯೊಂದನ್ನು ರಚಿಸುವ ನಿರ್ಧಾರಕ್ಕೆ ಬರಲಾಯಿತು.

ಸಮಿತಿ ರಚಿಸುವ ಜವಾಬ್ದಾರಿಯನ್ನು ಸಚಿವ ಎನ್.ಚಲುವರಾಯಸ್ವಾಮಿ, ಕೇಂದ್ರ ಕಸಾಪ ಅಧ್ಯಕ್ಷ ಮಹೇಶ ಜೋಶಿ ಹಾಗೂ ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ವಹಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸರ್ಕಾರ ಮಂಡ್ಯದಲ್ಲಿ ಸಮ್ಮೇಳನ ನಡೆಸಲು ಒಪ್ಪಿಗೆ ನೀಡಿದೆ. ಅದಕ್ಕಾಗಿ ಸಿದ್ಧತೆಗಳು ಆರಂಭವಾಗಬೇಕು. ಯಾವುದೇ ಅಪಸ್ವರವಿಲ್ಲದೆ ಸೌಹಾರ್ದ, ಸಹಕಾರ, ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ನಿಮ್ಮೆಲ್ಲರ ಅಭಿಪ್ರಾಯ ಸಂಗ್ರಹಿಸಲು ಈ ಸಭೆ ಕರೆಯಲಾಗಿದೆ. ಮೂರನೇ ಬಾರಿ ನಡೆಯುತ್ತಿರುವ ಈ ಸಮ್ಮೇಳನ ಯಶಸ್ವಿಯಾಗಿ ನಡೆಯಬೇಕು. ಅದಕ್ಕಾಗಿ ಎಲ್ಲರೂ ಜವಾಬ್ದಾರಿ ತೆಗೆದುಕೊಂಡು ಕೈ ಜೋಡಿಸುವ ಭರವಸೆ ನೀಡಿದರೆ ತಾವು ಮುಂದುವರೆಯುವುದಾಗಿ ತಿಳಿಸಿದರು. ಇದಕ್ಕೆ ಸಭೆ ಒಪ್ಪಿಗೆ ನೀಡಿತು.



ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿಗದಿಪಡಿಸಿರುವ ಸ್ಥಳವನ್ನು ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಕಸಾಪ ಪದಾಧಿಕಾರಿಗಳು ಪರಿಶೀಲಿಸಿದರು.

ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, ಮಂಡ್ಯದಲ್ಲಿ ನಡೆಯುವ ಸಮ್ಮೇಳನ ಮುಂದೆ ನಡೆಯುವ ಸಮ್ಮೇಳನಗಳಿಗೆ ಮಾರ್ಗದರ್ಶಿಯಾಗಬೇಕು. ಆ ರೀತಿ ಸಮ್ಮೇಳನ ನಡೆಸಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಶಾಸಕ ರವಿಕುಮಾರ್‌ಗೌಡ ಗಣಿಗ, ಸಮ್ಮೇಳನ ಪುಸ್ತಕ ಪ್ರಕಟಣಾ ಸಮಿತಿ ಅಧ್ಯಕ್ಷ ಹೆಚ್.ಎಸ್.ಮುದ್ದೇಗೌಡ, ಕಸಾಪ ಮಾಜಿ ಅಧ್ಯಕ್ಷರಾದ ಜಿ.ಟಿ.ವೀರಪ್ಪ ಮೀರಾ ಶಿವಲಿಂಗಯ್ಯ, ಡಿ.ಪಿ.ಸ್ವಾಮಿ, ಕೋಶಾಧ್ಯಕ್ಷ ಬಿ.ಎಂ.ಅಪ್ಪಾಜಪ್ಪ ತಾಲೂಕು ಕಸಾಪ ಅಧ್ಯಕ್ಷ ಚಂದ್ರಲಿಂಗು, ಪ್ರಕಾಶ್ ಮೇನಾಗರ, ಬಸವೇಗೌಡ ಖರಡ್ಯ, ಮಂಜುನಾಥ್ ಬಲ್ಲೇನಹಳ್ಳಿ, ಸುಜಾತಕೃಷ್ಣ ಕ್ರಾಂತಿಸಿಂಹ, ಎಂ.ಸಿ. ಭಾಸ್ಕರ್, ಅಂಜನಾ ಶ್ರೀಕಾಂತ್, ವಿ.ಹರ್ಷ ಪಣ್ಣೆದೊಡ್ಡಿ ಮುಂತಾದವರು ತಮ್ಮ ಸಲಹೆ ನೀಡಿದರು.

ಸಭೆಯಲ್ಲಿ ಕೇಂದ್ರ ಕಸಾಪ ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗಶೆಟ್ಟಿ, ಕೋಶಾಧ್ಯಕ್ಷ ಪಟೇಲ್ ಪಾಂಡು, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಜಿಲ್ಲಾ ಪಂಚಾಯತ್ ಸಿಇಓ ಶೇಖ್ ತನ್ವೀರ್ ಆಸಿಫ್, ವಾರ್ತಾಧಿಕಾರಿ ಎಸ್.ಹೆಚ್. ನಿರ್ಮಲಾ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ವಿ. ಧರಣೇಂದ್ರಯ್ಯ, ಗೌರವ ಕಾರ್ಯದರ್ಶಿ ಧನಂಜಯ ದರಸಗುಪ್ಪೆ, ಸಂಘ–ಸಂಸ್ಥೆ ಪ್ರತಿನಿಧಿ ಹೊಳಲು ಶ್ರೀಧರ್, ಸುನಿಲ್‌ಕುಮಾರ್, ಅಪೂರ್ವ ಚಂದು ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ಜಿಲ್ಲಾಧಿಕಾರಿಯಿಂದ ಸ್ಥಳ ವೀಕ್ಷಣೆ: ಸಭೆಯ ನಂತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಈಗಾಗಲೇ ಗುರುತಿಸಿರುವ ಬೆಂಗಳೂರು–ಮೈಸೂರು ಹೆದ್ದಾರಿಯ ಅಮರಾವತಿ ಹೋಟೆಲ್ ಹಿಂಭಾಗದ ಪ್ರದೇಶ ಹಾಗೂ ನಾಗಮಂಗಲ ರಸ್ತೆಯ ಚಿಕ್ಕಮಂಡ್ಯ ಭಾಗದಲ್ಲಿರುವ ಗದ್ದೆಯ ಬಯಲು ಪ್ರದೇಶವನ್ನು ಜಿಲ್ಲಾಧಿಕಾರಿ ಡಾ.ಕುಮಾರ ವೀಕ್ಷಿಸಿದರು.

ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಗೊಂದಲ

ಪುರಸಭೆ ನೆಟ್ಟಿದ್ದ ಕಲ್ಲು ಕಂಬ, ನಾಮಫಲಕ ಕಿತ್ತೆಸೆದ ರೈತರು



ಒಳ ಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸ್ವಾಧೀನಪಡಿಸಿಕೊಂಡ ಜಮೀನನ್ನು ಭೂ ಮಾಪನ ಮತ್ತು ಪುರಸಭೆ ಕಂದಾಯ ಅಧಿಕಾರಿಗಳು ಸರ್ವೇ ಮಾಡುತ್ತಿರುವುದು.

ಪಾಂಡವಪುರ,ಜು.1– ಪಟ್ಟಣದ ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ರೈತರಿಂದ ಸ್ವಾಧೀನ ಪಡಿಸಿಕೊಂಡಿದ್ದ ಜಮೀನು ಸರ್ವೆ ನಡೆಸಿ ಹದ್ದುಬಸ್ತು ಗುರುತಿಗಾಗಿ ನೆಟ್ಟಿದ್ದ ಕಲ್ಲುಕಂಬ ಹಾಗೂ ನಾಮಫಲಕವನ್ನು ಕಿತ್ತೆಸೆದಿರುವ ಘಟನೆ ನಡೆದಿದ್ದು, ಈ ಸಂಬಂಧ ಪುರಸಭೆ ಅಧಿಕಾರಿಗಳು ಪೊಲೀಸರಿಗೆ ದೂರು ನೀಡಿದ್ದಾರೆ.

ಒಳಚರಂಡಿ ಮಲಿನ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ಪಟ್ಟಣದ ಬನ್ನಾರಮ್ಮ ದೇವಸ್ಥಾನದ ಮುಂಭಾಗ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 2009ರಲ್ಲಿ ರೈತರ 5.20 ಎಕರೆ ಸ್ವಾಧೀನ ಪಡಿಸಿಕೊಂಡು ಪ್ರತಿ ಗುಂಟೆ ಜಮೀನಿಗೆ ಇಂತಿಷ್ಟು ಎಂದು ಪರಿಹಾರ ನಿಗದಿಗೊಳಿಸಿತ್ತು. ಮಂಡಳಿ ನಿಗದಿಗೊಳಿಸಿದ ಪರಿಹಾರದ ಮೊತ್ತಕ್ಕೆ ಒಪ್ಪದ ಜಮೀನು ಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ಪ್ರಕರಣ ವಿಚಾರಣೆ ಹಂತದಲ್ಲಿದೆ.

ಈ ಮಧ್ಯೆ ಕಳೆದ ಮಾ.3ರಂದು ಪುರಸಭೆ ಅಧಿಕಾರಿಗಳು ಜಮೀನು ಸರ್ವೇಗೆ ತೆರಳಿದ್ದ ವೇಳೆ ಸ್ವಾದೀನಕ್ಕೆ ಒಳಪಡುವ ಜಮೀನು ವಿಚಾರವಾಗಿ ಇಬ್ಬರು ರೈತರ ನಡುವೆ ವಾಗ್ವಾದ ಏರ್ಪಟ್ಟಿತ್ತು. ಒಬ್ಬರು ಜಮೀನು ಸರ್ವೇ ಮಾಡಬೇಕು ಎಂದರೆ ಮತ್ತೊಬ್ಬರು ಯಾವುದೇ ಕಾರಣಕ್ಕೂ ಸರ್ವೇಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಪಟ್ಟು ಹಿಡಿದ ಪರಿಣಾಮ ಅಧಿಕಾರಿಗಳು ಸರ್ವೇ ನಡೆಸದೆ ವಾಪಸ್ಸಾಗಿದ್ದರು. ಬಳಿಕ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸೂಚನೆ ಮೇರೆಗೆ ಭೂ ಮಾಪನ ಇಲಾಖೆ ಮತ್ತು ಪುರಸಭೆಯ ಕಂದಾಯ ಅಧಿಕಾರಿಗಳು ಜೂ.21 ರಂದು ಸರ್ವೇ ನಡೆಸಿ ಸ್ವಾಧೀನಕ್ಕೆ ಒಳಪಟ್ಟಿದ್ದ ಜಮೀನಿನ ಗಡಿ ಗುರುತಿಸಿ ಜೂ.26 ರಂದು ಕಲ್ಲುಕಂಬ ನೆಟ್ಟು, ಪುರಸಭೆಗೆ ಸೇರಿದ ಆಸ್ತಿ, ಎಸ್‌ಟಿಪಿ ಪ್ಲಾಂಟ್ ನಿರ್ಮಾಣಕ್ಕೆ ಕಾಯ್ದಿರಿಸಿದ ಜಾಗ ಎಂದು ನಾಮಫಲಕ ಅಳವಡಿಸಿದ್ದರು. ಜೂ.28ರಂದು ಅಧಿಕಾರಿಗಳು ನೆಟ್ಟಿದ್ದ ಕಲ್ಲುಕಂಬ ಹಾಗೂ ನಾಮಫಲಕ ಕಿತ್ತು ಹಾಕಲಾಗಿದೆ. ಹೀಗಾಗಿ ಪುರಸಭೆ ಅಧಿಕಾರಿಗಳು ಪಾಂಡವಪುರ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಯುವತಿ ಆತ್ಮಹತ್ಯೆ

ಪಾಂಡವಪುರ,ಜು.1– ಹೊಟ್ಟೆನೋವು ತಾಳಲಾರದೆ ಯುವತಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಣಿವೆಕೊಪ್ಪಲು ಗ್ರಾಮ ದಲ್ಲಿ ಸೋಮವಾರ ಬೆಳಿಗ್ಗೆ ನಡೆದಿದೆ. ಗ್ರಾಮದ ನಿವಾಸಿ ಟಿಎಪಿಸಿಎಂಎಸ್ ನಿರ್ದೇಶಕ, ವಕೀಲ ಕಣಿವೆ ಯೋಗೇಶ್ ಪುತ್ರಿ ಗೌತಮಿ(21) ಮೃತ ಯುವತಿ.



ಮೃತ ಯುವತಿ ಗೌತಮಿಗೆ ಪದೇಪದೇ ಹೊಟ್ಟೆನೋವು ಬರುತ್ತಿತ್ತು ಎನ್ನಲಾಗಿದ್ದು, ಹಲವೆಡೆ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದರೂ ಹೊಟ್ಟೆನೋವು ಕಡಿಮೆಯಾಗದ ಹಿನ್ನೆಲೆಯಲ್ಲಿ ಸೋಮವಾರ ಬೆಳಿಗ್ಗೆ ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೋಷಕರು ದೂರು ನೀಡಿದ ಹಿನ್ನೆಲೆಯಲ್ಲಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸುಬ್ಬಮ್ಮ ನಿಧನ



ಕೆ.ಆರ್.ಪೇಟೆ: ತಾಲೂಕಿನ ವಳಗೆರೆಮೆಣಸ ಗ್ರಾಮದ ಹಿರಿಯ ಮುಖಂಡ ಲೇ.ರಾಮೇಗೌಡರ (ಚೂರಣ್ಣನ ರಾಮಣ್ಣ) ಪತ್ನಿ ಸುಬ್ಬಮ್ಮ (83) ಸೋಮವಾರ ಮುಂಜಾನೆ ನಿಧನರಾದರು.

ಮೃತರು ಅಗ್ರಹಾರಬಾಚಹಳ್ಳಿ ವಿಎಸ್‌ಎಸ್‌ಎನ್ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಆರ್.ಪಿ.ಕುಮಾರ್, ಗ್ರಾಪಂ ಸದಸ್ಯೆ ನೇತ್ರಾವತಿ ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು.

ಮೌಲ್ಯಯುತ ರಾಜಕಾರಣದ ಸಂರಕ್ಷಣೆಗೆ ಕೆ.ಆರ್‌ಪೇಟೆ ಕೃಷ್ಣರಂತಹ ರಾಜಕಾರಣಿ ಅತ್ಯವಶ್ಯ

ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅಭಿಮತ

ಕೆ.ಆರ್.ಪೇಟೆ,ಜು.1– ಪ್ರಜಾಪ್ರಭುತ್ವ ಹಾಗೂ ಮೌಲ್ಯಯುತ ರಾಜಕಾರಣ ಸಂರಕ್ಷಣೆಗೆ ಕೆ.ಆರ್.ಪೇಟೆ ಕೃಷ್ಣ ಅವರಂತಹ ಸರಳ, ಪ್ರಾಮಾಣಿಕ, ರಾಜಕಾರಣಿಗಳ ಅವಶ್ಯಕತೆ ಇದೆ. ಅವರ ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ದಕ್ಷ ಆಡಳಿತಂತಹ ಆದರ್ಶ ಗುಣಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಅಭಿಪ್ರಾಯಪಟ್ಟರು.

ಅವರು ಕೆ.ಆರ್.ಪೇಟೆ ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಮಾಜಿ ಸ್ಪೀಕರ್ ಕೃಷ್ಣ ಪ್ರತಿಷ್ಠಾನದ ವತಿಯಿಂದ ಮಾಜಿ ಸ್ಪೀಕರ್ ಕೃಷ್ಣ ಅವರ 84ನೇ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕೃಷಿ ಕುರಿತು ವಿಚಾರ ಸಂಕಿರಣ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಕೃಷ್ಣ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೃಷ್ಣ ಅವರು ವೇದಿಕೆಯಲ್ಲಿ ಒಂದು ಮುಖ, ಸಾಮಾಜಿಕ ವ್ಯವಸ್ಥೆಯಲ್ಲಿ ಇನ್ನೊಂದು ಮುಖ ತೋರಿಸಿದ ವ್ಯಕ್ತಿಯಲ್ಲ. ಕೃಷ್ಣ ಅವರ ಹೆಸರನ್ನು ರಾಜ್ಯದ ಪ್ರಾಮಾಣಿಕ ರಾಜಕಾರಣದ ಇತಿಹಾಸದಿಂದ ಅಳಿಸಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ. ಕೆ.ಆರ್.ಪೇಟೆ ಕೃಷ್ಣ ಸಕ್ಕರೆನಾಡು ಮಂಡ್ಯ ನೆಲದ ಗಾಂಧೀವಾದಿಯಾಗಿದ್ದಾರೆ. ಕಡಿದಾಳ ಮಂಜಪ್ಪ, ಶಾಂತವೇರಿ ಗೋಪಾಲಗೌಡರು, ಕೆ.ಆರ್.ಪೇಟೆ ಕೃಷ್ಣ ಅವರು ಸರಳತೆಯ ಸಾಮ್ರಾಟ. ನುಡಿದಂತೆ ನಡೆದವರು. ಇಂತಹ ಆದರ್ಶ ಗುಣಗಳನ್ನು ಸಮಾಜದ ಶೇ.10 ರಷ್ಟು ಮಂದಿ ಬೆಳೆಸಿಕೊಂಡರೆ ಸಾಕು ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ರಮೇಶ್‌ಕುಮಾರ್ ಹೇಳಿದರು.

ಮೈಸೂರಿನ ಸಹಜ ಸಮೃದ್ಧಿ ಸಂಸ್ಥೆಯ ಕೃಷ್ಣಪ್ರಸಾದ್ ಕೃಷಿಯನ್ನು ಉದ್ಯಮವಾಗಿಸಿ ಲಾಭಗಳಿಸುವ ಬಗ್ಗೆ ಉಪನ್ಯಾಸ ನೀಡಿದರು.



ಕೆ.ಆರ್.ಪೇಟೆಯಲ್ಲಿ ನಡೆದ ಮಾಜಿ ಸ್ಪೀಕರ್ ದಿವಂಗತ ಕೃಷ್ಣ ಅವರ 84ನೇ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಮಾತನಾಡಿದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್ ಮಾತನಾಡಿ ಕೆ.ಆರ್.ಪೇಟೆ ತಾಲೂಕು ಕೇಂದ್ರದಲ್ಲಿ ಮಾಜಿ ಸ್ಪೀಕರ್ ಕೃಷ್ಣ ಭವನ ನಿರ್ಮಾಣಕ್ಕೆ ಶಾಸಕರು ಸೇರಿದಂತೆ ಎಲ್ಲರೂ ಕೈಜೋಡಿಸಬೇಕು. ಈ ಮೂಲಕ ಮಂಡ್ಯ ಗಾಂಧೀ ಭವನದ ಮಾದರಿಯಲ್ಲಿ ಕೃಷ್ಣ ಭವನ ಚಟುವಟಿಕೆಗಳ ಕೇಂದ್ರವಾಗುವಂತೆ ಮಾಡಬೇಕು. ಕೃಷ್ಣ ಭವನ ನಿರ್ಮಿಸುವ ಮೂಲಕ ಕೆ.ಆರ್.ಪೇಟೆ ಕೃಷ್ಣ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಗೂಡೇಹೊಸಳ್ಳಿ ಜವರಾಯಿಗೌಡ ಅವರು ವಹಿಸಿದ್ದರು.

ಶಾಸಕ ಹೆಚ್.ಟಿ.ಮಂಜು ಅವರು ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಅಂತರ್ಜಲ ತಜ್ಞ ನವಿಲುಮಾರನಹಳ್ಳಿ ರಾಮೇಗೌಡ, ಪೌರಕಾರ್ಮಿಕ ಮಹಿಳೆ ಕರಪಮ್ಮ ಅವರಿಗೆ 2023–24ನೇ ಸಾಲಿನ ಕೃಷ್ಣ ನಾಗರೀಕ ಪುರಸ್ಕಾರ ನೀಡಿ ಗೌರವಿಸಿದರು.

ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಅವರು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅಧಿಕ ಅಂಕಗಳನ್ನು ಪಡೆದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಿ ಗೌರವಿಸಿದರು.

ಶಾಸಕ ಹೆಚ್.ಟಿ.ಮಂಜು ಅವರು ಭಾರತೀಯ ಸೇನೆಯ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ತಾಲೂಕಿಗೆ ಗೌರವ ತಂದಿರುವ ಬೂಕಹಳ್ಳಿ ಸಾಗರ್ ಅವರಿಗೆ ಕೃಷ್ಣ ವಿಶೇಷ ಪ್ರತಿಭಾ ಪುರಸ್ಕಾರವನ್ನು ಅವರ ತಂದೆ ಮಂಜು ಅವರಿಗೆ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸ್ಪೀಕರ್ ಕೃಷ್ಣರವರ ಧರ್ಮಪತ್ನಿ ಪ್ರೊ.ಇಂದಿರಮ್ಮ ಕೃಷ್ಣ, ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಟಿಎಪಿಸಿ ಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮನ್‌ಮುಲ್ ನಿರ್ದೇಶಕ ಡಾಲು ರವಿ ಇನ್ನಿತರಿದ್ದರು.

ಒಂದನೇ ಪುಟದಿಂದ

ಪ್ರಮುಖ ಅಧಿಕಾರಿಗಳ ವರ್ಗಾವಣೆ

ಮುಡಾದಲ್ಲಿ ದೊಡ್ಡ ಹಗರಣವಾಗಿದೆ ಎಂದು ಮೂರ್‍ನಾಲ್ಕು ದಿನಗಳಿಂದ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ನಿನ್ನೆ ನನ್ನ ಗಮನಕ್ಕೆ ಬಂದ ಕೂಡಲೇ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ಕಮಿಷನರ್ ಜೊತೆ ಇಲ್ಲಿಗೆ ಬಂದು, ಮುಡಾ ಅಧ್ಯಕ್ಷರು, ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ತನಿಖೆ ರೂಪದ ಸಭೆ ನಡೆಸಿದ್ದೇನೆ. ಸಭೆಯಲ್ಲಿ ಹಲವು ವಿಚಾರ ವಿನಿಮಯವಾಗಿದ್ದು, ಮತ್ತಷ್ಟು ವಿಚಾರಗಳು ವಿಚಾರಣಾ ಹಂತದಲ್ಲಿವೆ. ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಕಾರ್ಯದರ್ಶಿ ಶೇಖರ್, ಎಇಇ ಸಂಪತ್ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಕೂಡಲೇ ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದರು.

8 ತಿಂಗಳ ಹಿಂದೆಯೇ ಕ್ರಮ: ಭೂಸ್ವಾಧೀನಕ್ಕೆ ಪ್ರತಿಯಾಗಿ ಶೇ.50:50ರ ಅನುಪಾತದಡಿ ಭೂಮಿಯನ್ನು ಫಲಾನುಭವಿಗಳಿಗೆ ನೀಡುವ ನಿಯಮವನ್ನು 2020ರಲ್ಲಿ ಜಾರಿಗೆ ತಂದು ಅದರಂತೆ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಬಿಜೆಪಿ ಸರ್ಕಾರ ಇದ್ದಾಗ ಹಾಗೂ ಬಿಜೆಪಿಯವರೇ ಮುಡಾ ಅಧ್ಯಕ್ಷರಾಗಿದ್ದಾಗ ಆದ ಈ ನಿರ್ಣಯ ಸರಿ ಇಲ್ಲ ಎಂದು 8 ತಿಂಗಳ ಹಿಂದೆಯೇ ನಾನು ಆದೇಶಿಸಿದ್ದೆ. ಪ್ರಾಧಿಕಾರದ ಬಡಾವಣೆ ಹಾಗೂ ಇತರೆ ಉದ್ದೇಶಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೆ ಹಾಗೂ ಪರಿಹಾರ ನೀಡದೆ ಸದರಿ ಜಮೀನನ್ನು ಉಪಯೋಗಿಸಿಕೊಂಡಿರುವ ಪ್ರಕರಣಗಳಲ್ಲಿ ಶೇ.50:50ರ ಅನುಪಾತದಲ್ಲಿ ನಿವೇಶನ ನೀಡುವ ಕುರಿತು ಕೈಗೊಂಡಿರುವ ನಿಯಮಬಾಹಿರ ನಿರ್ಣಯವನ್ನು ರದ್ದುಪಡಿಸಿ, 2023ರ ಅಕ್ಟೋಬರ್ 27ರಂದು ಆದೇಶಿಸಲಾಗಿದೆ. ನಂತರ ಅದೇ ವರ್ಷದ ಡಿಸೆಂಬರ್ 4ರಂದು ತುಂಡು ಭೂಮಿ ಹಂಚಿಕೆ, ಭೂಪರಿಹಾರವಾಗಿ ಜಾಗ ನೀಡುವ ಕುರಿತು ಸೂಕ್ತ ಮಾರ್ಗಸೂಚಿ ಅವಶ್ಯಕತೆ ಇರುವುದರಿಂದ ಸದರಿ ಮಾರ್ಗಸೂಚಿ ತಯಾರಿಸುವವರೆಗೆ ಈ ರೀತಿಯ ಯಾವುದೇ ನಿರ್ಣಯ ಕೈಗೊಳ್ಳದಂತೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿತ್ತು ಎಂದರು.

ಯಾರೇ ಆಗಿದ್ದರೂ ಕ್ರಮ ನಿಶ್ಚಿತ: ಒಂದು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿ, ವರದಿ ನೀಡುವಂತೆ ಗಡುವು ನೀಡಲಾಗಿದೆ. 2020ರಲ್ಲಿ ಬಿಜೆಪಿ ಸರ್ಕಾರವಿದ್ದಾಗ ಶೇ.50:50ರ ಅನುಪಾತದಡಿ ನಿವೇಶನ ನೀಡಲು ನಿರ್ಣಯ ಮಾಡಿದಾಗಿನಿಂದ ನಿವೇಶನ ಮಂಜೂರಾತಿ ವ್ಯಾಪಕವಾಗಿ ನಡೆದಿದೆ. ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಾನುಸಾರ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಾಲಯದ ಆದೇಶ ಇಲ್ಲದೆ ಅಥವಾ ಬೋರ್ಡ್ ಗಮನಕ್ಕೆ ಬಾರದೆ ನಿವೇಶನ ನೀಡಿರುವ ಪ್ರಕರಣಗಳ ಬಗ್ಗೆ ತನಿಖೆ ನಡೆಯಲಿದೆ. ನ್ಯಾಯಾಲಯದ ಆದೇಶಾನುಸಾರ ನಿವೇಶನ ನೀಡುವುದಿದ್ದರೂ ಆ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು, ಬೋರ್ಡ್ ಸಭೆಯಲ್ಲಿ ಮಂಡಿಸಿ ನಂತರ ಮುಂದಿನ ಕ್ರಮ ವಹಿಸಬೇಕು. ಆದರೆ ಈ ನಿಯಮವನ್ನೂ ಪಾಲಿಸದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ನೈಜ ಫಲಾನುಭವಿಗಳಿಗೆ ನಿವೇಶನ ಸಿಕ್ಕಿದೆಯೋ ಅಥವಾ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಬೇರೆ ಯಾರಾದರೂ ನಿವೇಶನ ಪಡೆದಿದ್ದಾರಾ ಎನ್ನುವುದು ತನಿಖೆಯಲ್ಲಿ ತಿಳಿಯಬೇಕಿದೆ. ತನಿಖೆಯಲ್ಲಿ ಆರೋಪ ಸಾಬೀತಾದರೆ ಭಾಗಿದಾರರು ಯಾವುದೇ ಪಕ್ಷದವರಾಗಲೀ, ಯಾವುದೇ ಅಧಿಕಾರಿಗಳಾಗಿರಲೀ ಅಂತಹವರ ವಿರುದ್ಧ ಉಗ್ರ ಕ್ರಮ ನಿಶ್ಚಿತ ಎಂದು ಸಚಿವರು ಎಚ್ಚರಿಕೆ ನೀಡಿದರು.

ಸಿಎ ನಿವೇಶನ ಅಕ್ರಮಕ್ಕೂ ತಡೆ: ಸಿಎ ನಿವೇಶನ ದುರ್ಬಳಕೆ ಸಂಬಂಧ ಪ್ರತಿಕ್ರಿಯಿಸಿದ ಸಚಿವ ಭೈರತಿ ಸುರೇಶ್, ಪಶು ಆಸ್ಪತ್ರೆಗೆಂದು ಮಂಜೂರಾದ ಒಂದು ಎಕರೆ ಜಾಗದಲ್ಲಿ ಯಾರೋ ಒಬ್ಬರು ಶಾಲೆ ನಿರ್ಮಿಸಿದ್ದಾರೆ. ಅವರೇ ಮುಡಾದಲ್ಲಿ ಅಕ್ರಮ ನಡೆದಿದೆ ಎಂದು ಈಗ ಆರೋಪ ಮಾಡಿದ್ದಾರೆ. ಸಿಎ ನಿವೇಶನವನ್ನು ಉದ್ದೇಶಿತ ಕೆಲಸಕ್ಕೆ ಬಳಸಿಕೊಳ್ಳದೆ ದುರ್ಬಳಕೆ ಮಾಡುವುದು ಅಕ್ಷಮ್ಯ ಅಪರಾಧ. ಅಂತಹ ನಿವೇಶನಗಳನ್ನು ಪತ್ತೆಹಚ್ಚಿ, ಮಂಜೂರಾತಿ ರದ್ದುಪಡಿಸಲಾಗುವುದು. ನಿಯಮಾನುಸಾರ ಬಳಕೆ ಮಾಡಿಕೊಂಡಿದ್ದರೆ ಯಾವುದೇ ಅಭ್ಯಂತರವಿಲ್ಲ ಎಂದು ತಿಳಿಸಿದರು.

ಮಂಜೂರಾತಿ ಅಮಾನತು

ನೈಜ ಫಲಾನುಭವಿಗಳಿಗೆ ನಿವೇಶನಗಳನ್ನು ವಾಪಸ್ ನೀಡಲಾಗುವುದು. ಅಕ್ರಮವಾಗಿ ಮಂಜೂರಾಗಿದ್ದರೆ ಅವುಗಳನ್ನು ಪ್ರಾಧಿಕಾರದ ವಶಕ್ಕೆ ಪಡೆಯಲಾಗುವುದು ಎಂದರು.

ನಿರ್ಣಯಕ್ಕೆ ನಿರ್ಬಂಧ: ತನಿಖೆ ಮುಗಿಯುವವರೆಗೆ ಮುಡಾದಲ್ಲಿ ಸಭೆ ನಡೆಸಿ, ಯಾವುದೇ ನಿರ್ಣಯ ಕೈಗೊಳ್ಳುವಂತಿಲ್ಲ ಎಂದು ಸ್ಥಳದಲ್ಲೇ ಇದ್ದ ಮುಡಾ ಅಧ್ಯಕ್ಷ ಕೆ.ಮರೀಗೌಡ ಹಾಗೂ ಸದಸ್ಯರಿಗೆ ಸೂಚಿಸಿದ ಸಚಿವರು, ಸಂಸ್ಥೆ ನಿರ್ವಹಣೆಗೆ ಸೀಮಿತವಾದ ಸಭೆ ನಡೆಸಲಷ್ಟೇ ಅವಕಾಶ ಎಂದು ತಿಳಿಸಿದರು.

ಯಾರೇ ಆದರೂ ಬಿಡೋಲ್ಲ: ನಿಜವಾದ ರೈತರಿಗೆ ಅನ್ಯಾಯವಾಗಿದ್ದರೆ ಖಂಡಿತವಾಗಿ ಅವರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಅಪರಾಧಿಗಳ ರಕ್ಷಣೆ ಮಾಡಲೆಂದು ನಾನು ನಗರಾಭಿವೃದ್ಧಿ ಸಚಿವನಾಗಿಲ್ಲ. ಇಲ್ಲವೇ ಅಪರಾಧಿಗಳಿಗೆ ಬೆಂಬಲ ನೀಡಿ ಮುಡಾದಲ್ಲಿ ಹಣ ಮಾಡುವವನಲ್ಲ. ಯಾವುದೇ ಅಕ್ರಮ ನಡೆಯಬಾರದು ಎಂಬ ಉದ್ದೇಶದಿಂದಲೇ 8 ತಿಂಗಳ ಹಿಂದೆಯೇ ಸೂಕ್ತ ಆದೇಶ ಮಾಡಿದ್ದೆ. ನೈಜ ಫಲಾನುಭವಿ ರೈತರಿಗೆ ನಿಯಮಾನುಸಾರ ಪರಿಹಾರ ನೀಡಿದ್ದರೆ ಯಾವುದೇ ಅಭ್ಯಂತರವಿಲ್ಲ. ಏನಾದರೂ ಅಕ್ರಮವಾಗಿ ಮಂಜೂರು ಮಾಡಿದ್ದರೆ ಬಡ್ಡಿ ಸಮೇತ ವಾಪಸ್ ಪಡೆಯಲಾಗುವುದು. ನಾನು ಬಿಜೆಪಿಯವರ ರೀತಿ ಗಾಳಿಯಲ್ಲಿ ಗುಂಡು ಹೊಡೆಯೋದಿಲ್ಲ. ರೈತರಿಗೆ ಅನ್ಯಾಯವಾಗಿದ್ದರೆ ಹಾಗೂ ಮುಡಾಗೆ ವಂಚನೆಯಾಗಿದ್ದರೆ ಅದಕ್ಕೆ ಕಾರಣರಾದವರು ಯಾವುದೇ ಪಕ್ಷದಲ್ಲಿದ್ದರೂ ಯಾವುದೇ ಅಧಿಕಾರಿಯಾದರೂ ಬಿಡುವುದಿಲ್ಲ ಎಂದು ಪುನರ್ ಎಚ್ಚರಿಕೆ ನೀಡಿದರು.

ನಗರಾಭಿವೃದ್ಧಿ ಇಲಾಖೆ

ಫಲಾನುಭವಿಗಳು ಎಂದು ಹೇಳಿಕೊಂಡ ನೂರಾರು ಮಂದಿಗೆ ನಿಗದಿಗಿಂತ ಹೆಚ್ಚಿನ ನಿವೇಶನ ನೀಡಿರುವುದು, ಕಳೆದ ಎರಡು ವರ್ಷಗಳಲ್ಲಿ ಸುಮಾರು 3000 ಕ್ಕೂ ಹೆಚ್ಚಿನ ನಿವೇಶನಗಳನ್ನು ಭೂ ಮೌಲ್ಯ ಹೆಚ್ಚಾಗಿರುವ ಪ್ರತಿಷ್ಠಿತ ಬಡಾವಣೆಗಳಾದ ವಿಜಯನಗರ, ದಟ್ಟಗಳ್ಳಿ, ಜೆ.ಪಿ.ನಗರ ಮತ್ತು ಆರ್.ಟಿ.ನಗರಗಳಲ್ಲಿ ಹಂಚಿಕೆ ಮಾಡಿದ್ದು, ಈ ಮೂಲಕ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ ತನಿಖೆ ಮಾಡುವಂತೆ ಸೂಚಿಸಲಾಗಿದೆ.

ಇದಲ್ಲದೆ ಈ ರೀತಿಯ ಅಕ್ರಮ ನಿವೇಶನ ಹಂಚಿಕೆಗೆ ಬೇಕಾದ ದಾಖಲೆಗಳ ಸಿದ್ಧತೆ ಮತ್ತು ಅಗತ್ಯ ಪರಿಕರಗಳನ್ನು ಪೂರೈಸಲು ಒಂದು ವ್ಯವಸ್ಥಿತ ಜಾಲವಿದ್ದು, ಪ್ರಾಧಿಕಾರದ ಸಿಬ್ಬಂದಿಗಳೊಂದಿಗೆ ಸಂಪರ್ಕ ಸಾಧಿಸಿ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದಾರೆ. ನಿಯಮಾನುಸಾರ ನಿವೇಶನ ಹಂಚಿಕೆಗೆ ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳ ಬದಲಾಗಿ ನಿವೇಶನ ಹಂಚಿಕೆ ನಿಯಮಗಳನ್ನು ಉಲ್ಲಂಘಿಸಿ ಪ್ರಭಾವಿ ಮತ್ತು ಭೂ ದಲ್ಲಾಳಿಗಳಿಗೆ ಹಂಚುತ್ತಿರುವುದಾಗಿ ಸಲ್ಲಿಸಿರುವ ದೂರಿನಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಹೇಳಲಾಗಿದೆ.

ಬಡಾವಣೆ ನಿರ್ಮಾಣಕ್ಕೆ ಜಮೀನು ನೀಡಿದ ರೈತರಿಗೆ ನಿಗದಿತ ಪ್ರಮಾಣದಷ್ಟು ಪರಿಹಾರ ರೂಪದ ನಿವೇಶನಗಳನ್ನು ನೀಡಬೇಕಾಗಿದ್ದು, ಅಂತಹ ಬಡಾವಣೆಗಳಲ್ಲಿ ನಿವೇಶನ ಲಭ್ಯವಾಗದಿದ್ದಲ್ಲಿ ನಂತರ ಅಭಿವೃದ್ಧಿಯಾಗುವ ಬಡಾವಣೆಗಳಲ್ಲಿ ನೀಡಬೇಕಾಗಿದ್ದು, ಈ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿದೆ. ಇಂತಹ ಪ್ರಕರಣಗಳಲ್ಲಿ ಒಂದು ನಿವೇಶನಕ್ಕೆ ಬದಲಾಗಿ ಹಲವಾರು ನಿವೇಶನಗಳನ್ನು, ಅದರಲ್ಲೂ ಚಿಕ್ಕ ನಿವೇಶನಕ್ಕೆ ಬದಲಾಗಿ 50x80 ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಿರುವ ನಿದರ್ಶನಗಳಿವೆ.

ಈ ಎಲ್ಲಾ ಅಂಶಗಳ ಬಗ್ಗೆ ತನಿಖೆ ನಡೆಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ ಲತಾ ಆದೇಶಿಸಿದ್ದಾರೆ.

ಮಂಜೂರು ಮಾಡಿದ್ದಾರೆ

ಪ್ರೋತ್ಸಾಹಕ ನಿವೇಶನ ಮಂಜೂರು ಮಾಡಲು ಇರುವ ಮಾನದಂಡವೇನು ಎಂದು ಮರೀಗೌಡರು ಪ್ರಶ್ನಿಸಿದ್ದಾರೆ.

ಇದಕ್ಕೆ ಪ್ರಾಧಿಕಾರದ ಅನುಮೋದನೆ ಪಡೆಯಲಾಗಿದೆಯೇ, ಕಳೆದ 2020 ರಿಂದ ಇಲ್ಲಿ ತನಕ ಎಷ್ಟು ಪ್ರೋತ್ಸಾಹಕ ನಿವೇಶನ ಮಂಜೂರು ಮಾಡಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಒಂದು ವಾರದೊಳಗೆ ಸಲ್ಲಿಸಬೇಕು ಎಂದು ಆಯುಕ್ತರಿಗೆ ತಾಕೀತು ಮಾಡಿದ್ದಾರೆ.

ಪ್ರಾಧಿಕಾರ ಸಭೆಯ ಅನುಮೋದನೆ ಇಲ್ಲದೆ ಹೆಚ್ಚುವರಿಯಾಗಿ ಪ್ರೋತ್ಸಾಹಕ ನಿವೇಶನ ನೀಡಿದ್ದರೆ ಅಂತಹ ಅಧಿಕಾರಿ ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಮರೀಗೌಡರು ಮಾರ್ಚ್ 16 ರಂದು ಪ್ರಾಧಿಕಾರದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್‌ಗೆ ಬರೆದಿರುವ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಇದೇ ರೀತಿ ಮರೀಗೌಡರು ಜೂನ್ 26 ರಂದು ಮತ್ತೊಂದು ಪತ್ರ ಬರೆದಿದ್ದಾರೆ. ಶೇಕಡ 50:50 ಅನುಪಾತದಲ್ಲಿ ನಿವೇಶನಗಳ ಹಂಚಿಕೆ, ಕ್ರಯಪತ್ರ ನೋಂದಣಿ, ಖಾತಾ ವರ್ಗಾವಣೆ, ನಕ್ಷೆ ಮಂಜೂರಾತಿ ಸೇರಿದಂತೆ ಸಂಬಂಧಿಸಿದ ಇತರೆ ಪ್ರಕ್ರಿಯೆಗಳನ್ನು ತಕ್ಷಣದಿಂದ ಸ್ಥಗಿತಗೊಳಿಸುವಂತೆ ಆದೇಶಿಸಿದ್ದಾರೆ.

ಈ ತನಕ ಶೇಕಡ 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ನಿವೇಶನಗಳ ಪೂರ್ಣ ವಿವರವನ್ನು ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲು ಸೂಚಿಸಿದ್ದಾರೆ. ಈ ಸಂಬಂಧ ಸಭೆಯ ತೀರ್ಮಾನವನ್ನು ಸರ್ಕಾರದ ಅನುಮೋದನೆ ಸಲ್ಲಿಸಿ, ಸರ್ಕಾರದ ನಿರ್ದೇಶನದಂತೆ ಕ್ರಮ ವಹಿಸಬೇಕೆಂದು ಮರೀಗೌಡರು ಸೂಚಿಸಿದ್ದಾರೆ.

ಎರಡು ಪತ್ರ ಬರೆದು ಸೂಚನೆ ನೀಡಿದ್ದರೂ ಶೇಕಡ 50:50 ಅನುಪಾತದ ನಿವೇಶನ ಹಾಗೂ ಪ್ರೋತ್ಸಾಹಕ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಮರೀಗೌಡರು ದೂರಿದ್ದಾರೆ.

ಕೊಡಬೇಕು

ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ವಂಚಿಸಿರುವುದರಿಂದ ನೈತಿಕ ಹೊಣೆ ಹೊತ್ತು ಮೊದಲು ಭೈರತಿ ಸುರೇಶ್ ಸಚಿವ ಸ್ಥಾನ ತೊರೆಯಬೇಕು ಎಂದ ವಿಶ್ವನಾಥ್, ಮುಖ್ಯಮಂತ್ರಿಗಳು ತಮ್ಮ ಮಂತ್ರಿ ಮಂಡಲದಿಂದ ಅವರನ್ನು ವಜಾ ಮಾಡಬೇಕು ಎಂದರು. ಹಗರಣದಲ್ಲಿ ಭಾಗಿಯಾಗಿರುವ ಮುಡಾ ಆಯುಕ್ತ, ಅಧಿಕಾರಿಗಳು, ಜನಪ್ರತಿನಿಧಿಗಳ ವಿರುದ್ಧ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿ, ಅಮಾನತ್ತಿನಟ್ಟು, ಸಿಬಿಐನಂತಹ ಉನ್ನತ ಮಟ್ಟದ ಸಂಸ್ಥೆಯಿಂದ ಹಗರಣದ ತನಿಖೆ ನಡೆಸಬೇಕು. ಬೇರೆ ಕಡೆಗೆ ವರ್ಗಾವಣೆ ಮಾಡುವುದು ಆರೋಪಿತರನ್ನು ರಕ್ಷಿಸಿದಂತೆ. ಹಣ ಗುಳುಂ ಮಾಡಿದವರ ರಕ್ಷಣೆ ಮಾಡಲೆತ್ನಿಸುತ್ತಿರುವ ಸಚಿವ ಭೈರತಿ ಸುರೇಶ್ ಅವರೇ ಪ್ರಮುಖ ಆರೋಪಿಯಾಗುತ್ತಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಪೆನ್‌ಡ್ರೈವ್ ಸಂಸ್ಕೃತಿ ನಮ್ಮದಲ್ಲ; ವಿಶ್ವನಾಥ್‌ಗೆ ಭೈರತಿ ಸುರೇಶ್ ಎದಿರೇಟು



ಮೈಸೂರು: ಪೆನ್‌ಡ್ರೈವ್ ಸಂಸ್ಕೃತಿ ನಮ್ಮದಲ್ಲ, ಡಾ. ಯತೀಂದ್ರ ಮೇಲಿನ ಆರೋಪ ಎಳ್ಳಷ್ಟೂ ನಿಜವಲ್ಲ ಎಂದು ಸಚಿವ ಭೈರತಿ ಸುರೇಶ್, ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರಿಗೆ ತಿರುಗೇಟು ನೀಡಿದರು.

ಮುಡಾದಲ್ಲಿ ನೋಂದಣಿ ಆಗಿರುವ ನಿವೇಶನಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಪೆನ್‌ಡ್ರೈವ್‌ನಲ್ಲಿ ನೀಡುವಂತೆ ನೋಂದಣಾಧಿಕಾರಿಗಳಿಗೆ ವಿಶ್ವನಾಥ್ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಪೆನ್‌ಡ್ರೈವ್ ಸಂಸ್ಕೃತಿ ನಮ್ಮದಲ್ಲ. ಅವರೇ ಅಲ್ಲವಾ ನನ್ನ ಹತ್ತಿರ ಸೈಟಿಗೆ ಬಂದಿದ್ದು ಎಂದು ಪಕ್ಕದಲ್ಲಿದ್ದ ಕೆ. ಮರೀಗೌಡರೊಂದಿಗೆ ಮೆಲ್ಲಗೆ ಮಾತನಾಡಿಕೊಂಡರು. ಈ ಬಗ್ಗೆ ಸ್ಪಷ್ಟನೆ ಕೇಳಿದಾಗ ಹಾಗೇನೂ ಇಲ್ಲ, ಸುಮ್ಮನೆ ತಿರುಚುವುದು ಬೇಡ ಎಂದು ವಿಷಯಾಂತರ ಮಾಡಿದರು. ಸುಮ್ಮನೆ ಯಾರೋ ಬಾಯಿ ಚಪಲಕ್ಕೆ ಮಾತನಾಡಿದರೆ ಅವರ ಮಟ್ಟಕ್ಕಿಳಿದು ನಾನೂ ಮಾತನಾಡುವುದಿಲ್ಲ. ದೇವರಿದ್ದಾನೆ ನೋಡಿಕೊಳ್ಳುತ್ತಾನೆ. ವಿಶ್ವನಾಥ್ ಅವರು ದೇವೇಗೌಡರಿಂದ ಹಿಡಿದು ಎಲ್ಲರನ್ನೂ ಬೈದಿದ್ದಾರೆ. ಡಾ.ಯತೀಂದ್ರ ಅವರು ಕಿಂಚಿತ್ತೂ ಹಸ್ತಕ್ಷೇಪ ಮಾಡಿಲ್ಲ. ಆರೋಪ ಮಾಡುವ ವಿಶ್ವನಾಥ್ ಅವರ ಬಳಿ ಯಾವುದಾದರೂ ಸಾಕ್ಷಿ ಇದೆಯಾ?. ಯಾರೋ ಬ್ರೋಕರ್ ಅಥವಾ ಅಧಿಕಾರಿ ಮಾಡಿದ್ದಕ್ಕೆ ಶಾಸಕರು, ಎಂಎಲ್‌ಸಿಗಳ ಮೇಲೆ ಆರೋಪ ಮಾಡುವುದು ಸರಿಯಲ್ಲ. ದುಷ್ಮನಿ ರಾಜಕೀಯವಾಗಿರಬೇಕೇ ಹೊರತು ವೈಯಕ್ತಿಕವಾಗಿ ಅಲ್ಲ. ಮುಖ್ಯಮಂತ್ರಿಗಳ ಮೇಲಿನ ದ್ವೇಷವನ್ನು ಅವರ ಪುತ್ರನ ಮೇಲೆ ತೀರಿಸಿಕೊಳ್ಳಬಾರದು. ನಾಲ್ಕು ವಾರದ ನಂತರ ಮೇಲೆ ಎಲ್ಲವೂ ಗೊತ್ತಾಗಲಿದೆ ಎಂದರು.

ಸಿಎಂ ಸ್ಥಾನ ಖಾಲಿ ಇಲ್ಲ...: ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎನ್ನುವ ಮೂಲಕ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದರು. ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ ಎಂದು ಶ್ರೀ ಚಂದ್ರಶೇಖರ ಸ್ವಾಮೀಜಿ ಹೇಳಿಕೆ ನೀಡಿದ ಬಳಿಕ ಈ ವಿಚಾರವಾಗಿ ವಿಭಿನ್ನ ಅಭಿಪ್ರಾಯ ವ್ಯಕ್ತವಾಗುತ್ತಿವೆ. ಈ ಬಗ್ಗೆ ಪ್ರತಿಕ್ರಿಯಿಸಿದ ಭೈರತಿ ಸುರೇಶ್, ಸಿಎಂ ಸ್ಥಾನ ಖಾಲಿ ಇಲ್ಲ. ಈಗ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯನವರಿದ್ದಾರೆ, ಮುಂದೆಯೂ ಅವರೇ ಇರುತ್ತಾರೆ. ಡಿಸಿಎಂ ಸ್ಥಾನವೂ ಕೂಡ ಖಾಲಿ ಇಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಮಾಹಿತಿ ಇಲ್ಲ. ಇದೆಲ್ಲವನ್ನೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ.

ಸರ್ಕಾರದ ವಿರುದ್ಧ ಆರೋಪ ವಿಶ್ವನಾಥರಿಗೆ ಶೋಭೆ ತರಲ್ಲ



ಮೈಸೂರು, ಜು.1– ಮುಡಾದಲ್ಲಿ ಅಕ್ರಮ ನಡೆದಿದೆ ಎಂದು ಸರ್ಕಾರದ ವಿರುದ್ಧವೂ ಆರೋಪಿಸುವುದು ವಿಶ್ವನಾಥ್ ಅವರ ವಯಸ್ಸು ಹಾಗೂ ಅನುಭವಕ್ಕೆ ಶೋಭೆ ತರುವಂತಹದ್ದಲ್ಲ ಎಂದು ಶಾಸಕ ಕೆ. ಹರೀಶ್‌ಗೌಡ ತಿರುಗೇಟು ನೀಡಿದರು.

ಮುಡಾ ಸಭಾಂಗಣದಲ್ಲಿ ಸಚಿವ ಭೈರತಿ ಸುರೇಶ್ ಸುದ್ದಿಗೋಷ್ಠಿ ವೇಳೆ ಮಾತನಾಡಿದ ಹರೀಶ್‌ಗೌಡರು ಯಾರು ಸರ್ಕಾರದ ಮೇಲೆ ಆರೋಪ ಮಾಡಿದ್ದಾರೋ ಅದು ಅವರ ವಯಸ್ಸು ಹಾಗೂ ಅನುಭವಕ್ಕೆ ಶೋಭೆ ತರುವಂತದ್ದಲ್ಲ. ಅವರೂ ಕೂಡ ಮುಡಾ ಸದಸ್ಯರು. 2020ರಿಂದ ಈವರೆಗೆ ನೂರಾರು ಎಕರೆಯಷ್ಟು ಭೂಮಿಯನ್ನು ಶೇ.50:50ರ ಅನುಪಾತದಲ್ಲಿ ರೈತರಿಗೆ ಪರಿಹಾರವಾಗಿ ನೀಡಿದ್ದಾರೆ. ಅದನ್ನು ಯಾರೂ ಪ್ರಶ್ನೆ ಮಾಡುತ್ತಿಲ್ಲ. ಆದರೆ ಈಗ ಯಾಕೆ ಸುಖಾಸುಮ್ಮನೆ ಆರೋಪ ಮಾಡುತ್ತಿದ್ದಾರೋ ಗೊತ್ತಿಲ್ಲ ಎಂದರು. ಹಿಂದೆ ಭೂಮಿಗೆ ಪರ್ಯಾಯ ಭೂಮಿಯನ್ನು ಪರಿಹಾರವಾಗಿ ನೀಡುವ ನಿಯಮವಿತ್ತು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಿಯಮ ಜಾರಿಯಾದ ನಂತರ ಭೂಸ್ವಾಧೀನಪಡಿಸಿಕೊಂಡ ನಂತರ ಅದರ ಮಾಲೀಕರಿಗೆ ನಗದು ಅಥವಾ ನಿವೇಶನದ ರೂಪದಲ್ಲಿ ಪರಿಹಾರ ನೀಡುವ ವ್ಯವಸ್ಥೆ ಜಾರಿಯಾಯಿತು. ಆಗ ಬಹುತೇಕ ಭೂಮಾಲೀಕರು ನಗದು ರೂಪದಲ್ಲೇ ಪರಿಹಾರ ಪಡೆದರು. ಆದರೆ ವ್ಯಾಜ್ಯ ಇನ್ನಿತರ ಕಾರಣಗಳಿಂದ ಹಲವು ವರ್ಷಗಳಿಂದ ಪರಿಹಾರ ಪಡೆಯದವರಿಗೆ ಶೇ.50:50ರ ಅನುಪಾತದಲ್ಲಿ ನಿವೇಶನ ನೀಡುವ ನಿಯಮವನ್ನು 2020ರಲ್ಲಿ ಜಾರಿಗೆ ತಂದು ಈವರೆಗೆ ಹಲವು ನಿವೇಶನ ನೀಡಿದ್ದಾರೆ. ಇದರಲ್ಲಿ ನ್ಯಾಯಾಲಯದ ಆದೇಶ ತಂದು ನಿವೇಶನ ಪಡೆದಿರುವ ಪ್ರಕರಣಗಳೂ ಇವೆ ಎಂದು ತಿಳಿಸಿದರು.

ಆದರೆ ಈಗ ಮನಬಂದಂತೆ ಸಿಎಂ, ಸಚಿವರು, ಶಾಸಕರು ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗುತ್ತಿದೆ.

2020ರ ಜನವರಿಯಿಂದ ನೋಂದಣಿಯಾದ ಮುಡಾ ನಿವೇಶನಗಳ ಮಾಹಿತಿ ನೀಡಿ



ಮೈಸೂರು, ಜು. 1– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ಸುದ್ದಿಗೋಷ್ಠಿಯಲ್ಲಿ ಗಂಭೀರ ಆರೋಪ ಮಾಡಿದ್ದ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಅವರು ಮುಡಾದಲ್ಲಿ ನಡೆದಿರುವ ಹಗರಣಗಳ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಮುಂದಾಗಿದ್ದಾರೆ.

ಅವರು ಮೊದಲ ಹಂತದಲ್ಲಿ 2020ರ ಜನವರಿಯಿಂದ ಈವರೆವಿಗೂ ಮುಡಾದಲ್ಲಿರುವ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿರುವ ಮುಡಾ ನಿವೇಶನಗಳ ಸಂಪೂರ್ಣ ವಿವರವನ್ನು ಪೆನ್‌ಡ್ರೈವ್ ಅಥವಾ ಪತ್ರದ ಮೂಲಕ ತಮ್ಮ ಕಚೇರಿಗೆ ಜರೂರಾಗಿ ತಲುಪಿಸಬೇಕು ಎಂದು ಕೋರಿದ್ದಾರೆ.

ಮುಡಾದಿಂದ ಮಂಜೂರಾಗುವ ಎಲ್ಲಾ ನಿವೇಶನಗಳು ಮುಡಾದಲ್ಲಿರುವ ನೋಂದಣಾಧಿಕಾರಿಗಳ ಕಚೇರಿಯಲ್ಲೇ ನೋಂದಣಿಯಾಗುತ್ತವೆ. ಟೈಟಲ್ ಡೀಡ್‌ಗಳೂ ಕೂಡ ಇದೇ ಕಚೇರಿಯಲ್ಲೇ ನೋಂದಣಿ ಮಾಡಲ್ಪಡುತ್ತವೆ. ವಿಶ್ವನಾಥ್ ಅವರ ಪ್ರಕಾರ 5000 ನಿವೇಶನಗಳನ್ನು ಮುಡಾದಿಂದ ಅಕ್ರಮವಾಗಿ ನೀಡಲಾಗಿದೆ. ಹೀಗೆ ಮುಡಾದಿಂದ ನೀಡಲಾದ ಎಲ್ಲಾ ನಿವೇಶನಗಳೂ ಇದೇ ಕಚೇರಿಯಲ್ಲೇ ನೋಂದಣಿಯಾಗಿರುವ ಕಾರಣದಿಂದ ಅವರು 2020ರ ಜನವರಿಯಿಂದಲೇ ಸಂಪೂರ್ಣ ವಿವರಗಳನ್ನು ಕೇಳಿದ್ದಾರೆ ಎಂದು ಹೇಳಲಾಗಿದೆ.

ಕೈಯ್ಯಲ್ಲಿದ್ದ ಫೈಲ್ ಆಪ್ತ ಸಹಾಯಕನಿಗೆ ಕೊಟ್ಟ ಮಂಜೇಗೌಡ

ಮೈಸೂರು, ಜು.1(ಬಿಎಲ್ ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಆಗಮಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾಧ್ಯಮದವರನ್ನು ನೋಡಿದ ಕೂಡಲೇ ಕೈಯ್ಯಲ್ಲಿದ್ದ ಫೈಲ್ ಅನ್ನು ಆಪ್ತ ಸಹಾಯಕನಿಗೆ ನೀಡಿದ ಪ್ರಸಂಗ ಇಂದು ನಡೆಯಿತು. ಮುಡಾದ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ನಿನ್ನೆ ಆರೋಪ ಮಾಡಿದ್ದ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ ಅಟೆಂಡರ್ ಅಂತೆ ಫೈಲ್ ಹಿಡಿದು ಮುಡಾದಲ್ಲಿ ತಿರುಗುತ್ತಾರೆ. ಹಲ್ಲುಜ್ಜುವುದು, ಟಿಫನ್ ಮಾಡುವುದು, ಊಟ ಮಾಡುವುದು, ಮಲಗುವುದು ಮುಡಾದಲ್ಲೇ ಎಂದು ಗೇಲಿ ಮಾಡಿದ್ದರು. ಇಂದು ಮುಡಾಗೆ ಬಂದ ಮಂಜೇಗೌಡರು ಕಾರಿನಿಂದ ಇಳಿಯುತ್ತಿದ್ದಂತೆ ಸೀಟ್ ಮೇಲಿದ್ದ ಫೈಲ್ ಅನ್ನು ಕೈಗೆತ್ತಿಕೊಂಡರು. ಆದರೆ ಮಾಧ್ಯಮದವರನ್ನು ನೋಡುತ್ತಿದ್ದಂತೆ ಫೈಲ್ ಅನ್ನು ಆಪ್ತ ಸಹಾಯಕನ ಕೈಗೆ ನೀಡಿದರು.

ದೇಶ - ವಿದೇಶ

ಧುಮ್ಮಿಕ್ಕುತ್ತಿದ್ದ ಜಲಪಾತದ ನಡುವೆ ಸಿಲುಕಿ ಒಂದೇ ಕುಟುಂಬದ ಐವರು ಜಲಸಮಾಧಿ

ಮುಂಬೈ: ಮುಂಬೈ ಸಮೀಪದ ಲೋನಾವಾಲಾದಲ್ಲಿ 7 ಜನರ ಕುಟುಂಬವೊಂದು ಮೋಜು ಮಾಡಲು ಮಕ್ಕಳನ್ನು ಜಲಪಾತಕ್ಕೆ ಕರೆದೊಯ್ದಿತ್ತು. ಆದರೆ



ಇದ್ದಕ್ಕಿದ್ದಂತೆ ಇಡೀ ಕುಟುಂಬವು ಬಲವಾದ ಪ್ರವಾಹಕ್ಕೆ ಕೊಚ್ಚಿ ಹೋಗಿದೆ. ಜಲಪಾತದ ಮಧ್ಯದಲ್ಲಿ ಆಸರೆಗಾಗಿ ಒಬ್ಬರನ್ನೊಬ್ಬರು ಹಿಡಿದು ಕೊಂಡಿದ್ದ ಪುರುಷ, ಮಹಿಳೆ ಮತ್ತು ಮಗು ಏಕಾಏಕಿ ನೀರಿನ ರಭಸಕ್ಕೆ ಕೊಚ್ಚಿ ಹೋಗಿರುವುದು ವಿಡಿಯೋದಲ್ಲಿ ಕಂಡುಬಂದಿದೆ. ಅವರಲ್ಲಿ ಇಬ್ಬರು ಮಾತ್ರ ಈಜಿ ಬಂದು ದಡ ಸೇರುವಲ್ಲಿ ಯಶಸ್ವಿಯಾಗಿದ್ದು, ಐವರು ಜಲಸಮಾಧಿಯಾಗಿದ್ದಾರೆ. ಏಳು ಜನರಿರುವ ಈ ಕುಟುಂಬ ಮುಂಬೈನಿಂದ ಕೇವಲ 80 ಕಿಮೀ ದೂರದಲ್ಲಿರುವ ಗಿರಿಧಾಮಕ್ಕೆ ವಿಹಾರ ಹೋಗಿತ್ತು. ಇದುವರೆಗೆ ಮೂವರ ಮೃತದೇಹಗಳು ಪತ್ತೆಯಾಗಿದೆ. ಮಳೆಗಾಲದಲ್ಲಿ ನೂರಾರು ಪ್ರವಾಸಿಗರು ಈ ಬೆಟ್ಟದ ಪಟ್ಟಣಕ್ಕೆ ಭೇಟಿ ನೀಡುತ್ತಿದ್ದಂತೆ, ಈ ಕುಟುಂಬವೂ ಭಾನುವಾರ ಮಧ್ಯಾಹ್ನ ಭೂಶಿ ಅಣೆಕಟ್ಟಿನ ಹಿನ್ನೀರಿನ ಬಳಿಯ ಜಲಪಾತಕ್ಕೆ ವಿಹಾರಕ್ಕೆ ತೆರಳಿತ್ತು. ಬೆಳಗ್ಗೆಯಿಂದ ಸುರಿಯುತ್ತಿರುವ ಮಳೆಯಿಂದಾಗಿ ಅಣೆಕಟ್ಟೆ ತುಂಬಿ ಹರಿಯುತ್ತಿದ್ದು, ಏಕಾಏಕಿ ಜಲಪಾತದಲ್ಲಿ ನೀರಿನ ಹರಿವು ಹೆಚ್ಚಿದೆ. ಕುಟುಂಬದ ಕೊನೆಯ ಕ್ಷಣಗಳ ಭಯಾನಕ ದೃಶ್ಯಗಳು ಹೊರಬಿದ್ದಿದ್ದು, ಇದರಲ್ಲಿ ಬಲವಾಗಿ ನೀರು ಹರಿಯುತ್ತಿರುವ ಜಲಪಾತದ ಮಧ್ಯದಲ್ಲಿರುವ ಬಂಡೆಯ ಮೇಲೆ ಒಬ್ಬರನ್ನೊಬ್ಬರು ಬಿಗಿಯಾಗಿ ಹಿಡಿದಿಟ್ಟುಕೊಂಡು ಹೇಗಾದರೂ ಮತ್ತೆ ನೆಲವನ್ನು ತಲುಪಬೇಕೆಂದು ಆಶಿಸುತ್ತಿರುವುದನ್ನು ನೋಡಬಹುದಾಗಿದೆ. ಆದರೆ ಎಲ್ಲಾ ಏಕಾಏಕಿ ಕೊಚ್ಚಿಹೋದರು.

400ಕ್ಕೂ ಹೆಚ್ಚು ವಿಮಾನಗಳ ಸಂಚಾರ ರದ್ದು!

ಕೆನಡಾ: ಏಕಾಏಕಿ 400 ಕ್ಕೂ ಹೆಚ್ಚು ವಿಮಾನಗಳು ತನ್ನ ಪ್ರಯಾಣವನ್ನು ರದ್ದುಗೊಳಿಸಿರುವ ಘಟನೆ ಕೆನಡಾದಲ್ಲಿ ನಡೆದಿದೆ. ಇದರಿಂದ ಸುಮಾರು 50000 ಕ್ಕೂ ಹೆಚ್ಚು ಜನರು ಸಮಸ್ಯೆ ಎದುರಿಸುವಂತಾಗಿದೆ.

ಇದಕ್ಕೆ ಕಾರ್ಮಿಕರು ನಡೆಸುತ್ತಿರುವ ಮುಷ್ಕರವೇ ಕಾರಣ ಎನ್ನಲಾಗಿದೆ. ನಿರ್ವಹಣಾ ಕಾರ್ಮಿಕರ ಸಂಘ ಮುಷ್ಕರ ನಡೆಸುತ್ತಿರುವುದರಿಂದ ಈ ಸಮಸ್ಯೆ ಉಂಟಾಗಿದೆ ಎಂದು ವೆಸ್ಟ್ ಜೆಟ್ ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ. ವೆಸ್ಟ್‌ಜೆಟ್ ಕೆನಡಾದ ಎರಡನೇ ಅತಿದೊಡ್ಡ ವಿಮಾನಯಾನ ಸಂಸ್ಥೆಗಳಲ್ಲಿ ಒಂದಾಗಿದ್ದು, ಮುಷ್ಕರದಿಂದಾಗಿ 407 ವಿಮಾನಗಳನ್ನು ರದ್ದುಗೊಳಿಸಲಾಗಿದೆ ಎಂದು ಕಂಪನಿ ತಿಳಿಸಿದೆ. ಇದು ದೇಶದಲ್ಲಿ ಅಂತರರಾಷ್ಟ್ರೀಯ ಮತ್ತು ದೇಶೀಯ ವಿಮಾನಗಳಲ್ಲಿ 49,000ಕ್ಕೂ ಹೆಚ್ಚು ಜನರ ಪ್ರಯಾಣದ ಮೇಲೆ ಪರಿಣಾಮ ಬೀರಿದೆ. ವೆಸ್ಟ್‌ಜೆಟ್ ಅಧ್ಯಕ್ಷ ಡೆಡೆರಿಕ್ ಪೆನ್ ಪ್ರತಿಕ್ರಿಯೆ ನೀಡಿದ್ದು, ಕಂಪನಿಯು ಪ್ರತಿಭಟನೆಗೆ ಪ್ರತಿಕ್ರಿಯಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ ಮತ್ತು ಸ್ಥಿರವಾದ ನೆಟ್‌ವರ್ಕ್ ರಚಿಸಲು ಪೂರಕವಾದ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಪಿಒಕೆ: ಗಲ್ಲು ಶಿಕ್ಷೆಗೆ ಗುರಿಯಾಗಿದ್ದ 6 ಮಂದಿ ಸೇರಿ 18 ಕೈದಿಗಳು ಜೈಲಿನಿಂದ ಪರಾರಿ

ಇಸ್ಲಾಮಾಬಾದ್: ಮರಣದಂಡನೆಗೆ ಗುರಿಯಾಗಿದ್ದ 6 ಮಂದಿ ಸೇರಿ ಕನಿಷ್ಠ 18 ಘಾತಕ ಅಪರಾಧಿಗಳು ಕಾವಲುಗಾರನ ಮೇಲೆ ಹಲ್ಲೆ ನಡೆಸಿ ಜೈಲಿನಿಂದ ಪರಾರಿಯಾದ ಘಟನೆ ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದಲ್ಲಿ ನಡೆದಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ರಾವಲಕೋಟ್ ಜೈಲಿನಲ್ಲಿ ಅಪರಾಧಿಯೊಬ್ಬ ಜೈಲು ಕಾವಲುಗಾರನಿಗೆ ಬಂದೂಕು ತೋರಿಸಿ ಜೈಲಿನ ಕೀ ಪಡೆದುಕೊಂಡು ಪರಾರಿಯಾಗಿದ್ದಾನೆ. ಶುಕ್ರವಾರ ಈ ಘಟನೆ ನಡೆದಿದೆ. 18 ಕೈದಿಗಳ ಪೈಕಿ ಆರು ಮಂದಿ ಮರಣದಂಡನೆಗೆ ಗುರಿಯಾಗಿದ್ದರು. ಮೂವರು ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು. ತಪ್ಪಿಸಿಕೊಳ್ಳುತ್ತಿದ್ದ ವೇಳೆ ಪೊಲೀಸರು ಹಾರಿಸಿದ ಗುಂಡಿಗೆ ಓರ್ವ ಕೈದಿ ಹತನಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪರಾರಿಯಾದ ಕೈದಿಗಳಿಗಾಗಿ ಈ ಪ್ರದೇಶದಲ್ಲಿ ಪೊಲೀಸರು ಭಾರಿ ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ. ಘಟನೆಯ ಬಗ್ಗೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಜೈಲಿನ ಮುಖ್ಯಾಧಿಕಾರಿ ಮತ್ತು ಇತರ ಕೆಲವು ಅಧಿಕಾರಿಗಳನ್ನು ವಜಾಗೊಳಿಸಲಾಗಿದೆ. ಅಲ್ಲದೇ ಜೈಲಿನ ಡೆಪ್ಯುಟಿ ಸೂಪರಿಂಟೆಂಡೆಂಟ್ ಸೇರಿದಂತೆ 7 ಮಂದಿ ಅಧಿಕಾರಿಗಳನ್ನು ವಿಚಾರಣೆಗಾಗಿ ಬಂಧಿಸಲಾಗಿದೆ ಎಂದು ವರದಿಯಾಗಿದೆ. ಭದ್ರತಾ ಲೋಪ ಹಿನ್ನೆಲೆಯಲ್ಲಿ ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ)ಯಾದ್ಯಂತ ಎಲ್ಲಾ ಜೈಲುಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.


T20 ವಿಶ್ವಕಪ್ ICC ತಂಡದಲ್ಲಿ ಭಾರತದ 6 ಆಟಗಾರರು: ವಿರಾಟ್ ಕೊಹ್ಲಿಗಿಲ್ಲ ಸ್ಥಾನ

ದುಬೈ: ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸೋಮವಾರ ಪ್ರಕಟಿಸಿರುವ ಟಿ20 ವಿಶ್ವಕಪ್ ಐಸಿಸಿ ತಂಡದಲ್ಲಿ ಭಾರತದ ಆರು ಆಟಗಾರರು ಸ್ಥಾನ ಪಡೆದಿದ್ದಾರೆ. ಆದರೆ, ವಿರಾಟ್ ಕೊಹ್ಲಿ ಅವರನ್ನು ಕೈಬಿಡಲಾಗಿದೆ. ಭಾರತ ತಂಡದ ನಾಯಕರಾಗಿದ್ದ ರೋಹಿತ್ ಶರ್ಮಾ, ವೇಗಿ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ಅರ್ಷದೀಪ್ ಸಿಂಗ್ ಹಾಗೂ ಸ್ಪಿನ್, ಆಲ್‌ರೌಂಡರ್ ಅಕ್ಷರ್ ಪಟೇಲ್ ಸ್ಥಾನ ಗಳಿಸಿದ್ದಾರೆ. ಅಫ್ಘಾನಿಸ್ತಾನ ತಂಡದ ಮೂವರು, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಹಾಗೂ ದಕ್ಷಿಣ ಆಫ್ರಿಕಾ ತಂಡದ ತಲಾ ಒಬ್ಬರಿಗೆ ಸ್ಥಾನ ಲಭಿಸಿದೆ.

ತಂಡ: ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್ (ಭಾರತ), ರೆಹಮಾನುಲ್ಲಾ ಗುರ್ಬಾಜ್, ರಶೀದ್ ಖಾನ್, ಫಜಲ್‌ಹಕ್ ಫರೂಕಿ (ಅಫ್ಘಾನಿಸ್ತಾನ), ಮಾರ್ಕಸ್ ಸ್ಟೊಯಿನಿಸ್ (ಆಸ್ಟ್ರೇಲಿಯಾ), ನಿಕೊಲಸ್ ಪೂರನ್ (ವೆಸ್ಟ್ ಇಂಡೀಸ್), ಎನ್ರಿಚ್ ನಾಕಿಯಾ

ಐದು ಕೆಜಿ ಚಿನ್ನ ತೊಟ್ಟು ಗೋಲ್ಡನ್ ಬೈಕ್‌ನಲ್ಲಿ ಓಡಾಡಿದ ಗೋಲ್ಡ್‌ಮ್ಯಾನ್

ಪಾಟ್ನಾ: ತಾವು ತೊಟ್ಟುಕೊಳ್ಳುವ ಮಣಭಾರದ ಬಂಗಾರದಿಂದಲೇ



ಪ್ರಸಿದ್ಧರಾಗಿರುವ ಬಿಹಾರದ ಪ್ರೇಮ್ ಸಿಂಗ್ ಈಗ ತಮ್ಮ ಬೈಕಿಗೂ ಚಿನ್ನ ತೊಡಿಸಿ ಸುದ್ದಿಯಾಗಿದ್ದಾರೆ. ಇವರ ಬೈಕಿನ ಕೆಲ ಭಾಗಗಳು ಚಿನ್ನದ್ದಾಗಿವೆ. ಇದನ್ನು ಬೆಂಗಳೂರಿನಲ್ಲಿ ಮಾಡಿಸಲಾಗಿದ್ದು, ಸುಮಾರು ಏಳರಿಂದ ಎಂಟು ತಿಂಗಳ ಅವಧಿಯಲ್ಲಿ ಈ ಬಂಗಾರದ ಬೈಕ್ ತಯಾರಾಗಿದೆ. ಇದರ ಬೆಲೆ ರೂ. 11ರಿಂದ 12 ಲಕ್ಷ ಎನ್ನಲಾಗಿದೆ. ಸ್ವರ್ಣದ ಮೇಲಿನ ಮೋಹದಿಂದಾಗಿ ಪ್ರೇಮ್ ಸಿಂಗ್ ಬಿಹಾರದ 'ಬಂಗಾರದ ಮನುಷ್ಯ' ಎಂದೇ ಖ್ಯಾತರು. ಇವರು ತೊಡುವ ಸರ, ಬಳೆ, ಉಂಗುರಗಳು ಒಟ್ಟು ಐದು ಕೆಜಿ ತೂಗುತ್ತವೆ. ನನ್ನನ್ನು ಜನ ಬಂಗಾರದ ಮನುಷ್ಯ ಎಂದು ಕರೆಯುತ್ತಾರೆ. ಬಿಹಾರದಲ್ಲಿ ಪ್ರಸ್ತುತ ಇರುವ ನಿತೀಶ್ ಕುಮಾರ್ ಸರ್ಕಾರ ಉತ್ತಮ ಆಡಳಿತ ನಡೆಸುತ್ತಿದೆ. ಆದ ಕಾರಣ ನನಗೆ ಯಾವುದೇ ಭಯವಿಲ್ಲ. ನನ್ನ ಬೈಕಿನಲ್ಲಿ 150ರಿಂದ 200 ಗ್ರಾಂ ಚಿನ್ನವಿದೆ ಎಂದಿರುವ ಪ್ರೇಮ್ ಸಿಂಗ್ ಇದು ಬಿಹಾರ ಸರ್ಕಾರ ಹಾಗೂ ಬಿಹಾರ ಪೊಲೀಸರ ಪಾಲಿಗೆ ಗೌರವದ ಸಂಗತಿ ಎಂದಿದ್ದಾರೆ.

ಮದುವೆಯಾಗಿ ವರ್ಷವಾದರೂ ಫಸ್ಟ್‌ನೈಟ್‌ಗೆ ಒಪ್ಪದ ಪತಿರಾಯ; ಠಾಣೆ ಮೆಟ್ಟಿಲೇರಿದ ಪತ್ನಿ

ಗೋರಖ್‌ಪುರ: ಉತ್ತರಪ್ರದೇಶದ ಗೋರಖ್‌ಪುರ ಜಿಲ್ಲೆಯ ಕ್ಯಾಂಪಿರಗಂಜ್ ಕ್ಷೇತ್ರದ ಯುವತಿಯ ಮದುವೆ ವರ್ಷದ ಹಿಂದೆ ಖಾಸಗಿ ಶಾಲೆಯ ಶಿಕ್ಷಕನ ಜೊತೆ ಅದ್ದೂರಿಯಾಗಿ ನಡೆದಿತ್ತು. ಆದರೆ ಪತ್ನಿ ಜೊತೆ ಸಂಬಂಧ ಬೆಳೆಸಲು ಶಿಕ್ಷಕ ನಿರಾಕರಿಸುತ್ತಿದ್ದ. ಪತಿಯ ಈ ವರ್ತನೆಯಿಂದ ಬೇಸತ್ತ ಮಹಿಳೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾಳೆ. ಕೆಲ ದಿನಗಳ ಹಿಂದೆ ಪತ್ನಿ ದೈಹಿಕ ಸಂಪರ್ಕ ಹೊಂದಲು ಗಂಡನಿಗೆ ಒತ್ತಾಯಿಸಿದ್ದಾರೆ. ಇದರಿಂದ ಕೋಪಗೊಂಡ ಗಂಡ ರಾತ್ರಿ ಸುಮಾರು 11 ಗಂಟೆಗೆ ಪತ್ನಿಯನ್ನು ತವರು ಮನೆಗೆ ಕಳುಹಿಸಿದ್ದಾನೆ. ಕುಟುಂಬಸ್ಥರ ಸಲಹೆಯ ಮೇರೆಗೆ ಗುಲರಿಹಾ ಪೊಲೀಸ್ ಠಾಣೆಯಲ್ಲಿ ಮಹಿಳೆ ದೂರು ದಾಖಲಿಸಿದ್ದಾರೆ. ಪೊಲೀಸರು ಇಬ್ಬರನ್ನು ಮುಖಾಮುಖಿಯಾಗಿ ಕೂರಿಸಿಕೊಂಡು ವಿಚಾರಣೆ ವೇಳೆ ಪತಿ ತಲೆ ಎತ್ತಿ ಸಹ ಮಾತನಾಡಿಲ್ಲ. ಏನಾದರೂ ಚಿಕಿತ್ಸೆ ಅಗತ್ಯವಿದ್ದರೆ ಕೊಡಿಸೋಣ ಎಂದು ಮಾತನಾಡಿದಾಗ ಆತ ನಾನು ಸಲಿಂಗಿ ಎಂದು ಹೇಳಿಕೊಂಡಿದ್ದಾನೆ. ಇಷ್ಟಕ್ಕೆ ಸುಮ್ಮನಾಗದ ಗಂಡ, ಪತ್ನಿಯ ಚಾರಿತ್ರ್ಯದ ಬಗ್ಗೆ ಗಂಭೀರ ಆರೋಪಗಳನ್ನು ಮಾಡಿದ್ದಾನೆ. ಪತಿಯ ಆರೋಪಗಳನ್ನು ತಳ್ಳಿ ಹಾಕಿರುವ ಮಹಿಳೆ, ನಾನು ಅವರೊಂದಿಗೆ ದಾಂಪತ್ಯ ಸುಖ ಕಾಣಲು ಇಷ್ಟಪಡುತ್ತೇನೆ ಎಂದು ಹೇಳಿಕೊಂಡಿದ್ದಾರೆ.

ಹೊಸ ಅಪರಾಧ ಕಾಯ್ದೆ ಜಾರಿಗೆ; ನಾಗರಿಕ ಸುರಕ್ಷೆ, ನ್ಯಾಯ ಸಂಹಿತೆ, ಸಾಕ್ಷ್ಯ ಅಧಿನಿಯಮ ಅನುಷ್ಠಾನ

ನವದೆಹಲಿ: ಬ್ರಿಟಿಷರ ಪಳೆಯುಳಿಕೆಗಳಲ್ಲಿ ಒಂದಾದ ಇಂಡಿಯನ್ ಪೀನಲ್ ಕೋಡ್ (ಐಪಿಸಿ), ಕ್ರಿಮಿನಲ್ ಪೀನಲ್ ಕೋಡ್ (ಸಿಆರ್‌ಪಿಸಿ) ಸೋಮವಾರದಿಂದ ಇತಿಹಾಸದ ಪುಟ ಸೇರಲಿವೆ. ಬದಲಿಗೆ, ಕೇಂದ್ರದ ಎನ್‌ಡಿಎ ಸರ್ಕಾರ ರೂಪಿಸಿರುವ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, ಭಾರತೀಯ ಸಾಕ್ಷ್ಯ ಅಧಿನಿಯಮಗಳು ಜಾರಿಗೆ ಬರಲಿವೆ.

ಸರ್ಕಾರ ಸಂಸತ್ತಿನಲ್ಲಿ ಈ ಸಂಬಂಧದ ವಿಧೇಯಕಗಳಿಗೆ 2023ರ ಡಿಸೆಂಬರ್ 21ರಂದು ಅನುಮೋದನೆ ಪಡೆದಿದೆ. ಡಿಸೆಂಬರ್ 25ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ.





ಪಶ್ಚಿಮ ಬಂಗಾಳವೂ ಸೇರಿದಂತೆ ಕೆಲವು ರಾಜ್ಯಗಳು ಹೊಸ ಅಪರಾಧ ಕಾನೂನು ಜಾರಿ ಮುಂದೂಡುವಂತೆ ಆಗ್ರಹಿಸಿದ್ದರೂ ಕೇಂದ್ರ ಸರ್ಕಾರ ಒಪ್ಪಿಲ್ಲ. ಸೋಮವಾರದಿಂದ ದಾಖಲಾಗುವ ಪ್ರಕರಣಗಳಿಗೆ ಹೊಸ ಸೆಕ್ಷನ್‌ಗಳನ್ನು ಬರೆಯಲು ಪೊಲೀಸರು ಸಿದ್ಧರಾಗಿದ್ದಾರೆ. ಚಾರ್ಜ್‌ಶೀಟ್ ಸಲ್ಲಿಕೆ ಅವಧಿ 90 ದಿನಗಳಿಂದ 60 ದಿನಕ್ಕೆ ಇಳಿಕೆ, ತೀರ್ಪು ನೀಡುವ ಅವಧಿ 60 ದಿನಗಳಿಂದ 45 ದಿನಗಳಿಗೆ ಇಳಿಕೆ ಮಾಡಲಾಗಿದ್ದು, ಇದರಿಂದ ತ್ವರಿತ ನ್ಯಾಯನೀಡಿಕೆ ಸಾಧ್ಯವಾಗಲಿದೆ. ಆರೋಪಿ ಬಿಡುಗಡೆ, ಪೋಕ್ಸೋ ಸಂಬಂಧಿತ ವರದಿ ಸಲ್ಲಿಕೆ, ಎಲೆಕ್ಟ್ರಾನಿಕ್ ಉಪಕರಣ ಮೂಲಕ ಸಮನ್ಸ್ ತಲುಪಿಸುವುದು ಸೇರಿದಂತೆ ಹಲವು ಮಹತ್ವದ ಬದಲಾವಣೆ ಮಾಡಲಾಗಿದೆ.

46ಕ್ಕೂ ಅಧಿಕ ಸೆಕ್ಷನ್‌ಗಳನ್ನು ಬದಲಿಸಲಾಗಿದೆ. ಇನ್ನು ಮುಂದೆ ಆತ್ಮಹತ್ಯೆ ವರದಿಯನ್ನು 24 ಗಂಟೆಗಳೊಳಗೆ ಮ್ಯಾಜಿಸ್ಟ್ರೇಟ್‌ಗೆ ಸಲ್ಲಿಸಬೇಕು. ವರದಿ, ಸಮನ್ಸ್‌ಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಲ್ಲಿಸಬಹುದು. 60 ವರ್ಷ ಮೇಲ್ಪಟ್ಟ, 15 ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಪೊಲೀಸರು ಠಾಣೆಗೆ ಕರೆಸುವಂತಿಲ್ಲ. ಆರೋಪಿ ತಾನು ಇದ್ದಲ್ಲಿಂದಲೇ ಆಡಿಯೋ/ವಿಡಿಯೋ ಮೂಲಕ ವಿಚಾರಣೆಗೆ ಹಾಜರಾಗಬಹುದು.

ತಪ್ಪು ಯಾರೇ ಮಾಡಲಿ ಕಾನೂನು ಕ್ರಮ ಖಚಿತ

● ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ ● ಹೊಸ ಕಾನೂನುಗಳ ಬಗ್ಗೆ ಸದ್ಯಕ್ಕೆ ಏನೂ ಹೇಳಲಾಗದು; ಪರಿಷ್ಕರಣೆಗೆ ಅವಕಾಶವೂ ಇದೆ

ಬೆಂಗಳೂರು, ಜು. 1(ಕೆಎಂಶಿ)– ತಪ್ಪು ಮಾಡಿದವರ ರಕ್ಷಣೆಗೆ ಸರ್ಕಾರ ನಿಂತಿಲ್ಲ. ತಪ್ಪು ಮಾಡಿದವರು ಯಾರೇ ಆಗಿದ್ದರೂ ಕಾನೂನು ಪ್ರಕಾರ ಕ್ರಮ ಜರುಗಲಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಪ್ಪು ಮಾಡಿದವರು ಅಧಿಕಾರಿಗಳೇ ಆಗಿರಬಹುದು ಅಥವಾ ರಾಜಕೀಯ ವ್ಯಕ್ತಿಗಳೇ ಇರಬಹುದು. ಯಾರೇ ಇದ್ದರೂ ಕ್ರಮ ಜರುಗಿಸುವುದು ಖಚಿತ ಎಂದರು.

ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಸಿಬಿಐ ಬ್ಯಾಂಕ್ ಅಧಿಕಾರಿಗಳ ವಂಚನೆ ಕುರಿತು ತನಿಖೆ ನಡೆಸುತ್ತಿದೆ. ಸಚಿವಾಲಯದಲ್ಲಿನ ವಂಚನೆ ಆರೋಪ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದೆ. ಬಿಜೆಪಿ ಪ್ರತಿಭಟನೆ ಮಾಡಲಿ, ಮುಖ್ಯಮಂತ್ರಿಗಳ ಮನೆಗೆ ಮುತ್ತಿಗೆ ಹಾಕಲಿ ಯಾರು ಬೇಡ ಅನ್ನುತ್ತಾರೆ.

ಹಗರಣ ತನಿಖೆ ವೇಳೆ ಸಚಿವರು, ಶಾಸಕರ ಮೇಲೆ ಆರೋಪ ಮಾಡುವುದು ಸಹಜ, ತನಿಖೆಯ ವರದಿ ಆಧಾರದ ಮೇಲೆ ಕ್ರಮ ಜರುಗಿಸಲಾಗುವುದು ಎಂದರು.

ದೇಶದಲ್ಲಿ ಇಂದಿನಿಂದ ಜಾರಿಗೆ ಬಂದಿರುವ ಮೂರು ಹೊಸ ಅಪರಾಧ



ಕಾನೂನುಗಳ ಪರಿಣಾಮದ ಬಗ್ಗೆ ಈಗಲೇ ಹೇಳಲು ಬರುವುದಿಲ್ಲ. ಇಂದಿನಿಂದ ದಾಖಲಾಗುವ ಪ್ರಕರಣಗಳಿಗೆ ಹೊಸ ಕಾನೂನುಗಳು ಅನ್ವಯವಾಗಲಿವೆ. ಹೊಸ ಕಾಯ್ದೆಗಳ ಸಕ್ಸಸ್ ಅಥವಾ ಫೇಲ್ಯೂರ್ ಈಗಲೇ ಗೊತ್ತಾಗುವುದಿಲ್ಲ. ಪ್ರಕರಣಗಳು ದಾಖಲಾದ ಬಳಿಕ ಕೋರ್ಟ್‌ನಲ್ಲಿ ಯಾವ ರೀತಿ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೋಡಬೇಕು, ಇಡೀ ದೇಶದಲ್ಲಿ ಹೊಸ ಕಾನೂನು ಜಾರಿ ಮಾಡಿರುವುದರಿಂದ ಎಲ್ಲ ಕಡೆಯಿಂದ ಪ್ರತಿಕ್ರಿಯೆ ಬರಬೇಕು. ಕಾನೂನಿನಲ್ಲಿ ಸರ್ಕಾರ ಕೆಲವು ಪರಿಷ್ಕರಣೆ ಮಾಡಬಹುದು. ಹೊಸ ಕಾನೂನುಗಳ ಬಗ್ಗೆ ಗೃಹ ಇಲಾಖೆಯ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಪೊಲೀಸರಿಗಾಗಿ ಹೊಸದಾಗಿ ಮೊಬೈಲ್ ಅಪ್ಲಿಕೇಷನ್ ಸಿದ್ಧಪಡಿಸಲಾಗಿದೆ. ಪೊಲೀಸರಿಗೆ ಹೊಂದಿಕೆ ಆಗೋವರೆಗೂ ಈ ಆ್ಯಪ್ ನೋಡಿಕೊಂಡು ಕೆಲಸ ಮಾಡಲು ಸಹಾಯವಾಗಲಿದೆ ಎಂದರು.

ಕಾನ್‌ಸ್ಟೆಬಲ್‌ಗಳ ಅಂತರ–ಜಿಲ್ಲಾ ವರ್ಗಾವಣೆಗೆ ನಿಯಮಗಳನ್ನು ರೂಪಿಸಲಾಗುತ್ತಿದೆ. ಈವರೆಗೆ ನಿಯಮಗಳಿರಲಿಲ್ಲ, ಪತಿ–ಪತ್ನಿ ವರ್ಗಾವಣೆಯನ್ನೂ ಮಾಡಲಾಗುವುದು. ಈ ಕುರಿತು ಪೊಲೀಸ್ ಮಹಾನಿರ್ದೇಶಕರೊಂದಿಗೆ ಚರ್ಚಿಸಿದ್ದೇನೆ. ಅಂತರ–ಜಿಲ್ಲಾ ವರ್ಗಾವಣೆ ಸಮಸ್ಯೆಯನ್ನು ಶೀಘ್ರ ಬಗೆಹರಿಸಲಾಗುವುದು. ಸರ್ಕಾರದ ಭವಿಷ್ಯದ ಕುರಿತು ಸಿ.ಟಿ.ರವಿ, ಬಸವರಾಜ ಬೊಮ್ಮಾಯಿ ಅವರ ಹೇಳಿಕೆಗಳು, ವ್ಯಾಖ್ಯಾನಗಳು ವಿಭಿನ್ನವಾಗಿವೆ. ಬೊಮ್ಮಾಯಿ ಒಂದು ಹೇಳಿಕೆ ಕೊಟ್ಟರೆ, ಸಿ.ಟಿ.ರವಿ ಇನ್ನೊಂದು ಹೇಳಿಕೆ ಕೊಡುತ್ತಾರೆ, ಅವರಲ್ಲೇ ಹೊಂದಾಣಿಕೆ ಇಲ್ಲ. ಸರ್ಕಾರ ಅಭಿವೃದ್ಧಿ ಕೆಲಸ ಮರೆತಿಲ್ಲ. ಜನರಿಗೆ ಕೊಟ್ಟ ಮಾತನ್ನೂ ಮರೆತಿಲ್ಲ, ಗ್ಯಾರಂಟಿ ಯೋಜನೆಗಳ ಜೊತೆ ಎಲ್ಲ ಕೆಲಸಗಳನ್ನು ಮಾಡುತ್ತಿದ್ದೇವೆ, ಯಾವ ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ. ಸರೋಜಿನಿ ಮಹಿಷಿ ವರದಿ ಜಾರಿಗೆ ಒತ್ತಾಯಿಸಿ ನಡೆಯುತ್ತಿರುವ ಹೋರಾಟದ ಉದ್ದೇಶಗಳು ಸರಿಯಿದ್ದರೆ ಸರ್ಕಾರ ಗಮನಿಸುತ್ತದೆ. ಕಾನೂನನ್ನು ಯಾರೂ ಕೈಗೆತ್ತಿಕೊಳ್ಳಬಾರದು ಎಂದರು.

ಗಣೇಶಪುರಕ್ಕೆ ಜಿಪಂ ಸಿಇಓ ಭೇಟಿ



ಗಣೇಶಪುರ ಗ್ರಾಮದ ಪ್ರಗತಿಪರ ರೈತೋದ್ಯಮಿ ಜಯಶಂಕರ ಎಂಬುವವರ ಕ್ಷೇತ್ರಕ್ಕೆ ಜಿಪಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ.ಗಾಂಯತ್ರಿ ಭೇಟಿ ನೀಡಿದರು.

ಮೈಸೂರು,ಜು.1– ಕೃಷಿ ಇಲಾಖೆಯ ದ್ವೈಮಾಸಿಕ ಕಾರ್ಯಾಗಾರದ ಕ್ಷೇತ್ರ ಭೇಟಿಗಾಗಿ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಗಣೇಶಪುರ ಗ್ರಾಮದ ಪ್ರಗತಿಪರ ರೈತೋದ್ಯಮಿ ಜಯಶಂಕರ ಎಂಬುವವರ ಕ್ಷೇತ್ರಕ್ಕೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಕೆ.ಎಂಗಾಯತ್ರಿ ಭೇಟಿ ನೀಡಿದರು.

ಪ್ರಗತಿಪರ ರೈತೋದ್ಯಮಿಯಾದ ಜಯಶಂಕರ, ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ (PMFME) ಯೋಜನೆಯಡಿ 14,26,325 ರೂ.ಗಳ ಸಹಾಯಧನದೊಂದಿಗೆ ಒಟ್ಟು ಯೋಜನಾ ವೆಚ್ಚ 28,52,650 ರೂ.ಗಳ ಜೇನುತುಪ್ಪ ಸಂಸ್ಕರಣಾ ಘಟಕದ ಜೊತೆಗೆ ವಿವಿಧ ರೀತಿಯ ಎಣ್ಣೆ ತೆಗೆಯುವ ಘಟಕವನ್ನು ಅಳವಡಿಸಿಕೊಂಡಿದ್ದು, ಉತ್ತಮ ಲಾಭವನ್ನು ಗಳಿಸುತ್ತಿದ್ದಾರೆ. ಸದರಿ ರೈತರ ಉದ್ಯಮಶೀಲತೆ ಮತ್ತು ಪ್ರಗತಿಯನ್ನು ಕಂಡು ಜಿಪಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ. ಗಾಯತ್ರಿ ಪ್ರೋತ್ಸಾಹಿಸುವುದರ ಜೊತೆಗೆ ಉತ್ತಮ ಸಲಹೆಗಳನ್ನು ನೀಡಿದರು. ಕ್ಷೇತ್ರ ಭೇಟಿಗೆ ಮೈಸೂರಿನ ಜಂಟಿ ಕೃಷಿ ನಿರ್ದೇಶಕರು, ಮೈಸೂರು ಉಪ ವಿಭಾಗದ ಉಪ ಕೃಷಿ ನಿರ್ದೇಶಕರು–1, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ವಿಸ್ತರಣಾ ನಿರ್ದೇಶಕರು, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಎಲ್ಲಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು ಮತ್ತು ಇಲಾಖೆಯ ಎಲ್ಲಾ ವಿಸ್ತರಣಾ ಸಿಬ್ಬಂದಿ ಪಾಲ್ಗೊಂಡಿದ್ದರು.

ಸುಳ್ಳು ಸುದ್ದಿಗಳ ಮೇಲೆ ನಿಗಾ ಇಡಲು ಪ್ರತಿ ಜಿಲ್ಲೆಯಲ್ಲಿ 'ಫ್ಯಾಕ್ಟ್ ಚೆಕ್' ಘಟಕ ಸ್ಥಾಪನೆ

ಬೆಂಗಳೂರು, ಜು. 1(ಕೆಎಂಶಿ)– ಸುಳ್ಳು ಸುದ್ದಿಗಳ ಮೇಲೆ ತೀವ್ರ ನಿಗಾ ಇಡಲು ಪ್ರತೀ ಜಿಲ್ಲೆಯಲ್ಲೂ ಫ್ಯಾಕ್ಟ್‌ಚೆಕ್ ಘಟಕ ಸ್ಥಾಪಿಸಲಾಗಿದ್ದು, ಸುಳ್ಳು ಸುದ್ದಿಗಳನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಹರಡುವ ಸುಳ್ಳು ಸುದ್ದಿಗಳು ಸಮಾಜಕ್ಕೆ ಅನಾಹುತಕಾರಿಯಾಗುತ್ತವೆ. ಫೇಕ್ ನ್ಯೂಸ್‌ಗಳ ಪತ್ತೆ ಹಾಗೂ ನಿಯಂತ್ರಣಕ್ಕೆ ಎಲ್ಲಾ ಜಿಲ್ಲೆಗಳಲ್ಲಿ ಫ್ಯಾಕ್ಟ್‌ಚೆಕ್ ಘಟಕಗಳನ್ನು ಕ್ರಿಯಾಶೀಲಗೊಳಿಸಲಾಗಿದೆ.

ಇಡೀ ಸಮಾಜ ಫೇಕ್ ನ್ಯೂಸ್‌ಗಳ ಬಗ್ಗೆ ಬಹಳ ಎಚ್ಚರದಿಂದ ಇರಬೇಕು. ಪತ್ರಿಕಾ, ಮಾಧ್ಯಮ ಸಂಘಟನೆಗಳು ಗಂಭೀರ



ವಾಗಿ ಯೋಚಿಸಬೇಕು ಎಂದರು.

ಬೆಂಗಳೂರು ಪ್ರೆಸ್‌ಕ್ಲಬ್, ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಪ್ರಧಾನ ಭಾಷಣದಲ್ಲಿ ಪತ್ರಿಕೋದ್ಯಮದ ಈ ಕ್ಷಣದ ಸ್ಥಿತಿಗತಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರ್ಕಾರದ ಕಾರ್ಯದರ್ಶಿ ಕೆ.ವಿ.ತ್ರಿಲೋಕಚಂದ್ರ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತ ಸೂರಳ್ಕರ್ ವಿಕಾಸ್ ಕಿಶೋರ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಮಲ್ಲಪ್ಪ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಜು.01– ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು 2024ನೇ ಸಾಲಿಗೆ ವಿಕಲಚೇತನರ ಸಬಲೀಕರಣಕ್ಕಾಗಿ ಪ್ರಸ್ತಾಪಿಸಿರುವ ಕ್ಷೇತ್ರಗಳಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ, ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು www.awards.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕವೇ ಜುಲೈ 26 ರಿಂದ 31 ರೊಳಗೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಿಲಕ್‌ನಗರದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯ ವಿಕಲಚೇತನರ ಸಹಾಯವಾಣಿ ದೂ.ಸಂ–0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜ್ವಲ್ ನೋಡಲು ಜೈಲಿಗೆ ಬಂದ ಭವಾನಿ ರೇವಣ್ಣ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 8ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯದಿಂದ ಆದೇಶ ಹೊರಡಿಸಲಾಗಿದೆ. ಸದ್ಯ ಜೈಲಿನಲ್ಲಿರುವ ಪುತ್ರ ಪ್ರಜ್ವಲ್ ಅವರನ್ನು ತಾಯಿ ಭವಾನಿ ರೇವಣ್ಣ ಭೇಟಿಯಾಗಿದ್ದಾರೆ.

ಪರಪ್ಪನ ಅಗ್ರಹಾರದತ್ತ ಬಂದ ಭವಾನಿ ರೇವಣ್ಣ ಅವರು ಕ್ಯಾಮೆರಾ ಕಾಣುತ್ತಿದ್ದಂತೆಯೇ ಕೈಯಿಂದ ಮುಖ ಮುಚ್ಚಿಕೊಂಡಿದ್ದಾರೆ. ಕಾರ್ ಡ್ರೈವರ್



ಮತ್ತು ಆಪ್ತ ಸಹಾಯಕನ ಜೊತೆಗೆ ಆಗಮಿಸಿದ್ದಾರೆ. ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಕಿಡ್ನಾಪ್ ಪ್ರಕರಣದಲ್ಲಿ ಜಾಮೀನು ಪಡೆದಿರೋ ಭವಾನಿ ರೇವಣ್ಣ ಇದೀಗ ಜೈಲಿಗೆ ಬಂದಿದ್ದ ತಮ್ಮ ಪುತ್ರರನ್ನು ಭೇಟಿಯಾಗಿ ಮಾತನಾಡಿಸಿಕೊಂಡು ಬಂದಿದ್ದಾರೆ. ಶಾಸಕ ಎಚ್.ಡಿ ರೇವಣ್ಣ ಸಂಪೂರ್ಣ ಕುಟುಂಬ ಕಾನೂನು ಸಂಕಷ್ಟ ಎದುರಿಸುತ್ತಿದೆ. ಇಬ್ಬರೂ ಪುತ್ರರೂ ಲೈಂಗಿಕ ದೌರ್ಜನ್ಯ ಕೇಸ್‌ನಲ್ಲಿ ಸಿಐಡಿ ಕಸ್ಟಡಿ ಹಾಗೂ ಜೈಲು ಸೇರಿದ್ದಾರೆ. ಖುದ್ದು ಎಚ್.ಡಿ ರೇವಣ್ಣ ಜೈಲಿಗೆ ಹೋಗಿ ಬಂದಿದ್ದರೆ, ಭವಾನಿ ಕೂಡ ಜಾಮೀನು ಪಡೆದಿದ್ದಾರೆ. ಈ ಎಲ್ಲಾ ಘಟನೆಗಳಿಂದ ಮುಜುಗರಕ್ಕೆ ಒಳಗಾಗಿರೋ ಭವಾನಿ ರೇವಣ್ಣ ಜೈಲಿಗೆ ಬರುವ ವೇಳೆ ಮಾಧ್ಯಮಗಳಿಗೆ ಮುಖ ಕಾಣಿಸದಂತೆ ಮುಖ ಮುಚ್ಚಿಕೊಂಡು ಬಂದರು.

ಮಾನನಷ್ಟ ಮೊಕದ್ದಮೆ: ಮೇಧಾ ಪಾಟ್ಕರ್‌ಗೆ 5 ತಿಂಗಳು ಜೈಲು

ನವದೆಹಲಿ: ಮಾನನಷ್ಟ ಮೊಕದ್ದಮೆಯೊಂದರಲ್ಲಿ ದೆಹಲಿ ಕೋರ್ಟ್ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್‌ಗೆ 5 ತಿಂಗಳ ಜೈಲು ಶಿಕ್ಷೆ ಪ್ರಕಟಿಸಿದೆ.



23 ವರ್ಷಗಳ ಹಳೆಯ ಪ್ರಕರಣ ಇದಾಗಿದ್ದು, ದೆಹಲಿ ಲೆಫ್ಟಿನೆಂಟ್ ಗವರ್ನರ್ ಆಗಿರುವ ವಿಕೆ ಸಕ್ಸೇನಾ ಗುಜರಾತ್‌ನ ಎನ್‌ಜಿಒ ಮುಖ್ಯಸ್ಥರಾಗಿದ್ದಾಗ ಈ ಮೊಕದ್ದಮೆ ದಾಖಲಾಗಿತ್ತು.

ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ ಅವರು ಮೇಧಾ ಪಾಟ್ಕರ್‌ಗೆ 10 ಲಕ್ಷ ರೂಪಾಯಿ ದಂಡವನ್ನೂ ವಿಧಿಸಿದ್ದಾರೆ. ನ್ಯಾಯಾಲಯವು ತನ್ನ ಮುಂದೆ ಇರುವ ಸಾಕ್ಷ್ಯಗಳನ್ನು ಮತ್ತು ಎರಡು ದಶಕಗಳಿಂದ ಪ್ರಕರಣದ ವಾಸ್ತವಾಂಶಗಳನ್ನು ಪರಿಗಣಿಸಿ ಪಾಟ್ಕರ್ ಅವರಿಗೆ ಶಿಕ್ಷೆ ವಿಧಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಪಾಟ್ಕರ್‌ಗೆ ಅನುವು ಮಾಡಿಕೊಡಲು ನ್ಯಾಯಾಲಯ ಶಿಕ್ಷೆಯನ್ನು ಒಂದು ತಿಂಗಳ ಕಾಲ ಅಮಾನತುಗೊಳಿಸಿದೆ. ತಮ್ಮ ಮತ್ತು ನರ್ಮದಾ ಬಚಾವೋ ಆಂದೋಲನ ವಿರುದ್ಧ ಜಾಹೀರಾತುಗಳನ್ನು ಪ್ರಕಟಿಸಿದ್ದಕ್ಕಾಗಿ ಪಾಟ್ಕರ್ ಮತ್ತು ಸಕ್ಸೇನಾ 2000 ರಿಂದ ಕಾನೂನು ಹೋರಾಟದಲ್ಲಿ ತೊಡಗಿದ್ದರು.

ನಂತರ ಅಹಮದಾಬಾದ್ ಮೂಲದ 'ಕೌನ್ಸಿಲ್ ಫಾರ್ ಸಿವಿಲ್ ಲಿಬರ್ಟೀಸ್' ಹೆಸರಿನ ಎನ್‌ಜಿಒ ಮುಖ್ಯಸ್ಥರಾಗಿದ್ದ ಸಕ್ಸೇನಾ ಅವರು ಟಿವಿ ಚಾನೆಲ್‌ನಲ್ಲಿ ತಮ್ಮ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿ ಮಾನಹಾನಿಕರ ಪತ್ರಿಕಾ ಹೇಳಿಕೆಯನ್ನು ನೀಡಿದ್ದಕ್ಕಾಗಿ 2001 ರಲ್ಲಿ ಪಾಟ್ಕರ್ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ

ಮೈಸೂರು, ಜು.1– ಯುಗ ಯುಗಾಂತರದಿಂದ ಮಾನವ ಕುಲಕ್ಕೆ ದೇವರಿಂದ ಸೃಷ್ಟಿಯಾದ ಋಷಿ ಮುನಿಗಳಾದ ಚರಕ ಮಹರ್ಷಿ ಶಸ್ತ್ರಚಿಕಿತ್ಸಕರು ಹಾಗೂ ಶ್ರುಶ್ರುತ ಮಹರ್ಷಿಗಳಾದ ಶಾರೀರಿಕ ತಜ್ಞರಿಂದ ಬಂದ ಈ ಸುದಿನ. ಈ ಯುಗದಲ್ಲಿ ಬಿದನ್ ಚಂದ್ರರಾಯ್ ಅವರ ಸೇವೆಯನ್ನು ಸ್ಮರಿಸುವ ಈ ದಿನ ಮಹತ್ವಪೂರ್ಣ ಎಂದು ಸಿಗ್ಮಾ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್ ತಿಳಿಸಿದರು.



ಮೈಸೂರು ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನ ಆಚರಿಸಲಾಯಿತು. ಈ ವೇಳೆ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ನಿರ್ದೇಶಕರಾದ ಡಾ.ಕೆ.ಎಂ.ಮಾದಪ್ಪ, ಡಾ.ರಾಜೇಶ್ವರಿ ಮಾದಪ್ಪ, ತಜ್ಞ ವೈದ್ಯರಾದ ಡಾ.ಕೃಷ್ಣಪ್ರಸನ್ನ, ಡಾ.ಅನಿಕೇತ್ ಪ್ರಭಾಕರ್, ಡಾ.ಶ್ರೀದೇವಿ, ಡಾ.ರಾಕೇಶ್ ರಾಜೇ ಅರಸ್, ರೇಡಿಯೋಲಜಿಸ್ಟ್ ಡಾ. ನಂಯನ, ಡಾ.ಕೆ.ಎಸ್.ಸೋಮಣ್ಣ, ಡಾ.ಕನ್ಯಾ ಹಾಗೂ ಕಾರ್ಯನಿರತ ವೈದ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯ ನಿರ್ದೇಶಕರೂ ಆದ ಕಿಡ್ನಿ ಕಸಿ ಮತ್ತು ಮೂತ್ರ ಕೋಶ ತಜ್ಞ ಡಾ.ಮಾದಪ್ಪ ಮಾತನಾಡುತ್ತ, ಈ ಕಿಡ್ನಿ ಕಸಿ ನಮ್ಮ ಆಸ್ಪತ್ರೆಯಲ್ಲಿ ಈಗ ಮುಗಿದಿದೆ. ಶಸ್ತ್ರಚಿಕಿತ್ಸೆಯಾಗಿ ಕಿಡ್ನಿ ಕಸಿಯಾದವರು ಮೂತ್ರವನ್ನು 90 ನಿಮಿಷದಲ್ಲಿಯೇ ವಿಸರ್ಜನೆ ಮಾಡಿದ್ದಾರೆ. ನಮ್ಮ ಆಸ್ಪತ್ರೆಯಲ್ಲಿ ಎಲ್ಲಾ ಸರ್ಕಾರಿ ಹಾಗೂ ಸಹಕಾರಿ ಯೋಜನೆಗಳು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಇವೆ ಎಂದರು.

ಆಸ್ಪತ್ರೆಯ ನಿರ್ದೇಶಕರು ಹಾಗೂ ಮಕ್ಕಳ ಹಿರಿಯ ತಜ್ಞರಾದ ಡಾ. ರಾಜೇಶ್ವರಿ ಮಾದಪ್ಪ ಮಾತನಾಡಿ, ನಮ್ಮ ಆಸ್ಪತ್ರೆಯು ಎಲ್ಲಾ ವೈದ್ಯರ ಸಹಕಾರದಿಂದ ಅತ್ಯಂತ ಕನಿಷ್ಠ ದರದಲ್ಲಿ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ. ನಮ್ಮ ರೋಗಿಗಳು ನಮ್ಮೊಂದಿಗೆ ಸಹಕರಿಸುತ್ತಿದ್ದಾರೆ ಹಾಗೂ ನಮ್ಮ ಎಲ್ಲಾ ವೈದ್ಯರುಗಳ ಆರೋಗ್ಯ ಚೆನ್ನಾಗಿರಲಿ ಎಂದು ಆಶಿಸುತ್ತೇನೆ ಎಂದು ತಿಳಿಸಿದರು.

ರಕ್ತ ಪರೀಕ್ಷಕರಾದ ಡಾ|| ಶ್ರೀದೇವಿ ಮಾತನಾಡಿ, ನಮ್ಮ ಆಸ್ಪತ್ರೆಯಲ್ಲಿ ಎಲ್ಲಾ ವೈದ್ಯರು ರೋಗಿಗಳನ್ನು ಸೇವಾ ಮನೋಭಾವದಿಂದ ನೋಡಿಕೊಳ್ಳುತ್ತಾ ಬಂದಿದ್ದೇವೆ ಎಂದರು.

ಹೃದಯ ತಜ್ಞರಾದ ಡಾ|| ಕೃಷ್ಣಪ್ರಸನ್ನ ಮಾತನಾಡಿ, ಎಲ್ಲಾ ವೈದ್ಯ ವೃಂದದವರಿಗೆ ವೈದ್ಯ ದಿನದ ಶುಭಕೋರಿದರು. ವೈದ್ಯರು ರೋಗಿಗಳಿಗೆ ಪುನರ್‌ಜನ್ಮ ನೀಡುತ್ತಾರೆ. ಆದ್ದರಿಂದ ವೈದ್ಯರನ್ನು ದೇವರಾದ ನಾರಾಯಣ ಅವರಿಗೆ ಹೋಲಿಸಿ ಸ್ಮರಿಸುತ್ತಾರೆ.

ಪುರುಷೋತ್ತಮ ಬನ್ನೂರಿ ಮಾತನಾಡಿ, ಹತ್ತು ವರ್ಷದಿಂದ ಉದರ ಸಮಸ್ಯೆಯಿಂದ ಬಳಲುತ್ತಿದ್ದ ವ್ಯಕ್ತಿಗೆ ಸಿಗ್ಮಾ ಆಸ್ಪತ್ರೆಯಲ್ಲಿ ಅವರಿಗೆ ಉದರ ಶಸ್ತ್ರಚಿಕಿತ್ಸೆಯಾಗಿ ಗುಣವಾಗಿದೆ. ಸಿಗ್ಮಾ ಆಸ್ಪತ್ರೆಯು ಶ್ರದ್ಧೆ ಮತ್ತು ನಿಷ್ಠೆಯಿಂದ ಸಮಾಜಕ್ಕೆ ಸೇವೆ ಸಲ್ಲಿಸುತ್ತಾ ಬಂದಿದೆ ಎಂದು ಸಮಾರಂಭದಲ್ಲಿ ತಿಳಿಸಿದರು.

ರೈತರಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮ

ಮೈಸೂರು,ಜು.1– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಜುಲೈ 5 ಮತ್ತು 6 ರಂದು ಎಣ್ಣೆಕಾಳು ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆಗೆ ಇರುವ ಅವಕಾಶಗಳು ಎಂಬ ವಿಷಯದ ಮೇಲೆ ರೈತ, ರೈತಮಹಿಳೆಯರಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ತರಬೇತಿಯಲ್ಲಿ ಭಾಗವಹಿಸುವ ರೈತ, ರೈತಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಒದಗಿಸಲಾಗುವುದು. ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ದೂ.ಸಂ:8277933154ಗೆ ಕರೆ ಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸತಕ್ಕದ್ದು. ಕೇವಲ ಮೈಸೂರು ಜಿಲ್ಲೆಯ 30 ರೈತ, ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೊಡಗಿನಲ್ಲಿ ಮುಂಗಾರು ಮತ್ತೆ ಬಿರುಸು

● ಜಿಲ್ಲೆಯ ಹಲವೆಡೆ ವ್ಯಾಪಕ ಮಳೆ ● 2ನೇ ಬಾರಿಗೆ ಬಸವನ ಕಟ್ಟೆ, ನಾಗರಕಟ್ಟೆ ಮುಳುಗಡೆ



ತ್ರಿವೇಣಿ ಸಂಗಮದ ಬಸವನ ಕಟ್ಟೆ ಮತ್ತು ನಾಗರಕಟ್ಟೆ ಮತ್ತೆ ಮುಳುಗಡೆಯಾಗಿರುವುದು.

ಮಡಿಕೇರಿ: ಕೊಡಗು ಜಿಲ್ಲಾದ್ಯಂತ ಮುಂಗಾರು ಮಳೆ ಮತ್ತೆ ಬಿರುಸು ಪಡೆದಿದ್ದು, ಜಿಲ್ಲೆಯ ಹಲವೆಡೆ ವ್ಯಾಪಕ ಮಳೆಯಾಗಿದೆ.

ಭಾಗಮಂಡಲದಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಒಟ್ಟು 105.6 ಮಿ.ಮೀ. ಮಳೆಯಾಗಿದ್ದು, ಕಾವೇರಿ ನದಿ ಪಾತ್ರದ ಗ್ರಾಮಗಳಾದ ನೆಲಜಿ, ಕಕ್ಕಬ್ಬೆ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ಮತ್ತಿತರ ಕಡೆಗಳಲ್ಲಿ ಧಾರಾಕಾರ ಮಳೆಯಾದ ಪರಿಣಾಮ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಮತ್ತೆ ನೀರಿನ ಮಟ್ಟ ಏರಿಕೆಯಾಗಿದೆ. ಎರಡನೇ ಬಾರಿಗೆ ಬಸವನ ಕಟ್ಟೆ ಮತ್ತು ನಾಗರಕಟ್ಟೆ ಮುಳುಗಡೆಯಾಗಿವೆ.

2 ದಿನಗಳಿಂದ ಮಳೆ ಬಿರುಸು ಕಳೆದುಕೊಂಡಿದ್ದ ಪರಿಣಾಮ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಇಳಿಕೆಯಾಗಿತ್ತು ಇದೀಗ ಮತ್ತೊಮ್ಮೆ ಏರಿಕೆಯಾಗಿದ್ದು, ಭಾಗಮಂಡಲ-ಅಯ್ಯಂಗೇರಿ ರಸ್ತೆಯ ಕೆಳ ಭಾಗದ ಸೇತುವೆಯ ನದಿ ಪ್ರವಾಹ ಮಟ್ಟದಲ್ಲಿ ಹರಿಯುತ್ತಿದೆ. ಇದೇ ರೀತಿ ಮಳೆ ಮುಂದುವರೆದಲ್ಲಿ ಅಯ್ಯಂಗೇರಿ ರಸ್ತೆಯ ಮೇಲೆ ನದಿ ಪ್ರವಾಹ ಉಂಟಾಗಲಿದೆ. ಆದರೆ, ಈಗಾಗಲೇ ಮೇಲ್ಸೇತುವೆ ವಾಹನ ಮತ್ತು ಜನ ಸಂಚಾರಕ್ಕೆ ಮುಕ್ತವಾಗಿರುವ ಹಿನ್ನೆಲೆಯಲ್ಲಿ ರಸ್ತೆ ಸಂಪರ್ಕ ಕಡಿತದ ಆತಂಕ ದೂರವಾಗಿದೆ.

ನೀರಿನ ಮಟ್ಟ ಏರಿಕೆ: ಜಿಲ್ಲೆಯಲ್ಲಿ ಮಳೆ ಮತ್ತೊಮ್ಮೆ ಬಿರುಸು ಪಡೆದ ಹಿನ್ನೆಲೆಯಲ್ಲಿ ತೊರೆಗಳು, ಕಾವೇರಿ ಮತ್ತು ಅದರ ಉಪ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಮಡಿಕೇರಿ ಹಾಗೂ ಸೋಮವಾರಪೇಟೆ ತಾಲೂಕಿನಲ್ಲೂ ಧಾರಾಕಾರ ಮಳೆಯಾದ ಕಾರಣ ಮಾದಾಪುರ ಮತ್ತು ಹಟ್ಟಿಹೊಳೆಯಲ್ಲಿ ನೀರಿನ ಮಟ್ಟ ಏರಿಕೆ ಕಂಡಿದೆ. ಹಾರಂಗಿ ಜಲಾಶಯಕ್ಕೆ ಸೋಮವಾರ ಬೆಳಗ್ಗೆ ವೇಳೆಗೆ 1673 ಕ್ಯೂಸೆಕ್ ಒಳ ಹರಿವು ದಾಖಲಾಗಿದೆ. 5859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಇದೀಗ 2838.42 ಅಡಿಗಳಷ್ಟು ಸಂಗ್ರಹವಾಗಿದೆ.

ಮಾಧ್ಯಮ ಜನಹಿತ ವಿಚಾರಕ್ಕೆ ಆದ್ಯತೆ ನೀಡಲಿ

● ಪತ್ರಿಕಾ ದಿನಾಚರಣೆಯಲ್ಲಿ ಸಾಹಿತಿ ಡಾ.ನರೇಂದ್ರ ರೈ ದೇರ್ಲ ಅಭಿಮತ ● ಹಿರಿಯ ಪತ್ರಕರ್ತರಿಗೆ ಸನ್ಮಾನ

ಮಡಿಕೇರಿ, ಜು.1–ಪ್ರಸ್ತುತ ದಿನಮಾನಗಳಲ್ಲಿ ಸಮಾಜಕ್ಕೆ ಹಿತವಿಲ್ಲದ ವಿಚಾರಗಳ ಸುತ್ತಲೇ ಮಾಧ್ಯಮಗಳು ಸುತ್ತುತ್ತಿದ್ದು, ಇವುಗಳನ್ನು ಮೀರಿ ಜನಹಿತ ವಿಚಾರಗಳು ಆದ್ಯತೆಯಾಗಿರಬೇಕು ಎಂದು ಪುತ್ತೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಹಾಗೂ ಸಾಹಿತಿ ಡಾ.ನರೇಂದ್ರ ರೈ ದೇರ್ಲ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಕೊಡಗು ಪತ್ರಕರ್ತರ ಸಂಘ ಮತ್ತು ಕೊಡಗು ಪತ್ರಿಕಾ ಭವನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೃಶ್ಯ ವಾಹಿನಿಗಳು ಒಂದು ಸಾವಿಗೆ ಸಂಬಂಧಿಸಿದ ಸಣ್ಣ ಸಣ್ಣ ವಿಚಾರಗಳಿಗೆ ಗಂಟೆಗಟ್ಟಲೇ ಸಮಯ ವ್ಯರ್ಥ ಮಾಡುತ್ತಿವೆ. ಇವುಗಳನ್ನು ಮೀರಿ ನಮ್ಮ ಸುತ್ತಮುತ್ತಲ ಜನಸಾಮಾನ್ಯರ ದುಃಖ ದುಮ್ಮಾನಗಳಿಗೆ ಸ್ಪಂದಿಸುವ, ಕೃಷಿ ಚಟುವಟಿಕೆ, ಹಸಿವಿನ ವಿಚಾರಗಳಿಗೆ ನಾವೇಕೆ ಆದ್ಯತೆ ನೀಡುತ್ತಿಲ್ಲ? ಎಂದು ಪ್ರಶ್ನಿಸಿದರು.

ದೀಪದ ಕೆಲಸ ಮಾಡಲಿ: ಸಮಾಜ ಸರಿಯಾದ ಪಥದಲ್ಲಿ ಸಾಗುವುದಕ್ಕೆ ಪೂರಕವಾಗಿ ಪತ್ರಿಕಾ ಕ್ಷೇತ್ರ ದಾರಿ ತೋರುವ 'ದೀಪ'ದ ಕೆಲಸ, ಧ್ವನಿಯಿಲ್ಲದವರಿಗೆ ಧ್ವನಿಯಾಗುವ ಕೆಲಸ ಮಾಡುವ ನಿಟ್ಟಿನಲ್ಲಿ ಮುಂದುವರೆಯಬೇಕು. ಪತ್ರಿಕಾ ದಿನಾಚರಣೆಯ ಸಂದರ್ಭ ನಮ್ಮ ಆತ್ಮಾವಲೋಕನಕ್ಕೆ ಬದಲಾಗಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಮಯವಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೊಡಗು ಪತ್ರಿಕಾ ಭವನ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್, ತಂತ್ರಜ್ಞಾನದ ಬೆಳವಣಿಗೆ ಪತ್ರಿಕಾ ಕ್ಷೇತ್ರದ ಮೇಲೆ ಗಾಢವಾದ ಪರಿಣಾಮ ಬೀರುತ್ತಿದೆ. ಪ್ರಸ್ತುತ ಆನ್‌ಲೈನ್‌ಗಳಲ್ಲೂ ಸುದ್ದಿಗಳು ಜನರಿಗೆ ತಲುಪುತ್ತಿದ್ದು, ಪತ್ರಿಕೆಯ ಓದಿನ ಸಂತೋಷ ಮತ್ತು ಅನುಭವ ಬೇರೆತರನಾಗಿದೆ. ಯಾವುದೇ ಸುದ್ದಿ ಮಾಡುವ ಸಂದರ್ಭ ಪತ್ರಕರ್ತರು ಯಾರು, ಯಾವಾಗ, ಏನು, ಏತಕ್ಕಾಗಿ, ಎಲ್ಲಿ ಮತ್ತು ಹೇಗೆ ಎನ್ನುವ ವಿಚಾರಗಳತ್ತ ಗಮನವನ್ನು ಕೇಂದ್ರೀಕರಿಸುವುದು ಅವಶ್ಯ. ಈ ಅಂಶಗಳು ಸೇರಿದಾಗ ಮಾತ್ರ ಒಂದು ಸುದ್ದಿ ರಚನೆಯಾಗುತ್ತದೆಂದು ತಿಳಿಸಿದರು.



ಮಡಿಕೇರಿ ಪತ್ರಿಕಾ ಭವನ ಸಭಾಂಗಣದಲ್ಲಿ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತರಾದ ಜಿ.ಚಿದ್ವಿಲಾಸ್, ಟಿ.ಪಿ.ರಮೇಶ್, ಕೆ.ಹೆಚ್.ಶಿವಣ್ಣ, ಟಿ.ಎಲ್.ಶ್ರೀನಿವಾಸ್ ಮತ್ತು ತೇಲಪಂಡ ಕವನ್ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು.

> ಅತ್ಯಂತ ಅತಿರೇಕದ ಸಂದಿಗ್ಧ ಸಂದರ್ಭದಲ್ಲಿ ನಾವಿದ್ದೇವೆ. ಇವುಗಳ ನಡುವೆಯೂ ಕೊಡಗಿನ ಪತ್ರಿಕೋದ್ಯಮ ಇಂದಿಗೂ ಪ್ರಾಮಾಣಿಕವಾಗಿ, ಜನಪರವಾಗಿ ಕಾರ್ಯನಿರ್ವಹಿಸುತ್ತಿದೆ.
> –ಡಾ.ನರೇಂದ್ರ ರೈ ದೇರ್ಲ, ಸಾಹಿತಿ

ಹಿರಿಯ ಪತ್ರಕರ್ತ ಟಿ.ಪಿ.ರಮೇಶ್, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್ ಮಾತನಾಡಿದರು. ಇದೇ ವೇಳೆ ಶಕ್ತಿ ಪತ್ರಿಕೆ ಸಂಪಾದಕ ಜಿ.ಚಿದ್ವಿಲಾಸ್, ಹಿರಿಯ ಪತ್ರಕರ್ತರಾದ ಟಿ.ಪಿ.ರಮೇಶ್, ಕೆ.ಹೆಚ್.ಶಿವಣ್ಣ, ಟಿ.ಎಲ್.ಶ್ರೀನಿವಾಸ್ ಮತ್ತು ತೇಲಪಂಡ ಕವನ್ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು. ಕೊಡಗು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್, ಸಲಹೆಗಾರರಾದ ಎಚ್.ಟಿ.ಅನಿಲ್, ಶ್ರೀಧರ್ ನೆಲ್ಲಿತ್ತಾಯ, ಉಪಾಧ್ಯಕ್ಷ ಜಿ.ವಿ.ರವಿ ಕುಮಾರ್, ಕುಶಾಲನಗರ ಅಧ್ಯಕ್ಷ ವಿಘ್ನೇಶ್ ಭೂತನಕಾಡು, ವಿರಾಜಪೇಟೆ ಅಧ್ಯಕ್ಷ ಮಧೋಷ್ ಪೂವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕೊಡಗಿನಲ್ಲಿ ಕಪ್ಪು ಹಣ ಚಲಾವಣೆ

ಜನಜಾಗೃತಿ ಕಾರ್ಯಕ್ರಮದಲ್ಲಿ ಸಿಎನ್‌ಸಿ ಅಧ್ಯಕ್ಷ ನಾಚಪ್ಪ ಆರೋಪ



ಕಕ್ಕಬ್ಬೆ ಜಂಕ್ಷನ್‌ನಲ್ಲಿ ಭೂ ಪರಿವರ್ತನೆ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಸಿಎನ್‌ಸಿಯಿಂದ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಜು.1–ರಾಜಕೀಯ ನಂಟು ಹೊಂದಿರುವ ಭೂ ಮಾಫಿಯಾಗಳು ವಾಣಿಜ್ಯ ದುರುದ್ದೇಶಕ್ಕಾಗಿ ಕೊಡವರ ಪವಿತ್ರ ಕೊಡವ ಲ್ಯಾಂಡ್ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ಜಿಲ್ಲೆಯಲ್ಲಿ ಕಪ್ಪು ಹಣ ಚಲಾವಣೆಯಾಗುತ್ತಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು. ನಾಚಪ್ಪ ಆರೋಪಿಸಿದರು.

ಜಿಲ್ಲೆಯ ವಿವಿಧೆಡೆಭೂ ಪರಿವ ರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಕಕ್ಕಬ್ಬೆ ಜಂಕ್ಷನ್‌ನಲ್ಲಿ ಸೋಮವಾರ ನಡೆದ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್ಥಿಕ ಅಪರಾಧಿಗಳು, ಕಾಳಸಂತೆಕೋರರು ಹಾಗೂ ರಾಜಕೀಯ ನಂಟು ಹೊಂದಿರುವ ಭೂ ಮಾಫಿಯಾಗಳು ಕಪ್ಪು ಹಣವನ್ನು ಬಿಳಿ ಮಾಡಲು ಕೊಡವ ಲ್ಯಾಂಡ್ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕೊಡಗಿನಲ್ಲಿ ರೆಸಾರ್ಟ್ ವ್ಯವಹಾರ ದೊಡ್ಡ ಮಟ್ಟದಲ್ಲಿ ನಡೆಯುದಿದ್ದರೂ ಕಾಫಿ ತೋಟಗಳ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಮಾಡಲಾಗುತ್ತಿದೆ. ನಷ್ಟ ತೋರಿಸುವುದಕ್ಕಾಗಿ ರೆಸಾರ್ಟ್‌ಗಳನ್ನು ನಿರ್ಮಿಸುತ್ತಿದ್ದು, ಕಪ್ಪು ಹಣ ಚಲಾವಣೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕಕ್ಕಬ್ಬೆ ನಾಲಡಿಯಲ್ಲೂ 300 ಎಕರೆ ಜಾಗವನ್ನು ಭೂ ಪರಿವರ್ತನೆ ಮಾಡಲು ಹುನ್ನಾರ ನಡೆದಿದೆ. ಜನರು ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸುತ್ತಿದ್ದರೂ ದೆಹಲಿ ಮತ್ತು ಮುಂಬೈ ಭಾಗದ ರಾಜಕೀಯ ಸಂಕುಲಗಳು ಭೂ ಮಾಫಿಯಾದ ಪರವಾಗಿ ರೆಸಾರ್ಟ್ ನಿರ್ಮಾಣದ ಅನುಮತಿಗೆ ಪ್ರಭಾವ ಬೀರುತ್ತಿದ್ದಾರೆ. ಮರಂದೋಡು ಗ್ರಾಮದಲ್ಲಿ ಭತ್ತದ ಗದ್ದೆ ಮತ್ತು ಪರ್ವತ ಕೊರೆದು ಟೌನ್ ಶಿಪ್‌ಗಾಗಿ ಭೂ ಪರಿವರ್ತನೆಯಾಗುತ್ತಿದ್ದು, ಕೊಡವ ಲ್ಯಾಂಡ್‌ನ ಕಾವೇರಿ ಒಡಲು ನಾಶವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಪ್ಪಾರಂಡ ನಂದಿನಿ ನಂಜಪ್ಪ ನಾಟೋಳಂಡ ಕಮಲಾ, ಅರೆಯಡ ಸವಿತಾ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಪಾಂಡಂಡ ನರೇಶ್, ಕಟೋಳಿರ ಸನ್ನಿ ಸೋಮಣ್ಣ, ಬಾಚಮಂಡ ರಾಜಾ ಪೂವಣ್ಣ, ಚೇನಂಡ ಸುರೇಶ್, ಅಪ್ಪಾರಂಡ ಶ್ರೀನಿವಾಸ್, ಉದಿಯಂಡ ಸುಭಾಷ್, ಅಪ್ಪಾರಂಡ ಪ್ರಕಾಶ್, ಕಲ್ಯಾಟಂಡ ರಘು, ಅರೆಯಡ ಗಿರೀಶ್, ಕಲ್ಯಾಟಂಡ ಅರುಣ್, ಕಲ್ಯಾಟಂಡ ಸುಧಾ, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಕಾಂಡೇರ ಸುರೇಶ್, ಬಾಚಮಂಡ ಬೆಲ್ಲು ಪೂವಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹಾರಂಗಿ ಹಿನ್ನೀರಲ್ಲಿ ಮುಳುಗಿದ್ದ ಯುವಕನ ಶವ ಪತ್ತೆ



ಸುಂಟಿಕೊಪ್ಪ, ಜು.1–ಸಮೀಪದ ಹಾದ್ರೆಹೆರೂರಿನ ಹಾರಂಗಿ ಹಿನ್ನೀರಿನಲ್ಲಿ ಭಾನುವಾರ ಸಂಜೆ ಮುಳುಗಿ ಮೃತಪಟ್ಟಿದ್ದ ಮೈಸೂರು ಮೂಲದ ಪ್ರವಾಸಿಗ ಶಶಿ ಮೃತದೇಹ ಸೋಮವಾರ ಬೆಳಗ್ಗೆ ಪತ್ತೆಯಾಗಿದೆ.

ಮೈಸೂರಿನಿಂದ 10 ಜನರ ತಂಡವೊಂದು ಶನಿವಾರ ಕೊಡಗು ಪ್ರವಾಸಿ ತಾಣ ವೀಕ್ಷಿಸಲು ಆಗಮಿಸಿತ್ತು. ಭಾನುವಾರ ಸಂಜೆ ಮೈಸೂರಿಗೆ ವಾಪಸ್ಸಾಗುವ ಮುನ್ನ ಹಾದ್ರೆಹೆರೂರು ಹಾರಂಗಿ ಹಿನ್ನೀರು ಪ್ರದೇಶಕ್ಕೆ ಭೇಟಿ ನೀಡಿದ್ದರು. ಈ ವೇಳೆ ಈಜಲು ತೆರಳಿದ್ದ ಮೈಸೂರಿನ ಮೇಟಗಳ್ಳಿ ನಿವಾಸಿ ಶಶಿ ಮುಳುಗಿ ಮೃತಪಟ್ಟಿದ್ದರು. ಭಾನುವಾರ ರಾತ್ರಿವರೆಗೂ ಸುಂಟಿಕೊಪ್ಪ ಠಾಣೆ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಹಾಗೂ ಈಜು ತಜ್ಞರು ಹುಡುಕಾಟ ನಡೆಸಿದ್ದರೂ, ಶವ ಪತ್ತೆಯಾಗಿರಲಿಲ್ಲ.

ಸೋಮವಾರ ಬೆಳಗ್ಗೆ 8 ಗಂಟೆಯಲ್ಲಿ ಶವ ಪತ್ತೆಯಾಗಿದೆ. ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ನಂತರ ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ಇದೇ ವೇಳೆ ಕುಶಾಲನಗರ ಸುಂಟಿಕೊಪ್ಪ ಅಪರಾಧ ಪತ್ತೆ ದಳದ ಪಿಎಸ್‌ಐ ಸ್ವಾಮಿ, ಸಿಬ್ಬಂದಿ ಸತೀಶ್, ಜಗದೀಶ್, ನಿಶಾಂತ್, ಸತೀಶ್ ಇಳಿಗೆರೆ ಇದ್ದರು.

ಕಾವೇರಿ ಕೊಡವ ಕೇರಿ ವಾರ್ಷಿಕ ಮಹಾಸಭೆ



ವಿರಾಜಪೇಟೆಯ ಕೊಡವ ಸಮಾಜದ ಸಭಾಂಗಣದಲ್ಲಿ ಕಾವೇರಿ ಕೊಡವ ಕೇರಿ ವಾರ್ಷಿಕ ಮಹಾಸಭೆ ನಡೆಯಿತು.

ವಿರಾಜಪೇಟೆ: ಇಲ್ಲಿನ ಅಪ್ಪಯ್ಯಸ್ವಾಮಿ ರಸ್ತೆಯ ಜನರಲ್ ತಿಮ್ಮಯ್ಯ ಬಡಾವಣೆಯ ಕಾವೇರಿ ಕೊಡವ ಕೇರಿಯ 20ನೇ ವಾರ್ಷಿಕ ಮಹಾಸಭೆ ಕೊಡವ ಸಮಾಜದ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಕೊಡವ ಕೇರಿ ಅಧ್ಯಕ್ಷೆ ಮೇರಿಯಂಡ ಅರಸು ಅಚ್ಚಮ್ಮ ಮಾತನಾಡಿ, ಕೊಡವ ಸಂಸ್ಕೃತಿ, ಭಾಷಾ ವಿಶೇಷತೆ, ಸಂಪ್ರದಾಯಗಳು ವಿಶ್ವದಲ್ಲೇ ವಿಶಿಷ್ಟವಾಗಿವೆ ಈ ಪದ್ಧತಿ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮೂಲಕ ಇವುಗಳನ್ನು ಜೀವಂತವಿರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕಾರ್ಯದರ್ಶಿ ಚೊಟ್ಟೇರ ಬೆಳ್ಳಿಯಪ್ಪ ವಾರ್ಷಿಕ ವರದಿ ಮಂಡಿಸಿದರು. ಮರಣನಿಧಿ ಕಾರ್ಯದರ್ಶಿ ಚೊಟ್ಟೇರ ರಮೇಶ್ ಲೆಕ್ಕಪತ್ರ ಮಂಡಿಸಿದರು. ಕುಟ್ಟಂಡ ಗೀತಾ ಪ್ರಾರ್ಥಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಅಂಜಪರವಂಡ ಅನಿಲ್ ಮಂದಣ್ಣ, ಬಾಳೇಕುಟ್ಟಿರ ರಾಜಾ ಗಣಪತಿ, ಮೇಕತಂಡ ಚಂಗಪ್ಪ, ಬಟ್ಟಿಯಂಡ ವಿಠಲ, ಮುಕ್ಕಾಟಿರ ರಾಯ್ ಬಿದ್ದಪ್ಪ, ಬೊಪ್ಪಂಡ ತ್ರಿಶು, ಪಾಂಡಂಡ ಕಾವ್ಯಾ ರಚನ್, ಬೊಳ್ಳೇಪಂಡ ಆಶಾ ಸುರೇಶ್, ಅಮ್ಮಣಕುಟ್ಟಂಡ ರಶ್ಮಿ ತಿಮ್ಮಯ್ಯ, ಚಿಲ್ಲವಂಡ ರೇಖಾ ಹರೀಶ್ ಹಾಗೂ ತಾತಂಡ ಮಿನ್ನು ಹಾಜರಿದ್ದರು.

ಇಂದು ದಿನಾಚರಣೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ವಚನ ಸಂರಕ್ಷಣಾ ದಿನಾಚರಣೆ ಜು.2 ರಂದು ಬೆಳಗ್ಗೆ 10.30ಕ್ಕೆ ಕುಶಾಲನಗರ ತಾಲೂಕಿನ ಹೆಬ್ಬಾಲೆ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಲಿದೆ.

ಮೃತ ರೈತನ ಕುಟುಂಬಕ್ಕೆ 15 ಲಕ್ಷ ಪರಿಹಾರ ನೀಡಿ

ಕುಂದುಕೊರತೆ ಸಭೆಯಲ್ಲಿ ರೈತ ಮುಖಂಡ ಶೈಲೇಂದ್ರ ಆಗ್ರಹ



ಕೊಳ್ಳೇಗಾಲ ತಾಪಂ ಸಭಾಂಗಣದಲ್ಲಿ ನಡೆದ ಕುಂದುಕೊರತೆ ಸಭೆಯಲ್ಲಿ ರೈತರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೊಳ್ಳೇಗಾಲ, ಜು.1– ಕುಂತೂರು ಸಮೀಪ ಬೈಕ್‌ಗೆ ನವಿಲು ಅಡ್ಡ ಬಂದ ಪರಿಣಾಮ ಸ್ಥಳದಲ್ಲೇ ಮೃತಪಟ್ಟ ರೈತ ರೇವಣ್ಣ ಕುಟುಂಬಕ್ಕೆ ಅರಣ್ಯ ಇಲಾಖೆ 15 ಲಕ್ಷ ರೂ. ಪರಿಹಾರ ನೀಡಬೇಕು ಎಂದು ರೈತ ಮುಖಂಡ ಶೈಲೇಂದ್ರ ಕುಂದುಕೊರತೆ ಸಭೆಯಲ್ಲಿ ಆಗ್ರಹಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಹಸೀಲ್ದಾರ್ ಮಂಜುಳಾ ಅಧ್ಯಕ್ಷತೆಯಲ್ಲಿ ನಡೆದ ರೈತ ಮುಖಂಡರ ಕುಂದುಕೊರತೆ ನಿವಾರಣೆ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಕುಂತೂರು ಬಳಿ ರೈತ ರೇವಣ್ಣ ಬೈಕ್‌ನಲ್ಲಿ ಹೋಗುತ್ತಿದ್ದಾಗ ನವಿಲು ಅಡ್ಡ ಬಂದಿದ್ದರಿಂದ ಸವಾರ ರೇವಣ್ಣ ಹಾಗೂ ನವಿಲು ಮೃತಪಟ್ಟಿದೆ. ಒಂದು ವೇಳೆ ರೈತ ರೇವಣ್ಣ ಬದುಕಿದ್ದರೆ ನವಿಲು ಸಾವಿಗೆ ಆತನೇ ಕಾರಣವೆಂದು ರೇವಣ್ಣ ವಿರುದ್ಧ ವನ್ಯಜೀವಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುತ್ತಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೃತ ಯುವ ರೈತ ರೇವಣ್ಣನ ಕುಟುಂಬಕ್ಕೆ ಅರಣ್ಯ ಇಲಾಖೆ ತಕ್ಷಣ 15 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಪಟ್ಟುಹಿಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯಾಧಿಕಾರಿ ಭರತ್, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಹಿರಿಯ ಅರಣ್ಯಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದೇನೆ ಎಂದರು.

ರೈತ ಮುಖಂಡ ಅಣಗಳ್ಳಿ ಬಸವರಾಜು ಮಾತನಾಡಿ, ಬೆಳೆ ವಿಮೆ ಕಂಪನಿಗಳು ರೈತರಿಗೆ ವಂಚನೆ ಮಾಡುತ್ತಿವೆ. ಬೆಳೆ ವಿಮೆಯಲ್ಲಿನ ಲೋಪ ಸರ್ಕಾರದ ಗಮನಕ್ಕೆ ತಂದು ಚರ್ಚಿಸಿ ರೈತರಿಗೆ ವರದಾಯಕ ದೃಷ್ಟಿಯಲ್ಲಿ ಗಮನಹರಿಸಬೇಕು. ರೈತರ ಬೆಳೆ ನಷ್ಟ ಪರಿಹಾರ ಹಾಗೂ ಮೊತ್ತದ ಕುರಿತು ಮಾಹಿತಿ ನೀಡಿ ಎಂದು ಮನವಿ ಮಾಡಿದರು.

ಈ ವೇಳೆ ಮಾಹಿತಿ ನೀಡಲು ತಡವರಿಸಿದ ಕೃಷಿ ಅಧಿಕಾರಿಗಳನ್ನು ಬಸವರಾಜು ತರಾಟೆ ತೆಗೆದುಕೊಂಡು, ಕೂಡಲೇ ಉತ್ತರಿಸಿ ರೈತರಿಗೆ ಪರಿಹಾರ ಒದಗಿಸಲು ಮುಂದಾಗಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ತಹಸೀಲ್ದಾರ್ ಮಂಜುಳಾ ಹಾಗೂ ಕೃಷಿ ಅಧಿಕಾರಿ ಸುಂದ್ರಮ್ಮ ಮಾತನಾಡಿ, ಬರ ಪರಿಹಾರ ವಿತರಣೆ ಸಂಬಂಧ ಪೋರ್ಟಲ್‌ನ ಡಾಟಾ ಎಂಟ್ರಿಯಾಗುತ್ತಿದೆ. ಡಿಬಿಟಿ ಮೂಲಕ ನೇರವಾಗಿ ರೈತರ ಖಾತೆಗಳಿಗೆ ಹಣ ಹಾಕಲಾಗುವುದು. ತಾಲೂಕಿನ ರೈತರಿಗೆ 24.53 ಲಕ್ಷ ರೂ. ಪರಿಹಾರ ಬಿಡುಗಡೆಯಾಗಿದೆ ಎಂದರು.

ಸಭೆಯಲ್ಲಿ ಕೆರೆ ಒತ್ತುವರಿ ತೆರವು, ಗ್ರಾಮೀಣ ಭಾಗಕ್ಕೆ ಹೆಚ್ಚಿನ ಬಸ್ ನಿಯೋಜನೆ, ಬಸ್ ನಿಲ್ದಾಣದಲ್ಲಿ ವಾಹನ ನಿಲುಗಡೆಗೆ ದುಬಾರಿ ಶುಲ್ಕ, ಯುಜಿಡಿ, ವಿದ್ಯುತ್ ಸಮಸ್ಯೆ, ಟಿಸಿ ತೊಂದರೆ, ಕಾಲುವೆ ಹೂಳು ತೆಗೆಸಿ, ಹದಗೆಟ್ಟ ರಸ್ತೆ, ಹಂದಿ ದಾಳಿಗೆ ರೈತರಿಗೆ ಪರಿಹಾರ ಹೀಗೆ ಅನೇಕ ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಲಾಯಿತು.

ಕನ್ನಡಿಗರ ಉದ್ಯೋಗ ಮೀಸಲಾತಿಗೆ ಒತ್ತಾಯಿಸಿ ಪ್ರತಿಭಟನೆ



ಚಾ.ನಗರದಲ್ಲಿ ಕನ್ನಡಿಗರ ಉದ್ಯೋಗ ಮೀಸಲಾತಿಗೆ ಒತ್ತಾಯಿಸಿ ಕರವೇ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.1–ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿಗೆ ಸಮಗ್ರ ಕಾಯ್ದೆ ರೂಪಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಎದುರು ವೇದಿಕೆ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು ಧರಣಿ ನಡೆಸಿದರು. ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯ್ದೆ ಅನ್ವಯ ರಾಜ್ಯ ಸರ್ಕಾರ ಬಲಿಷ್ಠ ಕಾನೂನು ರೂಪಿಸಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಒದಗಿಸಬೇಕು. ಎಲ್ಲಾ ಖಾಸಗಿ ಕಂಪನಿ ಹಾಗೂ ಸಂಸ್ಥೆಗಳಲ್ಲಿ ಸಿ ಮತ್ತು ಡಿ ದರ್ಜೆಯ ಶೇ.100ರಷ್ಟು ಹಾಗೂ ಇತರ ಹುದ್ದೆಗಳಲ್ಲಿ ಶೇ.80ರಷ್ಟು ಹುದ್ದೆಗಳನ್ನು ಕನ್ನಡಗರಿಗೆ ಮೀಸಲಿಡಬೇಕು ಎಂದು ಆಗ್ರಹಿಸಿದರು.

ನಿಯಮಾವಳಿ ಪಾಲಿಸದ ಕಂಪನಿಗಳಿಗೆ ನೀಡಿರುವ ಮಾನ್ಯತೆ ರದ್ದುಗೊಳಿಸಿ, ಅವುಗಳಿಗೆ ಭೂಮಿ ನೀಡಿದ್ದರೆ ವಾಪಸ್ ಪಡೆಯುವ ಮೂಲಕ ಎಲ್ಲಾ ಸವಲತ್ತುಗಳನ್ನು ಹಿಂದಕ್ಕೆ ಪಡೆಯುವ ಕಾಯ್ದೆ ರೂಪಿಸಬೇಕು. ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಹಂತ ಹಂತವಾಗಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬಳಿಕ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಮಂಜೇಶ್, ಪ್ರಧಾನ ಕಾರ್ಯದರ್ಶಿ ಅನಂತ್‌ನಾಗ್, ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಸುರೇಶ್ ನಾಯಕ, ಸಂಜಯ್, ಪ್ರಮೋದ್, ರಾಘವೇಂದ್ರ, ಭರತ್, ರಾಜೇಂದ್ರ, ಕೃಷ್ಣಮೂರ್ತಿ, ಮಹದೇವ ಸ್ವಾಮಿ, ಗುರುಪ್ರಸಾದ್, ಆನಂದ್, ಮಹದೇವ ಪ್ರಸಾದ್, ಜಗದೀಶ್ ಇತರರು ಭಾಗವಹಿಸಿದ್ದರು.

ರವಿಕುಮಾರ್ ಹೊನ್ನಹಳ್ಳಿ ಗ್ರಾಪಂ ಅಧ್ಯಕ್ಷ



ಹೊನ್ನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ಎನ್.ರವಿಕುಮಾರ್, ಉಪಾಧ್ಯಕ್ಷೆ ಮಂಜುಳಾ ಅವರನ್ನು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ ಅಭಿನಂದಿಸಿದರು.

ಚಾಮರಾಜನಗರ, ಜು.1–ತಾಲೂಕಿನ ಹೊನ್ನಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರ ಮತ್ತೆ ಬಿಜೆಪಿ ಬೆಂಬಲಿತ ಸದಸ್ಯರ ಪಾಲಾಗಿದ್ದು, ಅಧ್ಯಕ್ಷರಾಗಿ ಎನ್.ರವಿಕುಮಾರ್ ಹಾಗೂ ಉಪಾಧ್ಯಕ್ಷೆಯಾಗಿ ಮಂಜುಳಾ ಆಯ್ಕೆಯಾದರು.

ತೆರವಾಗಿದ್ದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಎನ್.ರವಿಕುಮಾರ್, ಕಾಂಗ್ರೆಸ್‌ನಿಂದ ಚನ್ನಪ್ಪನಪುರ ಪ್ರಸಾದ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ಮಂಜುಳಾ ಮತ್ತು ಕಾಂಗ್ರೆಸ್‌ನಿಂದ ಮಂಗಳಮ್ಮ ಸ್ಪರ್ಧಿಸಿದ್ದರು.

ಗ್ರಾಪಂನಲ್ಲಿ ಒಟ್ಟು 14 ಸದಸ್ಯರಿದ್ದು, ಚುನಾವಣೆಯಲ್ಲಿ ಇಬ್ಬರು ಸದಸ್ಯರು ಗೈರಾಗಿದ್ದರು. ಎನ್.ರವಿಕುಮಾರ್ ಹಾಗೂ ಮಂಜುಳಾ ತಲಾ 7 ಮತ ಪಡೆದು ಅಧ್ಯಕ್ಷ-ಉಪಾಧ್ಯಕ್ಷೆಯಾಗಿ ಆಯ್ಕೆಯಾದರೆ, ಪ್ರಸಾದ್ ಮತ್ತು ಮಂಗಳಮ್ಮ ಐದು ಮತ ಪಡೆದು ಪರಾಭವಗೊಂಡರು.

ಚುನಾವಣಾಧಿಕಾರಿ ವಿಶ್ವನಾಥ್ ಕಾರ್ಯನಿರ್ವಹಿಸಿದರು. ಗ್ರಾಪಂ ಸದಸ್ಯರಾದ ಅಮೃತಾ, ಶಿವಮ್ಮ, ದೇವಶೆಟ್ಟಿ, ಸುಂದ್ರಮ್ಮ, ಶಂಕರಗುರು, ಕಾಂತರಾಜು, ಮಹದೇವಮ್ಮ, ಮುಖಂಡರಾದ ಲೋಕೇಶ್, ಸುರೇಶ್, ತಾಪಂ ಮಾಜಿ ಸದಸ್ಯ ಚಿಕ್ಕಮಾದೇಗೌಡ, ಮಹೇಶ್, ಮಲ್ಲೇಶ್, ರವೀಂದ್ರ, ಚನ್ನಪ್ಪನಪುರ ಸಂಪತ್ತು, ಪಿಡಿಓ ಲಕ್ಷ್ಮಣ ನಾಯಕ್ ಉಪಸ್ಥಿತರಿದ್ದರು.

ಇದೇ ವೇಳೆ ಬಿಜೆಪಿ ಬೆಂಬಲಿಗರು ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ನೇತೃತ್ವದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಸಂಘದ ಉಳಿವಿಗೆ ಎಲ್ಲರೂ ಸಂಘಟಿತರಾಗಿ



ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಸಂಘ ಸದೃಢವಾಗಿದ್ದರೆ ಮಾತ್ರ ಸರ್ಕಾರಿ ವ್ಯಾಪ್ತಿಯಲ್ಲಿ ನಿಗಮ ಉಳಿಯಲಿದೆ ಎಂದು ಸಂಘದ ನೂತನ ಉಪಾಧ್ಯಕ್ಷ ಎಸ್.ಮಹೇಶ್ ಹೇಳಿದರು.

ನಗರದ ಸಂಘದ ಕಚೇರಿ ಎದುರು ಚಾಮರಾಜನಗರ ವಿಭಾಗ ನೌಕರರ ಸಂಘದ ಸ್ಥಳೀಯ ಸಮಿತಿ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಂಘ ಉಳಿಯಬೇಕಾದರೆ ಎಲ್ಲರೂ ಸಂಘಟಿತರಾಗಬೇಕು. ಆಗ ಮಾತ್ರ ಸಂಘ ಸದೃಢವಾಗಿರುತ್ತದೆ. ಸಂಘ ಸದೃಢವಾಗಿದ್ದರೆ ಮಾತ್ರ ಸರ್ಕಾರಿ ವ್ಯಾಪ್ತಿಯಲ್ಲಿ ಇಲಾಖೆ ಉಳಿಯುತ್ತದೆ ಆಗ ಮಾತ್ರ ನಾವೆಲ್ಲರೂ ನೌಕರರಾಗಿ ಉಳಿದುಕೊಳ್ಳಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಸ್ಥಳೀಯ ಸಮಿತಿ ಅಧ್ಯಕ್ಷ ಮುರಳಿ ಕೃಷ್ಣಸ್ವಾಮಿ, ಕಾರ್ಯದರ್ಶಿ ಸಿದ್ದರಾಜಪ್ಪ, ಉಪಾಧ್ಯಕ್ಷ ಮಂಜುನಾಥ್, ಖಜಾಂಚಿ ಎಸ್.ರಮೇಶ್, ಸಹ ಕಾರ್ಯದರ್ಶಿ ಎಸ್.ಮಹೇಶ್, ನಿರ್ದೇಶಕರಾದ ನಾಗರಾಜು, ರಾಜು, ಶಿವಪ್ಪ ಸೋಮಶೇಖರ್, ಗುಂಡ್ಲುಪೇಟೆ ಪ್ರಾಥಮಿಕ ಸಮಿತಿ ಅಧ್ಯಕ್ಷ ಶರಣಬಸಪ್ಪ ಚೆನ್ನಾಪುರ, ನಿರ್ದೇಶಕರಾದ ಪ್ರಕಾಶ್, ಸೋಮಣ್ಣ, ಅರುಣ್, ಹೂಗಾರ್, ಹರದನಹಳ್ಳಿ ಪ್ರಾಥಮಿಕ ಸಮಿತಿ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಚನ್ನಂಜಕುಮಾರ್, ನಿರ್ದೇಶಕರಾದ ಜಗದೀಶ್, ಜಯರಾಮ್, ಸಿದ್ದರಾಜು, ಮಣಿನಾಯಕ, ಸಿದ್ದರಾಜು ಮತ್ತಿತರರು ಹಾಜರಿದ್ದರು.



ರೋಟರಿ ಸಿಲ್ಕ್ ಸಿಟಿ ಪದವಿ ಪ್ರದಾನ...

ಚಾಮರಾಜನಗರದಲ್ಲಿ ನಡೆದ ರೋಟರಿ ಸಿಲ್ಕ್ ಸಿಟಿ ಕಾರ್ಯಕ್ರಮದಲ್ಲಿ ಪದವಿ ಪ್ರದಾನ ಮಾಡಲಾಯಿತು. ರೋಟರಿ ನಿಯೋಜಿತ ಜಿಲ್ಲಾ ಗವರ್ನರ್ ರೋ.ಸತೀಶ್ ಬೋಲಾರ್, ಸಹಾಯಕ ಗವರ್ನರ್ ಗಿರೀಶ್ ಜೆಡೆ, ವಲಯ ಪ್ರತಿನಿಧಿ ಎಸ್.ಸುರೇಶ್, ಕಾರ್ಯದರ್ಶಿ ಎಚ್.ಪಿ.ಶಮಿತ್ ಕುಮಾರ್, ನಿಕಟಪೂರ್ವ ಅಧ್ಯಕ್ಷ ವೈ.ಅಕ್ಷಯ್, ಪದಾಧಿಕಾರಿಗಳು ಇದ್ದರು.

ಬೇಗೂರಲ್ಲಿ ಬಸವ ಜಯಂತಿ ಆಚರಣೆ



ಬೇಗೂರಿನಲ್ಲಿ ಬಸವೇಶ್ವರ ಸೇವಾ ಸಮಿತಿ ವತಿಯಿಂದ ಬಸವ ಜಯಂತಿ ನಡೆಯಿತು.

ಬೇಗೂರು, ಜು.1– ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಬಸವೇಶ್ವರ ಸೇವಾ ಸಮಿತಿ ವತಿಯಿಂದ ವಿಶ್ವಗುರು ಬಸವ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಸೋಮಹಳ್ಳಿ ಶಿಲಾ ಮಠಾಧ್ಯಕ್ಷರಾದ ಶ್ರೀ ಸಿದ್ದಮಲ್ಲ ಸ್ವಾಮೀಜಿ ಬಸವೇಶ್ವರರ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು. ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್ ಮೆರವಣಿಗೆಗೆ ಚಾಲನೆ ನೀಡಿದರು. ಮಹದೇಶ್ವರಸ್ವಾಮಿ ದೇವಸ್ಥಾನದಿಂದ ವೀರಗಾಸೆ, ಡೊಳ್ಳುಕುಣಿತ, ಗಾರುಡಿ ಗೊಂಬೆ, ತಮಟೆ, ವಾದ್ಯ ಮೇಳ, ಕೇರಳದ ಚಂಡೆಮೇಳ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಗಂಗಾಧರೇಶ್ವರ ಕಲ್ಯಾಣ ಮಂಟಪದಲ್ಲಿ ಪ್ರಸಾದ ವಿನಿಯೋಗಿಸಲಾಯಿತು.

ಕಾರ್ಯಕ್ರಮದಲ್ಲಿ ಮಾದಾಪಟ್ಟಣ ಮಠಾಧ್ಯಕ್ಷರಾದ ಶ್ರೀ ತೋಂಟದಾರ್ಯಸ್ವಾಮೀಜಿ, ಭೋಗಯ್ಯನಹುಂಡಿ ಮಠಾಧ್ಯಕ್ಷ ಶ್ರೀ ನಂಜುಂಡ ಸ್ವಾಮೀಜಿ, ಕೊಡಗಾಪುರ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಅರ್ಹ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.15 ಕೊನೆ ದಿನ. ವೆಬ್‌ಸೈಟ್ http://nationalawardsto teachers. edutation.gov.inನಲ್ಲಿ ಮಾಹಿತಿ ಪಡೆಯಬಹುದು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಮುಡಾ ಹಗರಣವನ್ನು ಸಿಬಿಐ, ಎಸ್‌ಐಟಿಗೇಕೆ ವಹಿಸಲಿಲ್ಲ...!

ಮೈಸೂರು, ಜು.1(ಬಿಎಲ್‌ಯು)– ವಾಲ್ಮೀಕಿ ನಿಗಮದ 187 ಕೋಟಿ ರೂ. ಹಗರಣದ ಬಗ್ಗೆ ರಾಜ್ಯ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ. ಆದರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾವಿರಾರು ಕೋಟಿಯ ಭಾರೀ ಹಗರಣದ ಬಗ್ಗೆ ಸರ್ಕಾರ ಇಬ್ಬರು ಐಎಎಸ್ ಅಧಿಕಾರಿಗಳು ಸೇರಿದಂತೆ ನಾಲ್ವರು ಅಧಿಕಾರಿಗಳ ಸಮಿತಿ ರಚನೆ ಮಾಡಿ ಕೈ ತೊಳೆದುಕೊಂಡಿದೆ.

ಈಗ ಸರ್ಕಾರ ರಚನೆ ಮಾಡಿರುವ ಸಮಿತಿ ಯಾವ ವಿಚಾರವಾಗಿ ತನಿಖೆ ಮಾಡಬೇಕೆಂದು ಸರ್ಕಾರ ಸ್ಪಷ್ಟಪಡಿಸಿದೆ. ಅಲ್ಲದೆ ಭಾರೀ ಹಗರಣ ನಡೆದಿರುವ ಬಗ್ಗೆ ಸರ್ಕಾರವೇ ಉಲ್ಲೇಖಿಸಿದೆ. ಆದರೂ ಈ ಪ್ರಕರಣವನ್ನು ಎಸ್‌ಐಟಿ ಗೂ ನೀಡಿಲ್ಲ, ಸಿಬಿಐ ಗೂ ನೀಡಿಲ್ಲ. ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪ ಮಾಡಿರುವಂತೆ ಈ ಹಗರಣ ದಲ್ಲಿ ಪ್ರಭಾವಿಗಳಿದ್ದಾರೆ. ಆದ ಕಾರಣ ಸರ್ಕಾರ ಅವರನ್ನೆಲ್ಲಾ ರಕ್ಷಣೆ ಮಾಡಲು ಎಸ್‌ಐಟಿ ಅಥವಾ ಸಿಬಿಐ ತನಿಖೆಗೆ ವಹಿಸಿಲ್ಲ ಎಂಬ ಮಾತುಗಳು ಕೇಳಿ ಬಂದಿದೆ.

ಇಂತಹ ಗಂಭೀರ ಆರೋಪ ಬಂದಾಗ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಆದರೆ ಹಗರಣ ಸಂಬಂಧ ಮುಡಾ ಆಯುಕ್ತ ದಿನೇಶ್ ಕುಮಾರ್ ಸೇರಿದಂತೆ ಹಲವರನ್ನು ವರ್ಗಾವಣೆ ಮಾಡಿ ಅವರ ರಕ್ಷಣೆಗೆ ನಿಂತಿದೆ ಎಂಬ ಆರೋಪಗಳು ಕೇಳಿ ಬಂದಿದೆ. ಹಿರಿಯ ಅಧಿಕಾರಿಗಳು ಹಾಗೂ ಪ್ರಭಾವಿ ರಾಜಕಾರಣಿಗಳು ಈ ಹಗರಣದಲ್ಲಿ ಭಾಗಿಯಾಗಿರುವ ಕಾರಣ ಉಳಿದ ಪ್ರಕರಣಗಳಂತೆ ಇದು ಕೂಡ ಹಳ್ಳ ಹಿಡಿಯುವುದೇ ಎಂಬ ಅನುಮಾನಗಳು ಕಾಡಿದೆ.

ನನ್ನ ಮೇಲೇಕೆ ಆರೋಪ...!?

ಮೈಸೂರು, ಜು.1(ಬಿಎಲ್‌ಯು)– ನನ್ನ ಮೇಲೇಕೆ ಆರೋಪ ಬರುತ್ತೆ, ಈ ಹಗರಣಕ್ಕೂ ನನಗೂ ಏನು ಸಂಬಂಧ. ಇದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರ ಆಕ್ರೋಶದ ಪ್ರಶ್ನೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ದಲ್ಲಿ ನಡೆದಿರುವ ಸಾವಿರಾರು ಕೋಟಿ ಬ್ರಹ್ಮಾಂಡ ಭ್ರಷ್ಟಾಚಾರದ ಮಾಹಿತಿ ಪಡೆಯಲು ದಿಢೀರ್ ಮುಡಾಗೆ ಆಗಮಿಸಿದ್ದ ವೇಳೆ 'ಮೈಸೂರು ಮಿತ್ರ'ನ ಈ ಪ್ರಶ್ನೆಗೆ ಭೈರತಿ ಸುರೇಶ್ ಕೋಪೋದ್ರಿಕ್ತರಾದರು. ಮುಡಾದಲ್ಲಿ ನಡೆದಿರುವ ಹಗರಣಗಳು ನಿಮ್ಮತ್ತ ಬೊಟ್ಟು ಮಾಡುತ್ತಿವೆ. ನೀವೇ ಇದರಲ್ಲಿ ಭಾಗಿಯಾಗಿದ್ದೀರಾ ಎಂಬ ಆರೋಪವಿದೆಯಲ್ಲ ಎಂಬ ಪ್ರಶ್ನೆಗೆ ಕೆಂಡಾಮಂಡಲರಾದ ಭೈರತಿ ಸುರೇಶ್, ನನ್ನ ಮೇಲೇಕೆ ಆರೋಪ ಬರುತ್ತೆ, ಈ ಹಗರಣಕ್ಕೂ ನನಗೂ ಏನು ಸಂಬಂಧ ಎಂದು ಅಚ್ಚರಿಯಿಂದ ಪ್ರಶ್ನಿಸಿದರು.

ಈಗ ಅಧಿಕಾರಿಗಳ ಸಭೆ ಕರೆದಿದ್ದೇನೆ. ಖುದ್ದು ನಾನೇ ತನಿಖೆ ಮಾಡುತ್ತೇನೆ.

ಒಂದನೇ ಪುಟದಿಂದ

ಚಾಲಕರ ಮೇಲೆ ಎಐ ಕ್ಯಾಮರಾ ಕಣ್ಣು!

ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಎನ್. ನಂದಿನಿ ತಿಳಿಸಿದ್ದಾರೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಕ್ಯಾಮರಾದಲ್ಲಿ ದಾಖಲಾದ ಮಾಹಿತಿಯನ್ನು ತಕ್ಷಣವೇ ಸದರಿ ವಾಹನದ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುವುದು. ಜೊತೆಗೆ ವಾಹನದ ವಾರಸುದಾರರ ವಿಳಾಸಕ್ಕೆ ಚಲನ್ ಸಹ ರವಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನದ ಮಾಲೀಕರು ಅಥವಾ ಚಾಲಕರು ಆನ್‌ಲೈನ್ ವೆಬ್‌ಸೈಟ್ https://payfine.mchallan.com: 7271 ನಲ್ಲಿ ದಂಡ ಪಾವತಿಸಬಹುದು. ಇಲ್ಲವೆಂದರೆ ಹತ್ತಿರದ ಪೊಲೀಸ್ ಠಾಣೆಯಲ್ಲಿ ಸದರಿ ದಂಡದ ಮೊತ್ತವನ್ನು ಪಾವತಿ ಮಾಡಬಹುದು. ಜೊತೆಗೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿರುವ ಇಂಟೆಲಿಜೆನ್ಸ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲಿ ಪಾವತಿಸಬಹುದು ಎಂದು ಡಾ.ನಂದಿನಿ ಮಾಹಿತಿ ನೀಡಿದ್ದಾರೆ. ಏಳು ದಿನದೊಳಗೆ ದಂಡ ಪಾವತಿ ಮಾಡಬೇಕು. ಇಲ್ಲವೆಂದರೆ ವಾಹನ ಸವಾರರ ವಿರುದ್ಧ ಕೋರ್ಟ್‌ನಲ್ಲಿ ಚಾರ್ಜ್‌ಶೀಟ್ ಸಲ್ಲಿಸಲಾಗುವುದು ಎಂದು ಎಚ್ಚರಿಸಿದರು. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹೆಜ್ಜೆ ಹೆಜ್ಜೆಗೂ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ಸಾವಿರಾರು ರೂಪಾಯಿ ದಂಡ ತೆತ್ತಬೇಕಾಗುತ್ತದೆ. ಇದರಿಂದ ಅಲ್ಲಿನ ಬಹಳಷ್ಟು ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುತ್ತಾರೆ. ಹೆಚ್ಚಾಗಿ ಸಿಗ್ನಲ್ ಜಂಪ್ ಮಾಡುವುದಿಲ್ಲ. ಇದರಿಂದ ಮೈಸೂರಿನಷ್ಟು ಬೆಂಗಳೂರಿನಲ್ಲಿ ಸಂಚಾರ ನಿಯಮ ಉಲ್ಲಂಘನೆ ಆಗುವುದಿಲ್ಲ. ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರು ಮಾಡಿದ ತಪ್ಪಿಗೆ ಆಗಾಗ್ಗೆ ದಂಡ ಪಾವತಿ ಮಾಡುತ್ತಾರೆ.

ಆದರೆ ಮೈಸೂರಿನಲ್ಲಿ ಹೆಚ್ಚಿನ ಕ್ಯಾಮರಾ ಅಳವಡಿಕೆ ಇಲ್ಲದ ಕಾರಣ ವಾಹನ ಸವಾರರು ಬೇಕಾಬಿಟ್ಟಿ ವಾಹನ ಚಾಲನೆ ಮಾಡುತ್ತಿದ್ದರು. ಆದರೆ ಇನ್ನು ಮುಂದೆ ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ದಂಡ ಪಾವತಿ ಮಾಡಬೇಕಿದ್ದು, ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಪತ್ನಿಯನ್ನು ಇರಿದು ಕೊಂದ ಕಾನ್‌ಸ್ಟೇಬಲ್

ಬಂದಿದ್ದಾರೆ. ಪತ್ನಿ ತನ್ನ ವಿರುದ್ಧ ದೂರು ನೀಡಲು ಬರುತ್ತಿರುವುದನ್ನು ಗಮನಿಸಿದ ಲೋಕ ನಾಥ್ ಎಸ್ಪಿ ಕಚೇರಿ ಆವರಣದಲ್ಲೇ ಮಮತಾ ಎದೆಗೆ ಚೂರಿಯಿಂದ ಇರಿದಿದ್ದಾನೆ ಕೂಡಲೇ ಅಲ್ಲಿದ್ದ ಮಂದಿ ಮಮತಾ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮಮತಾ ಮೃತಪಟ್ಟಿದ್ದಾರೆ. ಪತ್ನಿಯನ್ನು ಹತ್ಯೆ ಮಾಡಿದ ನಂತರ ಪರಾರಿಯಾಗಿದ್ದ ಲೋಕನಾಥ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಪರಸ್ಪರ ಬಡಿದಾಡಿಕೊಂಡಿದ್ದ ದಂಪತಿ: ಲೋಕನಾಥ್ ಹಾಗೂ ಮಮತಾ ಇಬ್ಬರಿಗೂ 17 ವರ್ಷಗಳ ಹಿಂದೆ ಮದುವೆಯಾಗಿತ್ತು. ದಂಪತಿಗೆ ಇಬ್ಬರು ಮಕ್ಕಳು ಕೂಡ ಇದ್ದಾರೆ. ಕಳೆದ ನಾಲ್ಕೈದು ದಿನದಿಂದಲೂ ಇಬ್ಬರ ನಡುವೆ ಕೌಟುಂಬಿಕ ಕಲಹ ಏರ್ಪಟ್ಟಿತ್ತು. ಸಂಬಂಧಿಕರು ಅವರ ನಡುವೆ ಸಂಧಾನ ಮಾತುಕತೆ ನಡೆಸಿದ್ದರು. ಆದರೆ ಅದು ವಿಫಲವಾಗಿತ್ತು.

ಇಂದು ಕೂಡ ದಂಪತಿ ಭೂ ವಿವಾದ ಸಂಬಂಧ ಪರಸ್ಪರ ಜಗಳವಾಡಿದ್ದು ಅದು ವಿಕೋಪಕ್ಕೆ ತಿರುಗಿ, ಇಬ್ಬರೂ ಪರಸ್ಪರ ಬಡಿದಾಡಿದ್ದಾರೆ. ಹೀಗಾಗಿ ಪತಿ ಲೋಕನಾಥ್ ವಿರುದ್ಧ ಎಸ್‌ಪಿಗೆ ದೂರು ನೀಡಲು ಮಮತಾ ಮುಂದಾಗಿದ್ದರು. ಈ ವಿಚಾರ ತಿಳಿದ ಲೋಕನಾಥ್ ಆಕೆಯನ್ನು ಮನೆಯಿಂದ ಮೋಟಾರ್ ಸೈಕಲ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ.

ಪತ್ನಿ ಎಸ್‌ಪಿ ಕಚೇರಿ ಆವರಣ ಪ್ರವೇಶಿಸುತ್ತಿದ್ದಂತೆಯೇ ಅಕೆಯನ್ನು ಮನಸ್ಸೋಇಚ್ಛೆ ಇರಿದಿದ್ದಾನೆ. ಈ ವೇಳೆ ಮಮತಾರ ಹೊಟ್ಟೆ ಮತ್ತು ಎದೆಗೆ ತೀವ್ರತರದ ಗಾಯವಾಗಿದೆ. ಗಂಭೀರವಾಗಿ ಗಾಯಗೊಂಡ ಮಮತಾ ಅವರನ್ನು ಎಸ್ಪಿ ಕಚೇರಿ ಸಮೀಪವಿರುವ ಹಿಮ್ಸ್ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಮಾರ್ಗ ಮಧ್ಯೆ ಆಕೆ ಕೊನೆಯುಸಿರೆಳೆದಿದ್ದಾರೆ. ಇರಿತದ ಬಳಿಕ ಲೋಕನಾಥ್ ತನ್ನ ಮೋಟಾರ್ ಸೈಕಲ್‌ನಲ್ಲಿ ಪರಾರಿಯಾಗಿದ್ದ. ಕೂಡಲೇ ಕಾರ್ಯಾಚರಣೆ ನಡೆಸಿದ ಪೊಲೀಸರು ಆತನನ್ನು ಬಂಧಿಸಿದ್ದಾರೆ ಎಂದು ಎಸ್ಪಿ ಮಹಮ್ಮದ್ ಸುಜೀತಾ ತಿಳಿಸಿದ್ದಾರೆ.

ಅಧ್ಯಕ್ಷ ಗಾದಿಯಿಂದ ಇಳಿಯುವ ಇಂಗಿತ

ಹಿಂದಿರುಗಿದ ನಂತರ ಶಿವಕುಮಾರ್ ಅವರು ಖರ್ಗೆ ಅವರನ್ನು ಭೇಟಿ ಮಾಡಿ, ಕೆಲವು ಸಚಿವರ ಬಹಿ ರಂಗ ಹೇಳಿಕೆ, ಅದಕ್ಕೆ ಪ್ರತಿಯಾಗಿ ಪಕ್ಷದ ಶಾಸಕರು ನೀಡುತ್ತಿರುವ ಹೇಳಿಕೆಗಳನ್ನೂ ಅವರ ಗಮನಕ್ಕೆ ತಂದಿದ್ದಾರೆ. ಇಂತಹ ಹೇಳಿಕೆಗಳಿಂದ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಮುಜುಗರವಾಗಿದೆ ಎಂದಿದ್ದಲ್ಲದೆ, ರಾಜ್ಯದಲ್ಲಿ ಜರುಗುತ್ತಿರುವ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಸಂಬಂಧಿಸಿದಂತೆಯೂ ಸಮಾಲೋಚನೆ ಮಾಡಿದ್ದಾರೆ. ಮಾತುಕತೆ ಸಂದರ್ಭದಲ್ಲೇ ಕೆಪಿಸಿಸಿ ಅಧ್ಯಕ್ಷ ಗಾದಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ವೇಳೆ ನಡೆದ ಒಪ್ಪಂದದಂತೆ ನಡೆದುಕೊಳ್ಳು ವುದಾಗಿ ತಿಳಿಸಿದ್ದಾರೆ. ಲೋಕಸಭಾ ಚುನಾವಣೆ ಮುಗಿಯುವವರೆಗೂ ಉಪಮುಖ್ಯಮಂತ್ರಿ ಹುದ್ದೆ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಗಾದಿಯಲ್ಲೂ ಶಿವಕುಮಾರ್ ಮುಂದುವರೆಯಲಿದ್ದಾರೆ ಎಂದು ಅಂದು ಎಐಸಿಸಿ ಪ್ರಕಟಿಸಿತ್ತು. ಚುನಾವಣೆ ಮುಗಿಯುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷರ ಗಾದಿ ಬದಲಾವಣೆಗೆ ಸಿದ್ದರಾಮಯ್ಯ ಬಣಕ್ಕೆ ಸೇರಿದ ಕೆಲವು ಸಚಿವರು ಮತ್ತು ಶಾಸಕರು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಒತ್ತಡ ಹೇರುತ್ತಿದ್ದಾರೆ.

ಮತ್ತೊಂದೆಡೆ ಮುಖ್ಯಮಂತ್ರಿ ಅವರು ರಾಹುಲ್ ಗಾಂಧಿ ಭೇಟಿ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಬಂದಿರುವ ಒತ್ತಡ ಹಾಗೂ ಸಂಪುಟದ ಕೆಲವು ಸಚಿವರ ಖಾತೆ ಬದಲಾವಣೆ ಬಗ್ಗೆ ತಮ್ಮ ನಾಯಕರ ಮುಂದಿಟ್ಟಿದ್ದರು.

ಇದಕ್ಕೆ ಸಂಬಂಧಿಸಿದಂತೆ ಮತ್ತಷ್ಟು ವಿವರಣೆ ಪಡೆದ ರಾಹುಲ್ ಗಾಂಧಿ, ಕರ್ನಾಟಕದಲ್ಲಿ ನಾವು ನಿರೀಕ್ಷಿಸಿದ ಫಲಿತಾಂಶ ಲೋಕಸಭಾ ಚುನಾವಣೆಯಲ್ಲಿ ಬಂದಿಲ್ಲ ಎಂದು ಮತ್ತೊಮ್ಮೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸೀಟು ಹಂಚಿಕೆಯಲ್ಲಿ ನಾವು ಕರ್ನಾಟಕದ ಸಚಿವರು ಮತ್ತು ಮುಖಂಡರುಗಳಿಗೇ ಬಿಟ್ಟುಕೊಟ್ಟಿದ್ದೆವು, ಆದರೂ ಈ ಫಲಿತಾಂಶ ನಿರೀಕ್ಷಿಸಿರಲಿಲ್ಲ. ಇಬ್ಬರು ಬಲಾಢ್ಯರು ನಾಯಕತ್ವ ವಹಿಸಿದ್ದರೂ ಎರಡಂಕಿ ದಾಟಿಲ್ಲ, ಸೋಲಿಗೆ ಕಾರಣ ಏನೆಂಬ ಬಗ್ಗೆ ಈಗಾಗಲೇ ನೇಮಕಗೊಂಡಿರುವ ಮಧುಸೂದನ್ ಮಿಸ್ತ್ರಿ ನೇತೃತ್ವದ ಸಮಿತಿ ವರದಿ ಬರಲಿ ನಂತರ ಸರ್ಕಾರ ಮತ್ತು ಪಕ್ಷದಲ್ಲಿ ಕೆಲವು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಲು ಪಕ್ಷ ನಿರ್ದೇಶನ ನೀಡಲಿದೆ ಎಂದು ಹೇಳಿ ಕಳುಹಿಸಿದ್ದಾರೆ.

ಮತ್ತೆರಡು ದಿನ ಸಿಐಡಿ ಪೊಲೀಸ್ ಕಸ್ಟಡಿಗೆ!

ಮತ್ತೆ ಐದು ದಿನ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು. ಯುವಕನೊಬ್ಬನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ಅರೋಪದಡಿ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ನಂತರ ಜೂನ್ 22ರಂದು ಸೂರಜ್ ರೇವಣ್ಣ ಅವರನ್ನು ಪೊಲೀಸರು ಬಂಧಿಸಿದ್ದರು. ನಂತರ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ 8 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಲಾಗಿತ್ತು. ಇಂದು ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಕೋರ್ಟ್‌ಗೆ ಸೂರಜ್ ಅವರನ್ನು ಹಾಜರುಪಡಿಸಲಾಗಿತ್ತು. ಹೀಗಾಗಿ ಪ್ರಕರಣದ ವಿಚಾರಣೆ ನಡೆಸಿರುವ ಕೋರ್ಟ್ ಸೂರಜ್‌ಗೆ ಜುಲೈ 3ರವರೆಗೆ ಕಸ್ಟಡಿ ವಿಸ್ತರಿಸಿದೆ.

ಅಪರಾಧಗಳ ನಿಯಂತ್ರಣಕ್ಕೆ ಹೊಸ ಕ್ರಿಮಿನಲ್ ಕಾನೂನುಗಳು ಸಹಕಾರಿ

ಕೆಪಿಎನಲ್ಲಿ ಪೊಲೀಸ್ ಅಧಿಕಾರಿಗಳು, ವಕೀಲರು ಆಯೋಜಿಸಿದ್ದ ಅರಿವು ಕಾರ್ಯಾಗಾರದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್ ಅಭಿಮತ





ಕರ್ನಾಟಕ ಪೊಲೀಸ್ ಅಕಾಡೆಮಿ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಹೊಸ ಕ್ರಿಮಿನಲ್ ಕಾನೂನುಗಳ ಕುರಿತ ಜಾಗೃತಿ ಕಾರ್ಯಾಗಾರವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. (ಎಡದಿಂದ) ಕೆಪಿಎ ಉಪನಿರ್ದೇಶಕ ಎನ್. ನಿರಂಜನರಾಜ್ ಅರಸ್, ಹಿರಿಯ ಕಾನೂನು ಅಧಿಕಾರಿ ರಘು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕೆಪಿಎ ನಿರ್ದೇಶಕಿ ಎಂ.ಎಸ್. ಗೀತಾ, ರೀಜನಲ್ ಫೋರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ ಡೆಪ್ಯುಟಿ ಡೈರೆಕ್ಟರ್ ಚಂದ್ರಶೇಖರ್, ಕೇಂದ್ರ ಕಾರಾಗೃಹದ ಚೀಫ್ ಸೂಪರಿಂಟೆಂಡೆಂಟ್ ರಮೇಶ ಹಾಗೂ ಜೆಎಸ್‌ಎಸ್ ಕಾನೂನು ಕಾಲೇಜು ಸಿಇಓ ಪ್ರೊ. ಕೆ.ಎಸ್. ಸುರೇಶ್ ಅವರಿದ್ದಾರೆ. ಬಲಚಿತ್ರದಲ್ಲಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಅಧಿಕಾರಿಗಳನ್ನು ಕಾಣಬಹುದು.

ಮೈಸೂರು, ಜು. 1(ಆರ್‌ಕೆ)– ಇಂದಿನಿಂದ ದೇಶಾದ್ಯಂತ ಜಾರಿಗೆ ಬಂದಿರುವ ಮೂರು ಹೊಸ ಕ್ರಿಮಿನಲ್ ಕಾನೂನುಗಳ ಕುರಿತು ಇಂದು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ)ಯಲ್ಲಿ ಅರಿವು ಕಾರ್ಯಾಗಾರ ನಡೆಯಿತು.

ಕೆಪಿಎ ಮತ್ತು ಪೊಲೀಸ್ ತರಬೇತಿ ಶಾಲೆ ವತಿಯಿಂದ ಏರ್ಪಡಿಸಿದ್ದ ಕಾರ್ಯಾಗಾರವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ನಂತರ ಪೊಲೀಸ್ ಅಧಿಕಾರಿಗಳು ಹಾಗೂ ವಕೀಲರನ್ನುದ್ದೇಶಿಸಿ ಮಾತನಾಡಿದ ಅವರು, ಇಂದಿನಿಂದ ಹೊಸ ಕ್ರಿಮಿನಲ್ ಕಾನೂನುಗಳು ಜಾರಿಗೆ ಬಂದಿದ್ದು, ಜುಲೈ 1ರ ನಂತರ ದಾಖಲಾಗುವ ಎಫ್‌ಐಆರ್‌ಗಳಿಗೆ ಮಾತ್ರ ಅನ್ವಯಿಸಲಿದ್ದು, ಈ ಹಿಂದೆ ದಾಖಲಾಗಿ ತನಿಖಾ ಹಂತ ಹಾಗೂ ವಿಚಾರಣೆ ಪ್ರಗತಿಯಲ್ಲಿರುವ ಪ್ರಕರಣಗಳಿಗೆ ಹಳೇ ಕಾನೂನುಗಳನ್ನೇ ಅನ್ವಯಪಡಿಸಬೇಕು ಎಂದರು.

ಐಪಿಸಿ (ಭಾರತೀಯ ದಂಡ ಸಂಹಿತೆ) ಬದಲಾಗಿ 'ಭಾರತೀಯ ನ್ಯಾಯ ಸಂಹಿತೆ', ಸಿಆರ್‌ಪಿಸಿ (ಕ್ರಿಮಿನಲ್ ಪ್ರೊಸೀಜರ್ ಕೋಡ್) ಬದಲಿಗೆ 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ' ಹಾಗೂ ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ ಬದಲಿಗೆ 'ಭಾರತೀಯ ಸಾಕ್ಷ್ಯ ಅಧಿನಿಯಮ' ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ಜಾರಿಗೊಳಿಸಲಾಗಿದ್ದು, ಅಪರಾಧ ಪ್ರಕರಣಗಳ ನಿಗ್ರಹ, ತನಿಖೆ, ಸಾಕ್ಷ್ಯ ಪರಿಗಣನೆ, ದಂಡ, ಶಿಕ್ಷೆ ವಿಧಿಸುವ ಪ್ರಕ್ರಿಯೆಗೆ ಸ್ವಲ್ಪ ಮಾರ್ಪಾಡು ಮಾಡಿರುವುದರಿಂದ ಪೊಲೀಸ್ ಅಧಿಕಾರಿಗಳು, ನ್ಯಾಯಾಧೀಶರು, ನ್ಯಾಯವಾದಿಗಳು ಹಾಗೂ ಪ್ರತಿಯೊಬ್ಬ ಸಾರ್ವಜನಿಕನೂ ಈ ಹೊಸ ಕಾನೂನುಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಅವರು ತಿಳಿಸಿದರು.

ಹಲವು ದಶಕಗಳ ಹಿಂದೆ ಮಾಡಿದ್ದ ಕಾನೂನುಗಳನ್ನೇ ಈಗಲೂ ಮುಂದುವರಿಸಲು ಸಾಧ್ಯವಿಲ್ಲ. ಏಕೆಂದರೆ, ಸಮಾಜ ಬದಲಾದಂತೆ, ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿಯಾದಂತೆ ಜನರ ಮನಸ್ಥಿತಿ, ಅಪರಾಧಗಳ ಸ್ವರೂಪ, ತನಿಖಾ ವಿಧಾನಗಳೂ ಸಹ ಬದಲಾಗಿವೆ. ಸೈಬರ್ ಸ್ವರೂಪದ ಅಪರಾಧಗಳು ಹೆಚ್ಚಾಗಿರುವುದರಿಂದ ಕಾನೂನುಗಳನ್ನೂ ಬದಲಿಸಲಾಗಿದೆ ಎಂದು ನ್ಯಾಯಾಧೀಶರು ತಿಳಿಸಿದರು.

ನ್ಯಾಯಯುತ ತನಿಖೆ, ವಿಚಾರಣೆ, ಸಾಕ್ಷ್ಯ ಸಂಗ್ರಹ, ದೋಷರೋಪಣಾ ಪಟ್ಟಿ ಸಲ್ಲಿಕೆ, ವಿಚಾರಣೆಯನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ, ನಾವು ಹೊಸ ಕಾನೂನುಗಳಡಿ ಕೆಲಸ ಮಾಡಬೇಕು, ಆಗ ಮಾತ್ರ ನಿಜವಾದ ಅಪರಾಧಿಗೆ ಶಿಕ್ಷೆ ವಿಧಿಸಲು ಸಾಧ್ಯ ಹಾಗೂ ನಿರಪರಾಧಿಗಳಿಗೆ ಶಿಕ್ಷೆಯಾಗುವುದನ್ನು ತಪ್ಪಿಸಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಹೊಸ ಕಾನೂನುಗಳ ಬಗ್ಗೆ ಸಾರ್ವಜನಿಕರಿಗೆ ನಿರಂತರವಾಗಿ ಅರಿವು ಮೂಡಿಸಬೇಕು ಎಂದ ಅವರು, ಒಂದೇ ಬಾರಿಗೆ ಅವುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲವಾದರೂ, ನಿರಂತರ ಅಧ್ಯಯನ ನಡೆಸಿ ನಿಧಾನವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ ಜೆಎಸ್‌ಎಸ್ ಕಾನೂನು ಕಾಲೇಜು ಸಿಇಓ ಪ್ರೊ. ಕೆ.ಎಸ್. ಸುರೇಶ್ ಹಾಗೂ ಕೆಪಿಎ ಅಡಿಷನಲ್ ಡೈರೆಕ್ಟರ್ ಹೆಚ್.ಎಸ್. ರೇಣುಕಾರಾಧ್ಯ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಹೊಸ 3 ಕ್ರಿಮಿನಲ್ ಕಾನೂನುಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಕೆಪಿಎ ನಿರ್ದೇಶಕಿ ಎಂ.ಎಸ್. ಗೀತಾ, ಉಪನಿರ್ದೇಶಕ ಎನ್. ನಿರಂಜನರಾಜ್ ಅರಸ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಹಿರಿಯ ಕಾನೂನು ಅಧಿಕಾರಿ ರಘು, ಆರ್‌ಎಫ್‌ಎಸ್‌ಎಲ್ ಉಪನಿರ್ದೇಶಕ ಚಂದ್ರಶೇಖರ, ಜೈಲು ಅಧೀಕ್ಷಕ ರಮೇಶ, ಕೆಪಿಎ ಸಹಾಯಕ ನಿರ್ದೇಶಕರಾದ ಎಂ. ಶಿವಶಂಕರ, ಕುಮಾರ ಸೇರಿದಂತೆ ಹಲವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ದಾಖಲೆ ಬರೆದ ಜಿಎಸ್‌ಟಿ 7ನೇ ಅನುಷ್ಠಾನ ದಿನಾಚರಣೆ



ಕೇಂದ್ರೀಯ ಜಿಎಸ್‌ಟಿ ಮತ್ತು ಸೀಮಾಶುಲ್ಕ ಮೈಸೂರು ಆಯುಕ್ತಾಲಯದ ವತಿಯಿಂದ ಸೋಮವಾರ ನಡೆದ 7ನೇ ವರ್ಷದ ಜಿಎಸ್‌ಟಿ ಅನುಷ್ಠಾನ ದಿನಾಚರಣೆಯಲ್ಲಿ ಹಲವು ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಜು.1(ಎಸ್‌ಪಿಎನ್)– ಹಳೆ ತೆರಿಗೆ ಪದ್ಧತಿಗೆ ತಿಲಾಂಜಲಿ ನೀಡಿ, ಹೊಸ ತೆರಿಗೆ ಪದ್ಧತಿಯಾದ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಅನುಷ್ಠಾನಗೊಂಡು 7ನೇ ವರ್ಷ ಪೂರೈಸಿದ್ದು, ಈ ಯಶಸ್ವಿ ಹಿಂದೆ ಅನೇಕ ಸಿಬ್ಬಂದಿಯ ಶ್ರಮವಿದೆ ಎಂದು ಕೇಂದ್ರೀಯ ಜಿಎಸ್‌ಟಿ ಮತ್ತು ಸೀಮಾಶುಲ್ಕ ಮೈಸೂರು ಆಯುಕ್ತಾಲಯದ ಪ್ರಧಾನ ಆಯುಕ್ತ ಪಿ.ವಿ.ಎನ್. ಸುರೇಶ್ ಬಾಬು ತಿಳಿಸಿದರು.

ಮೈಸೂರು ಸಿದ್ಧಾರ್ಥನಗರದಲ್ಲಿರುವ ಕೇಂದ್ರೀಯ ಜಿಎಸ್‌ಟಿ ಮತ್ತು ಸೀಮಾಶುಲ್ಕ ಮೈಸೂರು ಆಯುಕ್ತಾಲಯದ ವತಿಯಿಂದ ಸೋಮವಾರ ನಡೆದ 7ನೇ ವರ್ಷ ಜಿಎಸ್‌ಟಿ ಅನುಷ್ಠಾನ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕೇಂದ್ರೀಯ ಜಿಎಸ್‌ಟಿ ಮೈಸೂರು ಆಯುಕ್ತಾಲಯದ ಆಡಳಿತ ಅತ್ಯಂತ ಪಾರದರ್ಶಕ ಮತ್ತು ತೆರಿಗೆ ವಸೂಲಾತಿಯಲ್ಲಿ ಮುಂಚೂಣಿಯಲ್ಲಿದ್ದು, ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯಿಂದ ಸುಮಾರು 47 ಸಾವಿರ ತೆರಿಗೆದಾರರನ್ನು ಹೊಂದಿದ್ದು, 2023–24ನೇ ಆರ್ಥಿಕ ವರ್ಷದಲ್ಲಿ 2,183 ಕೋಟಿ ರೂ. ಈ ಏಳು ಜಿಲ್ಲೆಗಳಿಂದ ತೆರಿಗೆ ಸಂಗ್ರಹವಾಗಿದೆ ಎಂದು ಮಾಹಿತಿ ನೀಡಿದರು.

ಜಿಎಸ್‌ಟಿ ಅನುಷ್ಠಾನಗೊಂಡ ಮೊದಮೊದಲು 80–90 ಸಾವಿರ ಕೋಟಿಗಳವರೆಗೆ ಸಂಗ್ರಹವಾಗುತ್ತಿತ್ತು. ಇದೀಗ ಸುಮಾರು 1.8 ಲಕ್ಷದಿಂದ 2 ಲಕ್ಷ ಕೋಟಿಗಳವರೆಗಿನ ಜಿಎಸ್‌ಟಿ ಸಂಗ್ರಹವಾಗಿದೆ. ಕಳೆದ ಏಳು ವರ್ಷಗಳಿಂದ ಜಿಎಸ್‌ಟಿ ಸಂಗ್ರಹದಲ್ಲಿ ನಮ್ಮ ದೇಶವನ್ನು 3 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆ ದೇಶವಾಗಿ ಬೆಳೆಯುವ ಕಡೆಗೆ ಸಾಗುತ್ತಿರುವುದು ಹೆಮ್ಮೆಯ ವಿಷಯ ಎಂದರು.

2017ರಲ್ಲಿ ಸಂವಿಧಾನದ 101ನೇ ತಿದ್ದುಪಡಿಯೊಂದಿಗೆ ಸ್ವತಂತ್ರ ಭಾರತದ ಇತಿಹಾಸದಲ್ಲೇ ಜಿಎಸ್‌ಟಿ ಅನುಷ್ಠಾನ ಒಂದು ಐತಿಹಾಸಿಕ ಕ್ಷಣವಾಗಿದ್ದು, ದೇಶವು ಜು.1ರಂದು ಜಿಎಸ್‌ಟಿ ಅಳವಡಿಸಿಕೊಂಡು ಯಶಸ್ವಿಯಾಗಿ 7 ವರ್ಷ ಪೂರೈಸಿರುವುದು ಸಂತೋಷದ ಸಂಗತಿ ಎಂದರು.

ಸಿಬ್ಬಂದಿಗೆ ಸನ್ಮಾನ: ನಂತರ ಈ ಸಾಲಿನ ಜಿಎಸ್‌ಟಿ ವಸೂಲಾತಿಗೆ ಶ್ರಮಿಸಿರುವ ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ ಮತ್ತು ಸೀಮಾ ಶುಲ್ಕ ಮೈಸೂರು ಆಯುಕ್ತಾಲಯದ ಅಧೀಕ್ಷಕರಾದ ಸರಿತ ಜಹಗೀರ್‌ದಾರ್, ಪ್ರಶಾಂತ್, ಜಿ.ಎನ್.ಶಶಿಧರ್, ವಿ.ಶರತ್, ದೀಪನ್ಕರ್ ಬಹುಗುಣ, ಸುಖ್ವಿಂದರ್ ಸಿಂಗ್, ಎಂ.ಎಲ್.ಗಿರೀಶ್, ವಿಫುಲ್ ಗುಪ್ತ, ಅಕ್ಷಯ್ ಕುಮಾರ್ ಬೆಹೆರ, ಸೌರಬ್ ರಾಜ್, ಇನ್ಸ್‌ಪೆಕ್ಟರ್‌ರಾದ ಎಚ್.ಎಂ.ಪ್ರಫುಲ್ಲಾ ಚಂದ್ರ ಕುಮಾರ್, ಸೈಯದ್ ಶಮೀರ್ ಬಾಷಾ, ಪಲ್ಲವಿ ಕುಮಾರಿ ಮೀನ, ಕಾರ್ಯ ನಿರ್ವಾಹಕ ಸಹಾಯಕರಾದ ಎಚ್.ಆರ್.ಗೀತಾ, ಅಮನ್ ಖೇತರ್‌ಪಾಲ್, ತೆರಿಗೆ ಸಹಾಯಕರಾದ ಪ್ರಜ್ಞಾ ಮಿಶ್ರಾ, ಅಖಿತ್ ಅಗ್ರಾವಲ್, ಹೆಡ್ ಹವಲ್ದಾರ್‌ರಾದ ಎನ್.ಬಾಬು, ಎಂ.ಕುಮಾರಸ್ವಾಮಿ ಹಾಗೂ ಲೋಯರ್ ಡಿವಿಜನ್ ಕ್ಲಾರ್ಕ್(ಎಲ್‌ಡಿಸಿ) ಪಿ.ನಿಖಿಲ್ ಅವರನ್ನು ಸನ್ಮಾನಿಸಲಾಯಿತು.

ಆಫ್ ಮ್ಯಾರಥಾನ್ ಮೂಲಕ ಜಾಗೃತಿ: ಜಿಎಸ್‌ಟಿ ಅನುಷ್ಠಾನಗೊಂಡು 7 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಈ ಸಂಭ್ರಮವನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಲು ಸಿದ್ಧಾರ್ಥನಗರದ ಜಿಎಸ್‌ಟಿ ಭವನದಿಂದ ಚಾಮುಂಡಿಬೆಟ್ಟದ ತಾವರೆಕಟ್ಟೆಯವರೆಗೆ ಆಫ್ ಮ್ಯಾರಥಾನ್ ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸೋಮವಾರ ಬೆಳಗ್ಗೆ ಜಾಗೃತಿ ಮೂಡಿಸಲಾಯಿತು.

ಅರ್ನಬ್‌ಕುಮಾರ್ ಚೌಧರಿ ಆರ್‌ಬಿಐನ ಹೊಸ ಕಾರ್ಯನಿರ್ವಾಹಕ ನಿರ್ದೇಶಕ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಅರ್ನಬ್ ಕುಮಾರ್ ಚೌಧರಿ ಅವರು ನೇಮಕಗೊಂಡಿದ್ದಾರೆ. ಬುಧವಾರದಿಂದ ಇವರು ನೂತನ ಹುದ್ದೆಯನ್ನು ವಹಿಸಿಕೊಳ್ಳಲಿದ್ದಾರೆ ಎಂದು ಆರ್‌ಬಿಐ ತಿಳಿಸಿದೆ.

ಡಿಐಸಿಜಿಸಿ ಸೇರಿದಂತೆ ಮೂರು ವಿಭಾಗಗಳನ್ನು ಚೌಧರಿ ನೋಡಿಕೊಳ್ಳಲಿದ್ದಾರೆ. ಸದ್ಯ ಇವರು ಬ್ಯಾಂಕ್‌ನ ಮೇಲ್ವಿಚಾರಣೆ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಾರ್ಯನಿರ್ವಾಹಕ ನಿರ್ದೇಶಕರಾಗಿ ಚೌಧರಿ ಅವರು ಠೇವಣಿ ವಿಮೆ, ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (ಡಿಐಸಿಜಿಸಿ) ಹಾಗೂ ಅಂತರರಾಷ್ಟ್ರೀಯ ವಿಭಾಗವನ್ನು ನಿರ್ವಹಿಸಲಿದ್ದಾರೆ ಎಂದು ಆರ್‌ಬಿಐ ಪ್ರಕಟಣೆ ಹೇಳಿದೆ. ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಚೌಧರಿ ಅವರು ಅರ್ಥಶಾಸ್ತ್ರ ಪದವೀಧರರು. ಇದರೊಂದಿಗೆ ಐಐಬಿಎಫ್‌ನ ಪ್ರಮಾಣಪತ್ರವನ್ನೂ ಹೊಂದಿದ್ದಾರೆ. ಆರ್‌ಬಿಐನಲ್ಲಿ ಮೂರು ದಶಕಗಳ ವೃತ್ತಿ ಅನುಭವ ಹೊಂದಿದ್ದಾರೆ. ಹಣಕಾಸು ವಿಭಾಗದ ಮೇಲ್ವಿಚಾರಣೆಯಲ್ಲಿ ಸಾಕಷ್ಟು ಅನುಭವ ಹೊಂದಿದ್ದಾರೆ.

ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ 254 ಮಂದಿಗೆ ವಿವಿಧ ಪದವಿ ಪ್ರದಾನ

ದೇಶದಲ್ಲಿ ಔಷಧಿ ಆಮದು ಹೋಗಿ ಈಗ ರಫ್ತು ಮಾಡುತ್ತಿದ್ದೇವೆ



ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ 254 ಮಂದಿ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಕೆ.ರಮೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಮತ್ತಿತರರಿದ್ದರು.

ಮೈಸೂರು, ಜು.1(ಎಂಕೆ)– ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನಡೆದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವಿ ಪ್ರದಾನ ಸಮಾರಂಭದಲ್ಲಿ ಬಿ–ಫಾರ್ಮ್, ಡಿ–ಫಾರ್ಮ್, ಫಾರ್ಮ್–ಡಿ ಮತ್ತು ಎಂ–ಫಾರ್ಮ್ ವಿಭಾಗದ 254 ಮಂದಿ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಬಿ–ಫಾರ್ಮ್ ವಿಭಾಗದಲ್ಲಿ 82, ಡಿ–ಫಾರ್ಮ್ 52, ಫಾರ್ಮ್–ಡಿ 37 ಹಾಗೂ ಎಂ–ಫಾರ್ಮ್ ವಿಭಾಗದಲ್ಲಿ 83 ಸೇರಿ 254 ಮಂದಿ ಪದವಿ ಪಡೆದರು. ಡಿ–ಫಾರ್ಮ್ ವಿಭಾಗದಲ್ಲಿ ಎಂ.ಸಹನ, ಬಿ–ಫಾರ್ಮ್‌ನಲ್ಲಿ ಅಲಿಶಾ ಆಂಥೋನಿ, ಫಾರ್ಮ್–ಡಿ ಯಲ್ಲಿ ವುಡಾರು ಪ್ರೀತಿ ರೆಡ್ಡಿ ಮತ್ತು ಎಂ–ಫಾರ್ಮ್‌ನ ಫಾರ್ಮಾಸ್ಯೂಟಿಕ್ ವಿಭಾಗದಲ್ಲಿ ಅದಿತಿ ಡ್ಯಾಶ್, ಔಷಧಿ ನಿಯಂತ್ರಣ ವ್ಯವಹಾರದಲ್ಲಿ ಎಸ್.ಅಮೇಶಾ, ಔಷಧಿ ರಸಾಯನ ಶಾಸ್ತ್ರದಲ್ಲಿ ಸತ್ಯಂ ಸಾಯಿ ಮಧು ಪ್ರಶಾಂತ್ ಮತ್ತು ಚೌಂಧರಿ ಭಾರತಿ ಶೇಷರಾವ್ ಅಗ್ರಸ್ಥಾನ ಪಡೆದರು.

ಹಾಗೆಯೇ ಫಾರ್ಮಾಸ್ಯುಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್ ವಿಭಾಗದಲ್ಲಿ ತುಮ್ಮೂರು ಕ್ಷಿತಾ ಸಾಯಿ, ಫಾರ್ಮಾಕಾಲಜಿಯಲ್ಲಿ ಸಲಾದುಲಾ ಹಿಮಾ, ಇಂಡಸ್ಟ್ರಿಯಲ್ ಫಾರ್ಮಸಿಯಲ್ಲಿ ರುತುಜಾ ಹರಿಶ್ಚಂದ್ರ ಯಾದವ್ ಮತ್ತು ಫಾರ್ಮಸಿ ಪ್ರಾಕ್ಟೀಸ್ ವಿಭಾಗದಲ್ಲಿ ವೈಶಾಲಿ ಚಿನ್ನದ ಪದಕ ಪಡೆದರು. ಜೊತೆಗೆ 2023–24ನೇ ಸಾಲಿನ ಅತ್ಯುತ್ತಮ ಸಂಶೋಧಕ ಪ್ರಶಸ್ತಿಯನ್ನು ಔಷಧೀಯ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಗುರುಪಾದಯ್ಯ ಹಾಗೂ ಔಷಧಿ ವಿಭಾಗದ ಮುಖ್ಯಸ್ಥ ಡಾ.ರಿಯಾಜ್ ಅಲಿ ಉಸ್ಮಾನಿ ಅವರಿಗೆ ನೀಡಲಾಯಿತು. ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಕೆ.ರಮೇಶ್ ಪದವಿ ಪ್ರದಾನ ಹಾಗೂ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಯಾವ ಸ್ಥಿತಿಯಲ್ಲಿತ್ತು. ಪ್ರಸ್ತುತ ಯಾವ ಸ್ಥಾನದಲ್ಲಿದೆ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಸ್ವಾತಂತ್ರ್ಯ ದೊರೆತಾಗ ಸರಿಯಾಗಿ ಆರೋಗ್ಯ ಕೇಂದ್ರಗಳು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಇರಲಿಲ್ಲ. ಅಂದು ಜನರ ಸರಾಸರಿ ಆಯಸ್ಸು ಕೇವಲ 32 ವರ್ಷವಾಗಿತ್ತು. ಮಲೇರಿಯಾ ಸಾಂಕ್ರಾಮಿಕ ರೋಗ ಬಂದರೆ ಒಮ್ಮೆಗೆ ಕನಿಷ್ಠ 500 ಜನ ಸಾವನ್ನಪ್ಪುತ್ತಿದ್ದರು. 1 ಲಕ್ಷ ಮಕ್ಕಳ ಜನನವಾದರೆ 2000 ತಾಯಂದಿರು ಸಾಯುತ್ತಿದ್ದರು. ಪೋಲಿಯೋ ಬಾಧೆ ವಿಪರೀತವಾಗಿತ್ತು. ಆದರೆ ಇಂದು ಔಷಧಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಸ್ಥಳದಲ್ಲಿ ರಫ್ತು ಮಾಡುತ್ತಿದ್ದೇವೆ. ಮಲೇರಿಯಾ ನಿಯಂತ್ರಣಕ್ಕೆ ಬಂದಿದೆ. ಪೋಲಿಯೋ ಮುಕ್ತವಾಗಿದೆ. ಇದಕ್ಕೆಲ್ಲಾ ಫಾರ್ಮಸಿಸ್ಟ್‌ಗಳ ಕೊಡುಗೆ ಅಪಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇಶದಲ್ಲಿಂದು ಔಷಧಿ ತಯಾರಿಕೆ ಹಾಗೂ ರಫ್ತು ಮಾಡುವಲ್ಲಿ ಸಾಕಷ್ಟು ಸುಧಾರಿಸಲಾಗಿದೆ. ಕೊರೊನಾ ಸಂದರ್ಭವನ್ನೇ ಉದಾಹರಣೆಯಾಗಿ ಹೇಳುವುದಾದರೆ, ಭಾರತ ವ್ಯಾಕ್ಸಿನ್ ತಯಾರಿಸುತ್ತೆ ಎಂದು ಯಾರೂ ಊಹಿಸಿರಲಿಲ್ಲ. ಆದರೆ ವ್ಯಾಕ್ಸಿನ್ ತಯಾರಿಸಿದ್ದು ಮಾತ್ರವಲ್ಲದೆ ಬೇರೆ ಬೇರೆ ದೇಶಗಳಿಗೂ ರಫ್ತು ಮಾಡಲಾಯಿತು. ಇಡೀ ಪ್ರಪಂಚವೇ ಕೊರೊನಾದಿಂದ ನರಳುತ್ತಿದ್ದರೆ, ಭಾರತದಲ್ಲಿ ವ್ಯಾಕ್ಸಿನ್ ತಯಾರಿಸಿ, ಜೀವ ಉಳಿಸುವ ಕಾರ್ಯ ಮಾಡಲಾಗುತ್ತಿತ್ತು ಎಂದು ಸ್ಮರಿಸಿದರು.

ಫಾರ್ಮಸಿ ಕ್ರಿಯಾತ್ಮಕ ಅಧ್ಯಯನವಾಗಿದ್ದು, ಪ್ರತಿನಿತ್ಯ ಹೊಸ ಹೊಸ ನಿಯಮಗಳು, ಹೊಸ ಹೊಸ ಅಧ್ಯಯನ ಮತ್ತು ಸಂಶೋಧನಾ ವ್ಯವಸ್ಥೆಯನ್ನು ಅವಲಂಬಿಸಿಕೊಳ್ಳುತ್ತದೆ. ಫಾರ್ಮಸಿಯಲ್ಲಿ ಸಾಧನೆ ಮಾಡಲು ಅವಕಾಶವಿದ್ದು, ಸಕ್ಕರೆ ಕಾಯಿಲೆಯಂತಹ ದೀರ್ಘಕಾಲದ ಕಾಯಿಲೆಗಳನ್ನು ಗುಣಪಡಿಸಲು ಗುಣಮಟ್ಟದ ಔಷಧಿಗಳನ್ನು ತಯಾರು ಮಾಡಬಹುದು. ಹಾಗೆಯೇ ಮುಂದಿನ ದಿನಗಳಲ್ಲಿ ಹೊಸ ಕಾಯಿಲೆಗಳು, ಹೊಸ ವೈರಸ್‌ಗಳು ಬಾಧಿಸಲಿದ್ದು, ಇಂದಿನಿಂದಲೇ ಪೂರ್ವ ತಯಾರಿ ಅಗತ್ಯವಾಗಿದೆ ಎಂದು ಎಚ್ಚರಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ್, ಸಿಒಇ ಡಾ.ಸುಧೀಂದ್ರ ಭಟ್, ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಾ, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್, ಉಪ ಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್ ಮತ್ತಿತರರಿದ್ದರು.

ತಮ್ಮದೇ ಕೊಡುಗೆ ನೀಡಿ..

ಭಾರತ ವಿಶ್ವದ 5ನೇ ಅತೀದೊಡ್ಡ ಆರ್ಥಿಕತೆಯುಳ್ಳ ರಾಷ್ಟ್ರವಾಗಿದ್ದು, 2047ಕ್ಕೆ ದೇಶದ ಆರ್ಥಿಕತೆ 20 ಟ್ರಿಲಿಯನ್ ಡಾಲರ್ ಆಗಲಿದೆ. ದೇಶದ ಅಭಿವೃದ್ಧಿಗಾಗಿ ಫಾರ್ಮಸಿಸ್ಟ್‌ಗಳ ಕೊಡುಗೆ ಅಗತ್ಯವಿದ್ದು, ಸೇವಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುತ್ತಿರುವವರು ತಮ್ಮ ಕುಟುಂಬ, ಸಮಾಜ ಹಾಗೂ ದೇಶದ ಪ್ರಗತಿಗೆ ಕೊಡುಗೆ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ.

– ಡಾ.ಎಂ.ಕೆ.ರಮೇಶ್, ಕುಲಪತಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ

ಮೈಸೂರು ಮಿತ್ರ

ವೈದ್ಯರ ನಿರ್ಲಕ್ಷ್ಯದಿಂದ ಬಾಲಕಿ ಸಾವು ಆರೋಪ: ದೂರು ದಾಖಲು



ತನುಷ್ಕಾ

ಹೆಚ್.ಡಿ.ಕೋಟೆ, ಜು.1– ಪಟ್ಟಣದ ಸೇಂಟ್ ಮೇರಿಸ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಾಲಕಿ ಸಾವನ್ನಪ್ಪಿದ್ದಾಳೆ ಎಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಬೆಳಗನಹಳ್ಳಿ ಗ್ರಾಮದ ಶಿವರಾಜು, ಕವಿತಾ ದಂಪತಿ ಪುತ್ರಿ ತನುಷ್ಕಾ (6) ಸಾವನ್ನಪ್ಪಿದ ಬಾಲಕಿ. ಈಕೆ ಭಾನುವಾರ ರಾತ್ರಿ ವಾಂತಿ ಮಾಡಿಕೊಂಡಿದ್ದು, ತಕ್ಷಣ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಕರೆತರ ಲಾಗಿತ್ತು. ಆದರೆ, ಆಸ್ಪತ್ರೆಯಲ್ಲಿ ಮಕ್ಕಳ ವೈದ್ಯರಿಲ್ಲದ ಕಾರಣ ಸೇಂಟ್ ಮೇರಿಸ್ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆ ತಂದಾಗ ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯ ದೀಪಕ್ ಬಾಲಕಿಯನ್ನು ತಪಾಸಣೆ, ಚಿಕಿತ್ಸೆ ನೀಡಿ, ರಕ್ತ ಪರೀಕ್ಷೆ ಮಾಡಿಸಿದ್ದರು. ಇದರ ವರದಿ ಬೆಳಗ್ಗೆ ಬರಲಿದ್ದು, ಅಲ್ಲಿವರೆಗೂ ಆಸ್ಪತ್ರೆಯಲ್ಲಿ ದಾಖಲಿಸುವಂತೆ ಪೋಷಕರಿಗೆ ತಿಳಿಸಿದ್ದರು. ವೈದ್ಯರ ಸೂಚನೆಯಂತೆ ಪೋಷಕರು ಆಸ್ಪತ್ರೆಗೆ ಬಾಲಕಿಯನ್ನು ದಾಖಲಿಸಿದ್ದರು. ಮಗಳು ಮುಂಜಾನೆವರೆಗೂ ಲವಲವಿಕೆಯಿಂದ ಇರುವುದನ್ನು ಕಂಡ ಪೋಷಕರು ಮಗಳು ಆರೋಗ್ಯವಾಗಿದ್ದಾಳೆ ಎಂದು ಭಾವಿಸಿದ್ದರು. ಆದರೆ, ಶಿವರಾಜು ಅವರು ಉಪಾಹಾರ ತರಲು ಮನೆಗೆ ಹೋಗಿದ್ದ ವೇಳೆ ಈಕೆ ಸಾವನ್ನಪ್ಪಿದ್ದಾಳೆ. ಇದರಿಂದ ಆಕ್ರೋಶಗೊಂಡ ಪೋಷಕರು ಹಾಗೂ ಬೆಳಗನಹಳ್ಳಿ ಗ್ರಾಮಸ್ಥರು ಆರೋಗ್ಯವಾಗಿದ್ದ ಬಲಕಿ ಏಕಾಏಕಿ ಸಾವನ್ನಪ್ಪಲು ಆಸ್ಪತ್ರೆ ವೈದ್ಯರು, ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ವೈದ್ಯರೊಂದಿಗೆ ಮಾತಿನ ಚಕಮಕಿ ನಡೆಸಿದರು.



ತಾಲೂಕು ವೈದ್ಯಾಧಿಕಾರಿ ಡಾ. ರವಿಕುಮಾರ್ ಘಟನೆ ಬಗ್ಗೆ ಮಾಹಿತಿ ಪಡೆದರು.

ತಂದೆ ಶಿವರಾಜು ಮಾತನಾಡಿ, ಆಸ್ಪತ್ರೆಯಲ್ಲಿ ಮಕ್ಕಳ ವೈದ್ಯರಿದ್ದರೂ, ಬೇರೆ ವೈದ್ಯರು ಚಿಕಿತ್ಸೆ ನೀಡಿದ್ದರಿಂದ ಮಗಳು ಸಾವನ್ನಪ್ಪಿದ್ದಾಳೆ. ಹೀಗಾಗಿ ನನ್ನ ಮಗಳಿಗೆ ಆದ ಗತಿ ಬೇರೆ ಮಕ್ಕಳಿಗೆ ಆಗಬಾರದು. ಆದ್ದರಿಂದ ಚಿಕಿತ್ಸೆ ನೀಡಿದ ವೈದ್ಯರು, ಮಕ್ಕಳ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹಿಂದೆ ಈ ರೀತಿಯ ಪ್ರಕರಣಗಳು ಸಾಕಷ್ಟು ನಡೆದಿದ್ದರೂ, ಎಚ್ಚೆತ್ತುಕೊಳ್ಳದೇ ನನ್ನ ಮಗಳನ್ನು ಬಲಿ ಪಡೆದಿದ್ದಾರೆ.

> ಮಕ್ಕಳ ವೈದ್ಯರಿದ್ದರೂ, ರಾತ್ರಿ ಪಾಳಿಯಲ್ಲಿದ್ದ ವೈದ್ಯರು ಬಲಕಿಗೆ ಚಿಕಿತ್ಸೆ ನೀಡಿರುವುದು ಕಂಡು ಬಂದಿದೆ. ಅಲ್ಲದೇ ಸೋಮವಾರ ಬೆಳಗ್ಗೆಯೂ ಮಕ್ಕಳ ವೈದ್ಯರು ಆಗಮಿಸಿ ಬಾಲಕಿಗೆ ಚಿಕಿತ್ಸೆ ನೀಡದೆ ಪ್ರಮಾದ ಎಸಗಿದ್ದಾರೆ. ಇದರಿಂದ ಈಕೆ ಸಾವನ್ನಪ್ಪಿರ ಬಹುದು. ಆದ್ದರಿಂದ ಸಂಬಂಧಪಟ್ಟ ವೈದ್ಯರ ಹಾಗೂ ಮಕ್ಕಳ ತಜ್ಞರ ವಿರುದ್ಧ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ದೂರು ನೀಡಿ ಸೂಕ್ತ ತನಿಖೆಗೆ ಆಗ್ರಹಿಸಲಾಗುವುದು. ಬಾಲಕಿಗೆ ಚಿಕಿತ್ಸೆ ನೀಡಿದ ವೈದ್ಯರಿಗೆ ನೋಟಿಸ್ ಜಾರಿ ಮಾಡಲಾಗುವುದು.
>
> – ಡಾ.ರವಿಕುಮಾರ್,
> ತಾಲೂಕು ವೈದ್ಯಾಧಿಕಾರಿ.

ವೈದ್ಯರ ನಿರ್ಲಕ್ಷ್ಯವೇ ನನ್ನ ಮಗಳ ಸಾವಿಗೆ ಕಾರಣ. ಈ ಸಂಬಂಧ ದೂರು ದಾಖಲಿಸುತ್ತೇನೆ. ಅಲ್ಲದೇ ತಾಲೂಕು ಆರೋಗ್ಯಾಧಿಕಾರಿಗೂ ತನಿಖೆಗೆ ಆಗ್ರಹಿಸಿ ದೂರು ನೀಡುತ್ತೇನೆ. ನನ್ನ ಮಗಳ ಸಾವಿಗೆ ಕಾರಣರಾದ ವೈದ್ಯರ ವಿರುದ್ಧ ಕಾನೂನು ಹೋರಾಟ ಮಾಡುತ್ತೇನೆ ಎಂದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಭೂಮಿಪೂಜೆ ನೆರವೇರಿಸಿದರು.

ನಂಜನಗೂಡು, ಜು.1– ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ 90 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಭಾರತ್ ಜೋಡೋ ಯಾತ್ರೆ ಸಂದರ್ಭ ಬದನವಾಳು ಗ್ರಾಮದಲ್ಲಿ ಗಾಂಧೀಜಿಯವರು ಸ್ಥಾಪಿಸಿರುವ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ನಡೆದ ಗಾಂಧಿ ಜಯಂತಿಯಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವ ಭರವಸೆ ನೀಡಿದ್ದರು. ಅದರಂತೆ ಲೋಕೋಪಯೋಗಿ ಇಲಾಖೆಯಿಂದ 90 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ. ಈ ಕಾಮಗಾರಿಯಲ್ಲಿ 650 ಮೀ. ಉದ್ದದ ಸುಸಜ್ಜಿತ ರಸ್ತೆ ನಿರ್ಮಾಣವಾಗಲಿದೆ. ಅಲ್ಲದೇ ವರುಣ ಕ್ಷೇತ್ರದ ಮಲ್ಲೂಪುರದಿಂದ ನಂಜನಗೂಡು ಕ್ಷೇತ್ರದ ಬದನವಾಳು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆ ಅಭಿವೃದ್ಧಿಯಾಗಲಿದೆ. ಇದರಿಂದ ಸುತ್ತಮುತ್ತಲ ಗ್ರಾಮದ ಜನರಿಗೆ ಅನುಕೂಲವಾಗಲಿದೆ ಎಂದರು.

ಖಾದಿ ಕೇಂದ್ರ ಅಭಿವೃದ್ಧಿಗೆ ಕ್ರಮ: ಸ್ವತಃ ಮಹಾತ್ಮ ಗಾಂಧಿಯವರೇ ಬದನವಾಳು ಗ್ರಾಮದಲ್ಲಿ ಸ್ಥಾಪಿಸಿರುವ ಖಾದಿ ಕೇಂದ್ರದ ಅಭಿವೃದ್ಧಿಗೆ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಖಾದಿ ಕೇಂದ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡಲು ಕ್ರಮ ವಹಿಸುತ್ತೇನೆ ಎಂದರು.

ಈ ವೇಳೆ ಮಾಜಿ ಶಾಸಕರಾದ ಕೇಶವಮೂರ್ತಿ, ಗ್ರಾಪಂ ಅಧ್ಯಕ್ಷ ದೊರೆಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಮುಖಂಡರಾದ ವಿಜಯ್‌ಕುಮಾರ್, ರಂಗದಾಸ್, ಶಿವಸ್ವಾಮಿ, ಮಂಜುನಾಥ್, ಅಶೋಕ್, ನಾಗರಾಜು, ಸೋಮು, ರಮೇಶ್, ಪಿಡಿಓ ಕರಿಯಪ್ಪ ಸೇರಿದಂತೆ ಇತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೆ.ಆರ್.ನಗರ, ಜು.1– ತಾಲೂಕು ಒಕ್ಕಲಿಗ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕೂ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ್ ಜೆರಾಕ್ಸ್, ಇತ್ತೀಚಿನ 2 ಭಾವಚಿತ್ರ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಜು.15 ಕೊನೆ ದಿನ. ಮಾಹಿತಿಗೆ ಮೊ.7022343064, 9449680566 ಸಂಪರ್ಕಿಸಬಹುದು.

ಪತ್ರಕರ್ತರಲ್ಲಿ ಸಮಾಜಮುಖಿ ಗುಣವಿರಬೇಕು: ಸಚಿವ ಕೆ.ವೆಂಕಟೇಶ್

ಪಿರಿಯಾಪಟ್ಟಣ, ಜು.1– ಪತ್ರಕರ್ತರಲ್ಲಿ ಸಮಾಜಮುಖಿ ಗುಣವಿರಬೇಕು ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಪಿರಿಯಾಪಟ್ಟಣ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಪಾತ್ರ ಅಪಾರ. ಮಾನವೀಯ ಮೌಲ್ಯಗಳಿರುವ ಸಮಾಜಮುಖಿ ಗುಣ ಮೈಗೂಡಿಸಿಕೊಳ್ಳಬೇಕು. ಸರ್ಕಾರ ಮತ್ತು ಜನಪ್ರತಿನಿಧಿಗಳನ್ನು ಪ್ರಶ್ನಿಸುವ ಜವಾಬ್ದಾರಿ ಪತ್ರಕರ್ತರಿಗಿದೆ. ಸ್ಥಳೀಯ ಸಮಸ್ಯೆಗಳ ಬಗ್ಗೆ ಗಮನ ಹರಿಸಿ ಪರಿಹರಿಸುವ ಕಾರ್ಯವಾಗಬೇಕು. ಈ ನಿಟ್ಟಿನಲ್ಲಿ ಮಾಧ್ಯಮ ಕ್ಷೇತ್ರ ತನ್ನದೆ ಆದ ಘನತೆ ಹೊಂದಿದೆ. ಆದರೆ ಇಂದು ಮಾಧ್ಯಮ ಕ್ಷೇತ್ರವು ಟೀಕೆಗಳಿಗೆ ಸೀಮಿತವಾಗಿರುವುದು ಬೇಸರದ ಸಂಗತಿ. ಆದ್ದರಿಂದ ಮಾಧ್ಯಮ ಕ್ಷೇತ್ರ ಪ್ರತಿಯೊಬ್ಬರ ಹಿತ ಕಾಯುವ ಕ್ಷೇತ್ರವಾಗಬೇಕು ಎಂದರು.

ಹಿರಿಯ ಪತ್ರಕರ್ತ ಟಿ.ಗುರುರಾಜ್ ಮಾತನಾಡಿ, ಮಾಧ್ಯಮ ಕ್ಷೇತ್ರಕ್ಕೆ ಹಲವು ವರ್ಷಗಳ ಇತಿಹಾಸವಿದೆ. ಮಾಧ್ಯಮವು ಸಮಾಜವನ್ನು ತಿದ್ದುವ ಕಾರ್ಯವಾಗಬೇಕು. ಇಂದು ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮವು ಸಾಕಷ್ಟು ಪರಿಣಾಮ ಬಿರುತ್ತಿದೆ. ಸುದ್ದಿ ಮಾಡುವ ಸಂದರ್ಭ ಆತ್ಮಾವಲೋಕನ ಮಾಡಿಕೊಳ್ಳಬೇಕು. ಪತ್ರಕರ್ತ ಎಂದರೆ ಅಧಿಕಾರವಲ್ಲ ಒಂದು ಜವಾಬ್ದಾರಿಯಾಗಿದ್ದು, ವಾಸ್ತವ ಅರಿತು ಬರೆಯಬೇಕು. ಇಂದು ಬರವಣಿಗೆ ಬಾರದವರು ಕೂಡ ಮಧ್ಯಮದಲ್ಲಿದ್ದಾರೆ. ಪ್ರತಿಯೊಬ್ಬರಿಗೂ ಅಭಿವ್ಯಕ್ತ ಸ್ವಾತಂತ್ರವಿದೆ. ಇದನ್ನು ಉತ್ತಮ ರೀತಿ ಬಳಸಬೇಕು ಎಂದರು.



ಪತ್ರಕರ್ತ ಸದಾಶಿವ ಅವರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ ಮಾತನಾಡಿ, ಸಂಘದ ಕಾರ್ಯ ಚಟುವಟಿಕೆಗಾಗಿ ಸ್ವಂತ ಕಟ್ಟಡವಿಲ್ಲದಾಗಿದೆ. ಆದ್ದರಿಂದ ಸಂಘದ ಕಚೇರಿಗೆ ಸ್ಥಳ ನೀಡಿ ಕಟ್ಟಡ ನಿರ್ಮಿಸಿ ಕೊಡಬೇಕಾಗಿ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಸದಾಶಿವ ಅವರನ್ನು ಸನ್ಮಾನಿಸಲಾಯಿತು. ಉತ್ತಮ ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಅಭಿನಂದಿಸಲಾಯಿತು. ಈ ವೇಳೆ ಆಶ್ರಯ ಸಮಿತಿ ತಾಲೂಕು ಅಧ್ಯಕ್ಷ ನಿತೀನ್, ಸಾಹಿತಿ ಕಾಳಚನ್ನೇಗೌಡ, ತಾಪಂ ಇಓ ಸುನೀಲ್ ಕುಮಾರ್, ಮುಖಂಡ ಡಿ.ಟಿ.ಸ್ವಾಮಿ, ಜಿಲ್ಲಾ ನಿರ್ದೇಶಕ ಗಣೇಶ್, ವಿಜಯ್, ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸನ್ನ, ಅಶೋಕ್, ಖಜಾಂಚಿ ದೇವೇಗೌಡ, ಉಪಾಧ್ಯಕ್ಷ ರವಿಚಂದ್ರ ಸೇರಿದಂತೆ ಇತರರಿದ್ದರು.

ಇಂದು ಪತ್ರಿಕಾ ದಿನಾಚರಣೆ

ಹೆಚ್.ಡಿ.ಕೋಟೆ, ಜು.1– ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಜು.2 ರಂದು ಬೆಳಗ್ಗೆ 11 ಗಂಟೆಗೆ ತಾಲೂಕಿನ ಜಂಗಲ್ ಲಾಡ್ಜ್ ರೆಸಾರ್ಟ್ ಸಭಾಂಗಣದಲ್ಲಿ ಪತ್ರಿಕಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪತ್ರಕರ್ತರ ಮಕ್ಕಳು ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ನಾಗರಾಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ಮುಖಂಡರ ಹೆಸರಿಗೆ ಸವಿತಾ ಸಮಾಜದ ಆಸ್ತಿ ಖಾತೆ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಖಂಡರ ಒತ್ತಾಯ

ತಿ.ನರಸೀಪುರ, ಜು.1– ಸವಿತಾ ಸಮಾಜಕ್ಕೆ ಸೇರಿದ ಆಸ್ತಿಯನ್ನು ಸಮಾಜದ ಇಬ್ಬರು ಮುಖಂಡರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಮೂಲಕ ಸಮುದಾಯಕ್ಕೆ ದ್ರೋಹ ಎಸಗಿದ್ದಾರೆ ಎಂದು ಸವಿತಾ ಸಮಾಜದ ಮುಖಂಡ ಶಿವರುದ್ರಸ್ವಾಮಿ ಆರೋಪಿಸಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸವಿತಾ ಸಮಾಜಕ್ಕೆ ಸೇರಿದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಬಳಿ (ವಿಶ್ವಕರ್ಮ ಬೀದಿ) ಇರುವ 100x50 ಚದರ ವಿಸ್ತೀರ್ಣದ ನಿವೇಶನವನ್ನು ಸಮಾಜದ ಮುಖಂಡರಾದ ಈ.ರಾಜು ಹಾಗೂ ನಾಗೇಂದ್ರ ಎಂಬುವರು ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಬಾಡಿಗೆಗೆ ನೀಡುವ ಮೂಲಕ ಸಮಾಜದ ಆಸ್ತಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ಸವಿತಾ ಸಮಾಜದ ಮುಖಂಡ ಶಿವರುದ್ರಸ್ವಾಮಿ ಮಾತನಾಡಿದರು.

ಸಮಾಜದ ಇನ್ನಿತರೆ ಸದಸ್ಯರು ಈ ಮುಖಂಡರನ್ನು ಸಂಘದ ಸಮುದಾಯ ಭವನದಲ್ಲಿ ನಡೆದ ಸಭೆ ಸಮಾರಂಭದ ಲೆಕ್ಕ ಕೇಳಿದರೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಸಮಾಜದ ಆಸ್ತಿಯನ್ನು ಲೂಟಿ ಮಾಡುವ ಕಾಯಕವನ್ನೇ ತಮ್ಮ ವೃತ್ತಿ ಮಾಡಿಕೊಂಡಿರುವ ಇವರು ಸಮಾಜಕ್ಕೆ ಸೇರಿದ ಜಾಗವನ್ನು ಮುರುಡೇಶ್ವರ ಫರ್ನಿಚರ್ ಅಂಗಡಿಗೆ ತಿಂಗಳಿಗೆ 15 ಸಾವಿರ ರೂ.ಗಳಂತೆ ಬಾಡಿಗೆ ನೀಡಿ ಕಳೆದ 8 ವರ್ಷಗಳಿಂದ ಬಾಡಿಗೆ ಹಣ ದುರುಪಯೋಗ ಮಾಡಿಕೊಂಡಿದ್ದು, ಈ ಸಂಬಂಧ ಜಿಲ್ಲಾ ನೋಂದಣಾಧಿಕಾರಿಗೆ ದೂರು ನೀಡಿದ್ದರೂ, ಸುಳ್ಳು ದಾಖಲೆ ನೀಡಿ ದೂರನ್ನು ತಡೆ ಹಿಡಿದಿದ್ದಾರೆ ಎಂದು ಕಿಡಿಕಾರಿದರು.

ಸವಿತಾ ಸಮಾಜದ ಭವನ ನಿರ್ಮಾಣಕ್ಕೆ ಈವರೆಗೆ 65 ರಿಂದ 70 ಲಕ್ಷ ಅನುದಾನ ಬಂದಿದೆ. ಆದರೆ ಇದು ಏನಾಗಿದೆ ಎಂಬುದೇ ಗೊತ್ತಿಲ್ಲ. ಇಲ್ಲೂ ಸಹ ಅವ್ಯವಹಾರ ನಡೆದಿದೆ. ಅಷ್ಟೇ ಅಲ್ಲದೇ ದೇವರಾಜ ಅರಸು ನಿಗಮದಿಂದ 22.50 ಲಕ್ಷ ಅನುದಾನ ಬಂದಿದೆ. 6 ಎಂಪಿ ಹಾಗೂ ಎಂಎಲ್‌ಎಗಳು ಸಾಕಷ್ಟು ಅನುದಾನ ನೀಡಿದ್ದಾರೆ. ಆದರೆ ಯಾವುದಕ್ಕೂ ಲೆಕ್ಕ ಕೊಡುತ್ತಿಲ್ಲ. ಕೇಳಲು ಹೋದರೆ ಸಮಾಜದಿಂದ ಬಹಿಷ್ಕಾರ ಹಾಕುವ ಬೆದರಿಕೆ ಒಡ್ಡುತ್ತಾರೆ ಎಂದು ಆರೋಪಿಸಿದ ಅವರು, ಸರ್ಕಾರದಿಂದ ಬಂದಿರುವ ಅನುದಾನದ ಬಗ್ಗೆ ಲೆಕ್ಕ ನೀಡುವಂತೆ ಜಿಲ್ಲಾ ನೋಂದಾಣಾಧಿಕಾರಿಗಳು ಇಬ್ಬರಿಗೂ ನಿರ್ದೇಶನ ನೀಡಬೇಕು ಹಾಗೂ ಈ ಬಗ್ಗೆ ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸವಿತಾ ಸಮಾಜದ ಮುಖಂಡರಾದ ಸಿದ್ದರಾಜು, ರಾಘು, ಮಂಟೇಲಿಂಗಸ್ವಾಮಿ, ಕುಮಾರ್, ಜೈಶಂಕರ್, ಸುರೇಶ್, ಸಿದ್ದರಾಜು, ಶಂಕರ, ನಿಂಗರಾಜು, ದೇವರಾಜು, ಸಂತೋಷ್ ಹಾಜರಿದ್ದರು.

ಕೆ.ಆರ್.ನಗರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕೆ.ಆರ್.ನಗರ, ಜು.1– ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಅಭಿವೃದ್ಧಿಗೆ ವಿವಿಧ ಇಲಾಖೆಗಳಿಂದ 200 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಗರುಡಗಂಭ ವೃತ್ತದಲ್ಲಿ ಜಾಮೀಯಾ ಮಸೀದಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಸ್ತೆ ಅಭಿವೃದ್ಧಿ ಕಾಮಗಾರಿಗೆ ರಾಜ್ಯ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ 5 ಕೋಟಿ ರೂ.ಗಳನ್ನು ಮಂಜೂರು ಮಾಡಿಸಲಾಗಿದೆ. ಅಲ್ಪ ಸಂಖ್ಯಾತರು ಹೆಚ್ಚಾಗಿರುವ ಐದು ವಾರ್ಡ್‌ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು 3 ಕೋಟಿ ವೆಚ್ಚದಲ್ಲಿ ಮಾಡಲಾಗುವುದು ಎಂದರು.

ಡೋರನಹಳ್ಳಿ ಚರ್ಚ್ ಸಮೀಪ ಕಾಂಕ್ರೀಟ್ ರಸ್ತೆ ನಿರ್ಮಾಣ, ಸಾಲಿಗ್ರಾಮ, ಭೇರ್ಯ ಹಾಗೂ ಎರೆಮನುಗನಹಳ್ಳಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 2 ಕೋಟಿ ನೀಡಲಾಗಿದೆ. ಕಳೆದ ಸರ್ಕಾರದಲ್ಲಿ ಬಿಡುಗಡೆಯಾದ ಅನುದಾನಕ್ಕೆ ನಾನು ಭೂಮಿಪೂಜೆ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದ ಶಾಸಕರು, ವಿಪಕ್ಷದವರು ಮಾಡುವ ಅಪಪ್ರಚಾರಕ್ಕೆ ಮನ್ನಣೆ ನೀಡುವುದಿಲ್ಲ ಎಂದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕಳೆದ 20 ವರ್ಷಗಳಿಂದ ಸಕ್ರೀಯ ರಾಜಕಾರಣದಲ್ಲಿರುವ ನನಗೆ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ತಾಲೂಕಿನ ಗ್ರಾಮಗಳಿಗೆ ಭೇಟಿ ನೀಡಿದ ವೇಳೆ ಆಗಬೇಕಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪಟ್ಟಿ ಮಾಡಲಾಗಿದೆ. ಹೀಗಾಗಿ ಆದ್ಯತೆ ಮೇರೆಗೆ ಅನುದಾನ ತಂದು ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತೇನೆ. ಬೇರೆಯವರಿಂದ ಹೇಳಿಸಿಕೊಂಡು ಕೆಲಸ ಮಾಡುವ ಅವಶ್ಯಕತೆ ಇಲ್ಲ. ಟೀಕೆ ಮಾಡುವವರಿಗೆ ಅಭಿವೃದ್ಧಿ ಕಾರ್ಯದ ಮೂಲಕ ಉತ್ತರ ನೀಡುತ್ತೇನೆ ಎಂದರು.

ಕಪ್ಪಡಿ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲು ಲೋಕೋಪಯೋಗಿ ಇಲಾಖೆಗೆ 25 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ಮಂಜೂರಾದ ಕೂಡಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು. ಈ ಸೇತುವೆ ನಿರ್ಮಾಣವಾದರೆ ಸಾಲಿಗ್ರಾಮ, ಮಿರ್ಲೆ, ಗಂಧನಹಳ್ಳಿ ಸೇರಿದಂತೆ ಹಲವು ಗ್ರಾಮಸ್ಥರು ಕೆ.ಆರ್.ನಗರಕ್ಕೆ ಬರಲು ಅನುಕೂಲವಾಗಲಿದೆ ಎಂದರು.

ಈ ವೇಳೆ ಪುರಸಭೆ ಸದಸ್ಯರಾದ ಜಾವಿದ್ ಪಾಷ, ಸೈಯದ್ ಸಿದ್ದಿಕ್, ಜಾಮೀಯಾ ಮಸೀದಿ ಕಮಿಟಿ ಅಧ್ಯಕ್ಷ ಅಪ್ಸರ್ ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಪುರಸಭೆ ಸದಸ್ಯರಾದ ಪ್ರಕಾಶ್, ಕೆ.ಎಸ್.ಶಂಕರ್, ಶಿವಕುಮಾರ್, ನಟರಾಜು, ಶಂಕರ್, ಮಾಜಿ ಅಧ್ಯಕ್ಷರಾದ ಗೀತಾ, ನರಸಿಂಹರಾಜು, ಮಾಜಿ ಸದಸ್ಯ ಕೆ.ವಿನಯ್, ಮುಖಂಡರಾದ ಪುಟ್ಟರಾಜು, ಆದರ್ಶ, ನವೀದ್, ಧರ್ಮರಾಜು, ಮುಖ್ಯಾಧಿಕಾರಿ ಡಾ.ಜಯಣ್ಣ ಮತ್ತಿತರರಿದ್ದರು.


ಚಿರತೆ ದಾಳಿ: 2 ಕರುಗಳು ಬಲಿ

ಹುಣಸೂರು, ಜು.1– ಚಿರತೆ ದಾಳಿಗೆ ಎರಡು ಕರುಗಳು ಬಲಿಯಾಗಿರುವ ಘಟನೆ ತಾಲೂಕಿನ ಹಬ್ಬನಕುಪ್ಪೆ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಲೋಕೇಶ್ ಎಂಬುವರಿಗೆ ಸೇರಿದ ಕುರುಗಳು ಸಾವನ್ನಪ್ಪಿವೆ. ಲೋಕೇಶ್ ಅವರು ಕರುಗಳನ್ನು ಎಂದಿನಂತೆ ತಮ್ಮ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದರು. ಆದರೆ ಭಾನುವಾರ ರಾತ್ರಿ ಚಿರತೆ ದಾಳಿ ನಡೆಸಿ ಕರುಗಳನ್ನು ಬಲಿ ಪಡೆದಿದ್ದು, ಒಂದು ಕರುವನ್ನು ಅಲ್ಲೇ ಬಿಟ್ಟು ಮತ್ತೊಂದನ್ನು ಎಳೆದೊಯ್ದಿದೆ. ಈ ಹಿಂದೆ ಲೋಕೇಶ್ ಅವರ ಮನೆ ಸಮೀಪ ಬೋನಿಟ್ಟು ಚಿರತೆಗಳನ್ನು ಸೆರೆ ಹಿಡಿಯಲಾಗಿತ್ತು. ಆದರೆ ಇದೀಗ ಮತ್ತೆ ಚಿರತೆ ಹಾವಳಿ ಮರುಕಳಿಸಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು ಚಿರತೆ ಸೆರೆಗೆ ಮುಂದಾಗಬೇಕು. ಅಲ್ಲದೇ ಕರುಗಳ ಸಾವಿನಿಂದ ಸಾವಿರಾರು ರೂ. ನಷ್ಟವಾಗಿದ್ದು, ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಲೋಕೇಶ್ ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸಾರಿಗೆ ಬಸ್‌ಗೆ ಸಿಲುಕಿ ವೃದ್ಧ ಸಾವು

ಹೆಚ್.ಡಿ.ಕೋಟೆ, ಜು.1– ಸಾರಿಗೆ ಬಸ್‌ಗೆ ಸಿಲುಕಿ ವೃದ್ಧನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ನಡೆದಿದೆ. ಪಟ್ಟಣದ ಹನುಮಂತನಗರದ ನಾಯಕರ ಬೀದಿ ನಿವಾಸಿ ಚಿಕ್ಕನಾಯಕ(80) ಸಾವನ್ನಪ್ಪಿದವರು. ಈತ ಸೋಮವಾರ ಬೆಳಗ್ಗೆ ತಮ್ಮ ಮಗನ ಜೊತೆ ಪಟ್ಟಣದ ತಾಲೂಕು ಕಚೇರಿಗೆ ತೆರಳಿ ಕೆಲಸ ಮುಗಿಸಿಕೊಂಡು ವಾಪಸ್ಸಾಗು ತ್ತಿದ್ದ ವೇಳೆ ಕೋಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಸಾರಿಗೆ ಬಸ್ ಚಕ್ರಕ್ಕೆ ಸಿಲುಕಿ



ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆಗೆ ಸಾರಿಗೆ ಬಸ್ ಚಾಲಕನ ನಿರ್ಲಕ್ಷ್ಯವೇ ಕಾರಣ ಎನ್ನಲಾಗಿದೆ. ವಿಷಯ ತಿಳಿಸು ಸ್ಥಳಕ್ಕಾಗಮಿಸಿದ ಸಾರಿಗೆ ಸಂಸ್ಥೆ ಅಧಿಕಾರಿಗಳು ಹಾಗೂ ಪೊಲೀಸರು ಪರಿಶೀಲನೆ ನಡೆಸಿದರು. ಅಲ್ಲದೇ ಸಾರಿಗೆ ಸಂಸ್ಥೆ ಅಧಿಕಾರಿಗಳು 25 ಸಾವಿರ ರೂ.ಗಳ ತಾತ್ಕಾಲಿಕ ಪರಿಹಾರ ನೀಡಿದರು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಸ್ ವಶಕ್ಕೆ ಪಡೆದಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮಕ್ಕಳನ್ನು ಸರ್ಕಾರಿ ಶಾಲಾ–ಕಾಲೇಜಿಗೆ ದಾಖಲಿಸುತ್ತಿರುವುದು ಶ್ಲಾಘನೀಯ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ಶಾಸಕ ಜಿ.ಡಿ. ಹರೀಶ್‌ಗೌಡ

ಹುಣಸೂರು, ಜು.1– ಇತ್ತೀಚೆಗೆ ಸರ್ಕಾರಿ ಶಾಲಾ–ಕಾಲೇಜಿನ ಸಾಧನೆ ಮನಗಂಡು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲಾ–ಕಾಲೇಜಿಗೆ ಸೇರ್ಪಡೆ ಮಾಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸ್ವಾಗತ ಕಾರ್ಯಕ್ರಮ ಮತ್ತು ಸಹಪಠ್ಯ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಮೈಸೂರು ಮಹಾರಾಣಿ, ನಂಜನಗೂಡು ಸೇರಿದಂತೆ ಹುಣಸೂರು ಬಾಲಕಿಯರ ಕಾಲೇಜು ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ದೊಡ್ಡ ಕಾಲೇಜು ಆಗಿದ್ದು, ಶೈಕ್ಷಣಿಕ ಪ್ರಗತಿ ಉತ್ತಮವಾಗಿದೆ. 1200ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಈ ಕಾಲೇಜು ದ್ವಿತೀಯ ಪಿಯುಸಿಯಲ್ಲಿ ಶೇ.97ರಷ್ಟು ಫಲಿತಾಂಶ ಪಡೆದಿದ್ದು, 63 ವಿದ್ಯಾರ್ಥಿನಿಯರು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹಲವು ವಿದ್ಯಾರ್ಥಿನಿಯರು 100ಕ್ಕೆ 100 ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿ ಗಳಿಗೆ ನಗದು ಬಹುಮಾನ ನೀಡುವು ದಾಗಿ ಶಾಸಕರು ಘೋಷಿಸಿದರು. ಅಲ್ಲದೇ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಸಾಲಿಗ್ರಾಮ ಬಾಲಕರ ಪದವಿ ಪೂರ್ವ ಕಾಲೇಜಿನ ಉಪನ್ಯಾಸ ನಾಗರಾಜು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಕೆ.ಹೆಚ್.ವೀರಭದ್ರಪ್ಪ ಮಾತನಾಡಿದರು. ಈ ವೇಳೆ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಪ್ರಾಂಶುಪಾಲ ರಾಮೇಗೌಡ, ಸಿಡಿಸಿ ಸಮಿತಿ ಉಪಾಧ್ಯಕ್ಷ ಶ್ರೀನಿವಾಸ್, ಕೆಂಪೇಗೌಡ, ಕೆ.ಕೃಷ್ಣ, ಶಿವಕುಮಾರ್, ಮಮತ, ಅಶೋಕ್, ಎಪಿಎಂಸಿ ಅಧ್ಯಕ್ಷ ಸುಹಾಸ್ ಇನ್ನಿತರರಿದ್ದರು.

ಮೂಗೂರಲ್ಲಿ ಶ್ರೀಮಂಟೇಸ್ವಾಮಿ ಗದ್ದುಗೆ ಧಾರ್ಮಿಕ ಉತ್ಸವ

ತಿ.ನರಸೀಪುರ, ಜು.1– ಗ್ರಾಮೀಣ ಭಾಗದಲ್ಲಿ ದೇವಾಲಯಗಳಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಹಲವು ವರ್ಷಗಳಿಂದ ತಾಲೂಕಿನ ಮೂಗೂರು ಗ್ರಾಮದ ಶ್ರೀರಾಮ ಕಾಲೋನಿಯಲ್ಲಿ ಶಿಥಿಲಗೊಂಡಿದ್ದ ಶ್ರೀಮಂಟೇಸ್ವಾಮಿ ಗದ್ದುಗೆಯನ್ನು ಜೀರ್ಣೋದ್ಧಾರಗೊಳಿಸಲಾಗಿದೆ ಎಂದು ಸಮಾಜ ಸೇವಕರಾದ ಜಯಮ್ಮ ಸುಂದರ್ ತಿಳಿಸಿದರು.

ತಾಲೂಕಿನ ಮೂಗೂರು ಗ್ರಾಮದ ಶ್ರೀರಾಮ ಕಾಲೋನಿಯಲ್ಲಿ ಸೋಮವಾರ ಜೀರ್ಣೋದ್ಧಾರಗೊಂಡ ಶ್ರೀಮಂಟೇಸ್ವಾಮಿ ಗದ್ದಿಗೆಯ ಧಾರ್ಮಿಕ ಉತ್ಸವ ಹಾಗೂ ದಾಸೋಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುರಾಣ ಪ್ರಸಿದ್ಧ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯವಿರುವ ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ಗದ್ದುಗೆ ಶಿಥಿಲಗೊಂಡಿತ್ತು. ಗದ್ದುಗೆ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರು ಗಮನ ಸೆಳೆದ ಹಿನ್ನೆಲೆಯಲ್ಲಿ ನಮ್ಮ ಕುಟುಂಬಕ್ಕೆ ದೇವರ ಶ್ರೀರಕ್ಷೆ ಅಪೇಕ್ಷಿಸಿ, ಜೀರ್ಣೋದ್ಧಾರ ಕಾರ್ಯ ಪೂರ್ಣಗೊಳಿಸುತ್ತೇವೆ ಎಂದರು.

ಯುವ ಮುಖಂಡ ರಾಹುಲ್ ಎಸ್.ಶಂಕರ್ ಮಾತನಾಡಿ, ಮೂಗೂರು ಗ್ರಾಮವೆಂದರೆ ನಮ್ಮ ಕುಟುಂಬಕ್ಕೆ ಮಾತೃ ವಾತ್ಸಲ್ಯ. ಶ್ರೀರಾಮ ಕಾಲೋನಿಯಲ್ಲಿರುವ ಶ್ರೀ ಮಂಟೇಸ್ವಾಮಿ ಹಾಗೂ ಶ್ರೀ ಚೆನ್ನಪ್ಪಾಜಿ ಗದ್ದುಗೆಯಲ್ಲಿ ಸೋಮವಾರ ಮತ್ತು ಶುಕ್ರವಾರ ಪೂಜೆ ನಡೆಯುವುದು ವಾಡಿಕೆ. ಕಾರ್ತಿಕ ಮಾಸದ ಸಂದರ್ಭ ಕುರುಬನಕಟ್ಟೆ ಕಂಡಾಯವನ್ನು ಕೂಡ ಧರಿಸಿ ಮೆರವಣಿಗೆ ಮಾಡುವ ಹಬ್ಬ ಪ್ರತೀತಿಯಲ್ಲಿದೆ. ಈ ಹಿನ್ನೆಲೆಯನ್ನು ಅರಿತು ಧಾರ್ಮಿಕ ಕೇಂದ್ರವನ್ನು ಅಭಿವೃದ್ಧಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ನಮ್ಮ ಅಜ್ಜಿ ಜಯಮ್ಮ ಸುಂದರ್ ಅವರು ಆಧುನಿಕ ವಿನ್ಯಾಸಕ್ಕೆ ತಕ್ಕಂತೆ ಜೀರ್ಣೋದ್ಧಾರ ಮಾಡಿದ್ದಾರೆ ಎಂದರು.



ಮೂಗೂರಲ್ಲಿ ಶ್ರೀಮಂಟೇಸ್ವಾಮಿ ಗದ್ದಿಗೆಯಲ್ಲಿ ಧಾರ್ಮಿಕ ಉತ್ಸವ ನಡೆಯಿತು.

ಕಾಲೋನಿ ಮುಖಂಡ ಎಸ್.ಮಹದೇವಸ್ವಾಮಿ ಮಾತನಾಡಿ, ನಮ್ಮೂರಿನವರೇ ಆದ ಜಯಮ್ಮ ಸುಂದರ್, ಅವರ ಪುತ್ರ, ಸಮುದಾಯದ ಮುಖಂಡ ಶಂಕರ್ ಹಾಗೂ ಅವರ ಪುತ್ರ ರಾಹುಲ್ ಸೇರಿದಂತೆ ಸಮಸ್ತ ಕುಟುಂಬಕ್ಕೆ ದೇವರ ಆಶೀರ್ವಾದ ಬಯಸಿ ಗದ್ದುಗೆ ಜೀರ್ಣೋದ್ಧಾರಗೊಳಿಸಿ ಉದ್ಘಾಟನೆಯನ್ನು ಸಾಂಪ್ರದಾಯಿಕವಾಗಿ ಅವರ ಕುಟುಂಬದ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಶ್ರೀ ಮಂಟೇಸ್ವಾಮಿ ಗದ್ದುಗೆ ಉದ್ಘಾಟನೆ ಪ್ರಯುಕ್ತ ಶ್ರೀರಾಮ ಕಾಲೋನಿಯಲ್ಲಿ ಬೆಳಗ್ಗಿಯಿಂದಲೇ ಪೂಜಾ ವಿಧಿ ವಿಧಾನಗಳು, ಯಜ್ಞಾದಿಗಳು ಹಾಗೂ ಕಂಡಾಯ ಮೆರವಣಿಗೆ, ಡೋಲು ನಗಾರಿಗಳ ಶಬ್ದಗಳ ನಡುವೆ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ದಾಸೋಹದಲ್ಲೂ ಸಾವಿರಾರು ಜನ ಪ್ರಸಾದ ಸ್ವೀಕರಿಸಿದ್ದರು. ಗ್ರಾಮದ ಮುಖಂಡರಾದ ಮಹದೇವಸ್ವಾಮಿ, ಪುಟ್ಟಸ್ವಾಮಿ, ಮಹದೇವಯ್ಯ, ದೇವರಾಜು ಪಿ. ಮಹದೇವಸ್ವಾಮಿ, ಉದಯ ಕುಮಾರ್, ರಮೇಶ್, ಗ್ರಾಪ್ರಂ ಸದಸ್ಯರಾದ ಚಂದ್ರಮ್ಮ, ಚೇತನ್ ಕುಮಾರ್, ಎಂ.ಪಿ. ಮಹದೇವಸ್ವಾಮಿ, ಲಿಂಗರಾಜು, ಸರ್ಕಾರಿ ನೌಕರರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ವೈದ್ಯರ ದೇವರೆಂದು ಕರೆದು ಅವರ ಮೇಲೆಯೇ ಹಲ್ಲೆ ಯತ್ನ ಖಂಡನೀಯ

● ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಂಜಿಆರ್ ಅರಸ್ ವಿಷಾದ ● ವೈದ್ಯರು ಯಾವುದೇ ಕ್ಷೇತ್ರದಲ್ಲಿದ್ದರೂ ಮೂಲ ವೃತ್ತಿ ಮರೆಯಬಾರದು

ಮೈಸೂರು,ಜು.1(ಎಂಟಿವೈ)– ಕೇವಲ ಬಾಯಿ ಮಾತಿಗಷ್ಟೇ ವೈದ್ಯರನ್ನು ದೇವರೆಂದು ಕರೆಯುವ ಜನ, ಕೆಲ ಸಂದರ್ಭದಲ್ಲಿ ತಪ್ಪು ಮಾಡದೇ ಇದ್ದರೂ ವೈದ್ಯರ ಮೇಲೆ ಹಲ್ಲೆ ಮಾಡುತ್ತಿರುವುದು ಖಂಡನೀಯ ಎಂದು ನಿವೃತ್ತ ವೈದ್ಯಾಧಿಕಾರಿ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್ ವಿಷಾದಿಸಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ವಿಶ್ವ ವೈದ್ಯರ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರನ್ನು ದೇವರು ಎಂದು ಕರೆಯುವ ಜನ ನಮ್ಮೊಂದಿಗೆ ಇದ್ದಾರೆ. ಹಾಗಾಗಿಯೇ ವೈದ್ಯೋ ನಾರಾಯಣ ಹರಿ ಎನ್ನುತ್ತಾರೆ. ಆದರೆ, ವೈದ್ಯರು ನಿಜವಾಗಿಯೂ ವೈದ್ಯರಲ್ಲ. ಅವರು ದೇವರ ಪ್ರತಿನಿಧಿಯಂತೆ ಕೆಲಸ ಮಾಡುವವರಾಗಿದ್ದಾರೆ. ಅನಾರೋಗ್ಯ ಕ್ಕೀಡಾದವರಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸುವ ಮಹತ್ತರ ಕಾರ್ಯವನ್ನು ವೈದ್ಯರು ಮಾಡುತ್ತಿದ್ದಾರೆ. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು ಎಂದರು.

ಭಯದ ವಾತಾವರಣ: ಹೃದಯಾಘಾತಕ್ಕೆ ಒಳಗಾದವರನ್ನು ವೈದ್ಯರು ಅವರ ಜೀವ ಉಳಿಸುವ ಪ್ರಯತ್ನ ಮಾಡುತ್ತಾರೆ. ಗಂಭೀರ ಅನಾರೋಗ್ಯ ಸಮಸ್ಯೆಗೆ ತುತ್ತಾದವರ ಜೀವ ಉಳಿಸುವುದಕ್ಕೂ ವೈದ್ಯರು ಶ್ರಮಿಸುತ್ತಾರೆ. ಆದರೆ, ರೋಗಿಗಳ ಪೋಷಕರ ನಿರೀಕ್ಷೆಯಂತೆ ಫಲಿತಾಂಶ ಬರದಿದ್ದರೆ ವಿನಾ ಕಾರಣ ವೈದ್ಯರ ಮೇಲೆ ಮುಗಿಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ವೈದ್ಯರು ತಪ್ಪು ಮಾಡದೇ ಇದ್ದರೂ ಅವರ ಮೇಲೆ ಹಲ್ಲೆ ಮಾಡುವ ಪ್ರಕರಣ ಹೆಚ್ಚಾಗುತ್ತಲೇ ಇದೆ. ಇದರಿಂದ ದೇವರೆಂದು ಬಾಯಿ ಮಾತಿಗೆ ಕರೆದು ವೈದ್ಯರ ಮೇಲೆ ಹಲ್ಲೆ ಮಾಡುವ ಮೂಲಕ ಅವರು ಭಯದ ವಾತಾವರಣದಲ್ಲಿರುವಂತೆ ಮಾಡಿದ್ದಾರೆ ಎಂದು ತಿಳಿಸಿದರು.

ಆದರ್ಶ ವೈದ್ಯರಾದ ಡಾ.ಬಿ.ಸಿ.ರಾಯ್ ಅವರ ಜನ್ಮ ದಿನದ ಅಂಗವಾಗಿ ಜು.1ರಂದು ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಡಾ.ಬಿ.ಸಿ.ರಾಯ್ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡು ಮುಖ್ಯಮಂತ್ರಿಯೂ ಆಗಿದ್ದರು. ಸಿಎಂ ಆಗಿದ್ದರೂ ತಮ್ಮ ವೃತ್ತಿಯನ್ನು ಬಿಟ್ಟುಕೊಡಲಿಲ್ಲ. ಬೆಳಗ್ಗಿನಿಂದ ಮುಖ್ಯಮಂತ್ರಿ ಕರ್ತವ್ಯ ನಿರ್ವಹಿಸಿ, ಪ್ರತಿದಿನ ಸಂಜೆ ವೇಳೆ ಎರಡು ಗಂಟೆ ರೋಗಿಗಳಿಗೆ ಆರೋಗ್ಯ ಸೇವೆ ನೀಡುವ ಮೂಲಕ ಅತ್ಯುನ್ನತ ಹುದ್ದೆಯಲ್ಲಿದ್ದರೂ ವೈದ್ಯಕೀಯ ಸೇವೆಯನ್ನು ಮುಂದುವರೆಸಿದ್ದರು. ಇದು ರಾಯ್ ಅವರಿಗೆ ವೈದ್ಯಕೀಯ ವೃತ್ತಿಯ ಮೇಲಿದ್ದ ಅಭಿಮಾನ, ಪ್ರೀತಿಯನ್ನು ತೋರ್ಪಡಿಸುತ್ತದೆ ಎಂದರು.

ಯಾವುದೇ ಕ್ಷೇತ್ರಕ್ಕೆ ಹೋದರೂ ವೃತ್ತಿ ಬಿಡಬಾರದು: ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಕ್ಷೇತ್ರದಿಂದ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ರಾಜಕೀಯ ಕ್ಷೇತ್ರ ಪ್ರವೇಶಿಸಿದ ನಂತರ ವೈದ್ಯಕೀಯ ವೃತ್ತಿ ಮರೆಯುತ್ತಿದ್ದಾರೆ. ಯಾವುದೇ ಕ್ಷೇತ್ರಕ್ಕೆ ಹೋದರೂ ವೈದ್ಯ ವೃತ್ತಿಯನ್ನು ಬಿಡಬಾರದು. ಅಲ್ಲದೆ, ಅನೇಕ ವೈದ್ಯರು ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದರೊಂದಿಗೆ ಸಾಹಿತ್ಯ ಕ್ಷೇತ್ರದಲ್ಲೂ ಗುರುತಿಸಿಕೊಂಡಿರುವುದು ಶ್ಲಾಘನೀಯ. ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪುಸ್ತಕದ ರೂಪದಲ್ಲಿ ಜನರಿಗೆ ಮನವರಿಕೆ ಮಾಡಿಕೊಡುವ ಮೂಲಕ ಆರೋಗ್ಯ ಕ್ಷೇತ್ರದ ಬಗ್ಗೆ ಜನರಿಗೆ ಸರಳ ವಿಧಾನದಲ್ಲಿ ತಿಳಿಸುವ ಕೆಲಸ ಮಾಡುವಂತೆ ಸಲಹೆ ನೀಡಿದರು.

ಇದೇ ವೇಳೆ ವೈದ್ಯರ ದಿನ ಹಾಗೂ ಡಾ.ಬಿ.ಸಿ.ರಾಯ್ ಅವರ ಸ್ಮರಣಾರ್ಥ ವೈದ್ಯರುಗಳಾದ ಡಾ.ಜಯಶ್ರೀ, ಡಾ.ಶ್ರೀನಿವಾಸ್, ಡಾ.ಹೆಚ್.ಹನುಮಂತಪ್ಪ, ಡಾ.ನೈರುತ್ಯ ಹಾಗೂ ಡಾ.ಸೌಮ್ಯ ಗುರುರಾಜ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಚುಟುಕು ಕವನ, ಹನಿಗವನ, ಮುಕ್ತಕ, ಗೀತಾಯನ, ಆಧುನಿಕ ವಚನ, ಹಾಸ್ಯ ಪ್ರಸಂಗ ಏರ್ಪಡಿಸಲಾಗಿತ್ತು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾ ಪ್ರಕಾಶ್, ಬಯೋವೆಲ್ಲಾ ತರಬೇತುದಾರ ಡಾ.ಗುರುರಾಜ್, ಕಸಾಪ ಗೌರವ ಕಾರ್ಯದರ್ಶಿ ಮ.ನ.ಲತಾ ಮೋಹನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ವಿಶ್ವ ವೈದ್ಯರ ದಿನದ ಕಾರ್ಯಕ್ರಮದಲ್ಲಿ ವೈದ್ಯರಾದ ಡಾ.ನೈರುತ್ಯ, ಡಾ.ಶ್ರೀನಿವಾಸ್, ಡಾ.ಹೆಚ್.ಹನುಮಂತಪ್ಪ, ಡಾ.ಜಯಶ್ರೀ ಹಾಗೂ ಡಾ.ಸೌಮ್ಯ ಗುರುರಾಜ್ ಅವರನ್ನು ಸನ್ಮಾನಿಸಲಾಯಿತು.

ಹಗಲು ಮಾತ್ರ ಕಣ್ಣಿಗೆ ಬೀಳುವ ಹುಲಿರಾಯ: ಕಂಗೆಟ್ಟ ಅರಣ್ಯ ಸಿಬ್ಬಂದಿ

ಗ್ರಾಮಸ್ಥರಲ್ಲಿ ಮತ್ತಷ್ಟು ದುಗುಡ



ಮೈಸೂರು,ಜು.1(ಎಂಟಿವೈ)– ಮೈಸೂರು ತಾಲೂಕಿನ ವರಕೋಡು–ಮೂಡಲ ಹುಂಡಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ದೊಣ್ಣೆಕಲ್ಲು ಬೆಟ್ಟ ಸಮೀಪದ ರಸ್ತೆಯಲ್ಲಿ ಶನಿವಾರ ಬೆಳಗ್ಗೆ ಹಾಡಹಗಲೇ ಕಾಣಿಸಿಕೊಂಡ ಹುಲಿ 48 ಗಂಟೆಯಾದರೂ ಮತ್ತೆ ಪತ್ತೆಯಾಗಿಲ್ಲದ ಕಾರಣ ಅರಣ್ಯ ಸಿಬ್ಬಂದಿ ಕಂಗೆಟ್ಟಿದ್ದರೆ, ಗ್ರಾಮಸ್ಥರಲ್ಲಿ ಭಯದ ಛಾಯೆ ಮುಂದುವರೆದಿದೆ.

ಮೂಡಲಹುಂಡಿ ಗ್ರಾಮದಿಂದ ಬೆಟ್ಟದ ತಪ್ಪಲಿನ ಕಾಲುವೆ ಏರಿಯ ಉದ್ಭವ ಮಹದೇಶ್ವರ ದೇವಾಲಯ ಹಾಗೂ ವರಕೋಡು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಡುವೆ ಶನಿವಾರ ಬೆಳಿಗ್ಗೆ 9.30ರಲ್ಲಿ ಕಂಡ ಹುಲಿ ಮತ್ತೆ ಅರಣ್ಯ ಇಲಾಖೆಗೆ ಚಳ್ಳೆಹಣ್ಣು ತಿನ್ನಿಸಿದೆ. ಹುಲಿ ಪತ್ತೆಗಾಗಿ 25 ಕ್ಯಾಮರಾ ಟ್ರ್ಯಾಪ್ ಬಳಸಿದ್ದರೂ, ಒಂದೇ ಒಂದು ಕ್ಯಾಮರಾದಲ್ಲೂ ಹುಲಿ ಚಲನವಲನ ಪತ್ತೆಯಾಗಿಲ್ಲ. ಅಲ್ಲದೆ, ಭಾನುವಾರ ರಾತ್ರಿ 3–4 ಬಾರಿ ನೈಟ್ ವಿಷನ್ ಡ್ರೋನ್ ಕ್ಯಾಮರಾ ಬಳಸಿ ಕಾಂಬಿಂಗ್ ಕಾರ್ಯಾಚರಣೆ ನಡೆಸಲಾಯಿತಾದರೂ ಹುಲಿ ಸುಳಿವು ಪತ್ತೆಯಾಗಿಲ್ಲ.

ಆದರೆ, ಮುಂಜಾನೆ ಸಮೀಪದ ಕೆಲ ಕಬ್ಬಿನ ಗದ್ದೆ ಬಳಿ ನವಿಲುಗಳು ಆತಂಕದಿಂದ ಚೀರಾಡುತ್ತಿದ್ದ ಶಬ್ದ ಕೇಳಿಸಿದೆ ಯಾದರೂ ಹುಲಿ ಇರುವಿಕೆ ಬಗ್ಗೆ ಮಾಹಿತಿ ಕಾರ್ಯಾಚರಣೆಯಲ್ಲಿ ತೊಡಗಿರುವ ಸಿಬ್ಬಂದಿಗಳಿಗೆ ಲಭ್ಯವಾಗಿಲ್ಲ. ಆದರೂ ಸೋಮವಾರ ದಿನವಿಡೀ ಹುಲಿ ಕಂಡು ಬಂದ ಪ್ರದೇಶದಲ್ಲಿ ಅಳವಡಿಸಿರುವ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಇಂದು ರಾತ್ರಿಯೂ ಡ್ರೋನ್ ಹಾರಿಸಿ ಪರಿಶೀಲಿಸಲು ನಿರ್ಧರಿಸಲಾಗಿದ್ದು, ಬೆಟ್ಟದ ತಪ್ಪಲಿನ ಕಾಲುವೆ ಏರಿ ಮೇಲೆ ಜನ, ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಅಲ್ಲದೆ, ಸ್ಥಳದಲ್ಲಿಯೇ ಎಲ್‌ಟಿಎಫ್ ಪಡೆ ನಿಯೋಜಿಸಲಾಗಿದೆ.

ಇಂದು ಮೈಸೂರಲ್ಲಿ ಕಂದಾಯ ಸಚಿವರ ಪ್ರವಾಸ; ಇಲಾಖೆಯ ಪ್ರಗತಿ ಪರಿಶೀಲನಾ ಸಭೆ



ಮೈಸೂರು,ಜು.1(ಪಿಎಂ)– ಕಂದಾಯ ಸಚಿವ ಕೃಷ್ಣ ಬೈರೇಗೌಡ ಜು.2ರಂದು ಮೈಸೂರು ಪ್ರವಾಸ ಕೈಗೊಂಡಿದ್ದಾರೆ. ಬೆಳಗ್ಗೆ 8ಕ್ಕೆ ಬೆಂಗಳೂರು (ರಸ್ತೆ ಮೂಲಕ) ನಿರ್ಗಮಿಸುವ ಸಚಿವರು, ಬೆಳಗ್ಗೆ 10ಕ್ಕೆ ಮೈಸೂರಿಗೆ ಆಗಮಿಸಲಿದ್ದಾರೆ. ಬಳಿಕ ಬೆಳಗ್ಗೆ 10.30ರಿಂದ ಸಂಜೆ 6ರವರೆಗೆ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ಮೈಸೂರು ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ನಂತರ ಸಂಜೆ 7ಕ್ಕೆ ಮೈಸೂರಿನಿಂದ ನಿರ್ಗಮಿಸುವ ಸಚಿವರು, ರಾತ್ರಿ 9ಕ್ಕೆ ಬೆಂಗಳೂರು (ರಸ್ತೆ ಮೂಲಕ) ತಲುಪಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜುಲೈ 15ರಿಂದ ವಿಧಾನಮಂಡಲ ಮುಂಗಾರು ಅಧಿವೇಶನ

ಬೆಂಗಳೂರು, ಜು. 1– ಕರ್ನಾಟಕ ವಿಧಾನಸಭೆಯ ಮುಂಗಾರು ಅಧಿವೇಶನಕ್ಕೆ ದಿನಾಂಕ ನಿಗದಿಯಾಗಿದೆ. ಜುಲೈ 15ರಿಂದ 26ರವರೆಗೆ ಹತ್ತು ದಿನಗಳ ಕಾಲ ಅಧಿವೇಶನ ನಡೆಯಲಿದೆ. ಅಧಿವೇಶನದ ದಿನಾಂಕ ನಿಗದಿಗೆ ಕಳೆದ ಸಚಿವ ಸಂಪುಟ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯನವರ ವಿವೇಚನೆಗೆ ಬಿಡಲಾಗಿತ್ತು. ಅದರಂತೆ ಸಿದ್ದರಾಮಯ್ಯ ಅವರು ಅಧಿವೇಶನದ ದಿನಾಂಕ ಅಂತಿಮಗೊಳಿಸಿದ್ದು, ಈ ಕುರಿತು ರಾಜ್ಯಪಾಲರಿಗೆ ಶಿಫಾರಸ್ಸು ಮಾಡಲಾಗಿದೆ. ಇನ್ನು ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಆಡಳಿತದಲ್ಲಿನ ಲೋಪ ಎತ್ತಿ ಸರ್ಕಾರದ ಮೇಲೆ ಮುಗಿಬೀಳಲು ಸಜ್ಜಾಗಿವೆ ಅದರಲ್ಲೂ ಮುಖ್ಯವಾಗಿ ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡಲಿವೆ

ಈ ಮುಂಗಾರು ಅಧಿವೇಶನದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ. ಇಂಧನ, ಹಾಲಿನ ಬೆಲೆ ಏರಿಕೆ ವಿರೋಧಿಸಿ ಸರ್ಕಾರದ ವಿರುದ್ಧ ಮುಗಿಬೀಳಲಿವೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಹಗರಣ, ಮೈಸೂರು ಮುಡಾದಲ್ಲಿನ ಹಗರಣಗಳನ್ನು ಇಟ್ಟುಕೊಂಡು ಅಧಿವೇಶನದಲ್ಲಿ ಸರ್ಕಾರವನ್ನು ಕಟ್ಟಿ ಹಾಕುವ ತಂತ್ರವನ್ನು ಬಿಜೆಪಿ–ಜೆಡಿಎಸ್ ಮಾಡಿವೆ. ಮತ್ತೊಂದೆಡೆ ಆಡಳಿತರೂಢ ಕಾಂಗ್ರೆಸ್ ಸರ್ಕಾರ, ವಿಪಕ್ಷಗಳ ಆರೋಪ, ಪ್ರಶ್ನೆಗಳನ್ನು ಹೇಗೆ ಎದುರಿಸುತ್ತದೆ ಎನ್ನುವುದನ್ನು ಕಾದುನೋಡಬೇಕಿದೆ.

ವೈದ್ಯರ ಆಯಸ್ಸೇ 5 ರಿಂದ 10 ವರ್ಷ ಕಡಿಮೆಯಾಗುತ್ತಿದೆ

ಒತ್ತಡದ ನಡುವೆ ಕಾರ್ಯನಿರ್ವಹಿಸುವ ವೈದ್ಯರ ಪರಿಸ್ಥಿತಿ ವಿವರಿಸಿದ ಡಾ. ಕೆ.ಎಸ್.ಸದಾನಂದ

ಮೈಸೂರು,ಜು.1(ಎಂಟಿವೈ)– ಒತ್ತಡದಿಂದ ಕೆಲಸ ಮಾಡುತ್ತಿರುವ ವೈದ್ಯರ ಆಯಸ್ಸು ಸಾಮಾನ್ಯ ಮನುಷ್ಯರಿಗಿಂತ 5 ರಿಂದ 10 ವರ್ಷ ಕಡಿಮೆಯಾಗುತ್ತಿದೆ ಎಂದು ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ್ ವಿಷಾದಿಸಿದ್ದಾರೆ.

ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಬಹುತೇಕ ವೈದ್ಯರು ದಿನದಲ್ಲಿ 12 ಗಂಟೆಗಿಂತಲೂ ಹೆಚ್ಚು ಸಮಯ ಕೆಲಸ ಮಾಡುತ್ತಾರೆ. ಹಲವು ವೈದ್ಯರು ಮಾನಸಿಕ ಒತ್ತಡಕ್ಕೆ ಒಳಗಾಗಿ ಅಧಿಕ ರಕ್ತದೊತ್ತಡ, ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದಾರೆ. ಕೆಲವು ವೈದ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳದೆ ಖಾಯಿಲೆ ಬಂದಾಗ ಬರುತ್ತಾರೆ. ವೈದ್ಯರ ವೈಯಕ್ತಿಕ ಬದುಕಿಗೆ ಸಮಯವೇ ಇಲ್ಲದಂತಾಗಿದೆ. ವೈದ್ಯರು ಮೊದಲು ನಿಮ್ಮ ನಿಮ್ಮ ಆರೋಗ್ಯದ ಕಡೆ ಗಮನವಿಟ್ಟು ವ್ಯಾಯಾಮ, ಯೋಗ, ನಿಗದಿತ ಸಮಯಕ್ಕೆ ಊಟ ಮಾಡುವುದರೊಂದಿಗೆ ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಪ್ರತಿಯೊಬ್ಬ ವೈದ್ಯರು ರೋಗಿಯ ಪ್ರಾಣ ಉಳಿಸಲು ಪ್ರಯತ್ನಪಡುತ್ತಾರೆ. ರೋಗಿಗಳಿಗೂ ವೈದ್ಯರ ಮೇಲೆ ಹೆಚ್ಚು ನಿರೀಕ್ಷೆ ಇರುತ್ತದೆ. ಆದರೆ ರೋಗಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರೆ ಸಂಬಂಧಿಕರು ವೈದ್ಯರ ಮೇಲೆ ಹಲ್ಲೆ ಮಾಡುವುದು, ಕೋರ್ಟಿಗೆ ಎಳೆಯುವುದು ಸರಿಯಲ್ಲ. ಆದ್ದರಿಂದ ರೋಗಿಗಳು ವೈದ್ಯರ ಇತಿಮಿತಿಗಳನ್ನು ಅರ್ಥಮಾಡಿಕೊಂಡು ಸಹಕರಿಸಬೇಕು. ರೋಗಿ ಮತ್ತು ವೈದ್ಯರ ನಡುವೆ ಉತ್ತಮ ಬಾಂಧವ್ಯ ಇರಬೇಕು ಎಂದರು.

ಈ ಸಂದರ್ಭದಲ್ಲಿ ಡಾ. ದಿನೇಶ್, ಡಾ.ಹರ್ಷಬಸಪ್ಪ, ಡಾ.ರಜಿತ್, ಡಾ.ಶ್ರೀನಿಧಿ ಹೆಗ್ಗಡೆ, ಡಾ.ಜಯಪ್ರಕಾಶ್, ಡಾ.ಕುಮಾರ್, ಡಾ.ಶ್ರೀಮಂತ್, ಡಾ.ಅಶ್ವಿನಿ, ಡಾ.ಸ್ನೇಹಲ್, ಡಾ.ರಾಘವೇಂದ್ರ, ಹಿರಿಯ ಶುಶ್ರೂಷಾಧಿಕಾರಿ ಹರೀಶ್‌ಕುಮಾರ್, ನರ್ಸಿಂಗ್ ಅಧೀಕ್ಷಕಿ ಯೋಗಲಕ್ಷ್ಮಿ, ಯೋಗಾನಂದ, ರಮೇಶ್ ಉಪಸ್ಥಿತರಿದ್ದರು.



ವಿಶ್ವ ವೈದ್ಯರ ದಿನದ ಅಂಗವಾಗಿ ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ್ ಅವರನ್ನು ಆಸ್ಪತ್ರೆಯ ವೈದ್ಯರು ಅಭಿನಂದಿಸಿದರು.

ಮೈಸೂರಲ್ಲಿ ಎರಡು ಪ್ರತ್ಯೇಕ ಪ್ರಕರಣ: ಮೂವರು ಸಾವು

ಮೈಸೂರು, ಜು. 1(ಆರ್‌ಕೆ)– ಮೈಸೂರಲ್ಲಿ ಇಂದು ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಸಾವನ್ನಪ್ಪಿದ್ದಾರೆ.

ಮೈಸೂರಿನ ದಟ್ಟಗಳ್ಳಿಯ ಸೋಮೇಶ್ವರನಗರ ನಿವಾಸಿಯಾದ ಸ್ವಿಗ್ಗಿ ಫುಡ್ ಡೆಲಿವರಿ ಬಾಯ್ ಹೇಮಂತ್(23), ಶ್ರೀರಂಗಪಟ್ಟಣ ತಾಲೂಕು ಗಂಜಾಂ ನಿವಾಸಿ ಶ್ರೀನಿವಾಸ(23) ಹಾಗೂ ತಾಂಡವಪುರದ ಟಿ.ಪಿ. ಮಹದೇವ(50) ಮೃತಪಟ್ಟವರು.

ಸ್ವಿಗ್ಗಿ ಫುಡ್ ಡೆಲಿವರಿ ಮಾಡುತ್ತಿದ್ದ ಹೇಮಂತ್ ಹೀರೋ ಹೋಂಡಾ ಪ್ಯಾಷನ್ ಪ್ರೋ ಬೈಕ್‌ನಲ್ಲಿ ಹುಣಸೂರು ರಸ್ತೆಯಿಂದ ಬೋಗಾದಿ ರಸ್ತೆ ಕಡೆಗೆ ಬರುತ್ತಿದ್ದಾಗ ಎದುರಿನಿಂದ ವೇಗವಾಗಿ ಬಂದ ಬಜಾಜ್ ಪಲ್ಸರ್ ಬೈಕ್ ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ಬಳಿ ಮಧ್ಯರಾತ್ರಿ 12.15 ವೇಳೆಗೆ ಅಪ್ಪಳಿಸಿದೆ.

ಪರಿಣಾಮ ಹೇಮಂತ್ ತಲೆಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಬಜಾಜ್ ಪಲ್ಸರ್ ಬೈಕ್ ಸವಾರರಾದ ಶ್ರೀನಿವಾಸ ಮತ್ತು ಮೇಟಗಳ್ಳಿಯ ಬಿಎಂಶ್ರೀ ನಗರದ ಚಂದನ್‌ನನ್ನು ವಿವಿ ಮೊಹಲ್ಲಾದ ಡಿಆರ್‌ಎಂ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಶ್ರೀನಿವಾಸ ಕೊನೆಯುಸಿರೆಳೆದಿದ್ದಾನೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ತಾಂಡವಪುರದ ಟಿ.ಪಿ. ಮಹದೇವ, ಮೈಸೂರಿನಿಂದ ಹೀರೋ ಹೋಂಡಾ ಬೈಕ್‌ನಲ್ಲಿ (ಕೆಎ 09–ಇಎ 7067) ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಲಾರಿ (ಕೆಎ 12–ಎ 3366) ನಂಜನಗೂಡು ರಸ್ತೆಯ ಗುಜ್ಜೇಗೌಡನಹುಂಡಿ ಬಳಿ ಇಂದು ಮಧ್ಯಾಹ್ನ 12.30ರಲ್ಲಿ ಡಿಕ್ಕಿ ಹೊಡೆದು ಕೆಳಕ್ಕೆ ಬಿದ್ದ ಬೈಕ್ ಸವಾರನ ಮೇಲೆ ಹರಿದ ಪರಿಣಾಮ ಅವರು ಸ್ಥಳದಲ್ಲೇ ಅಸುನೀಗಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ನಂಜನಗೂಡು ಸಮೀಪದ ದಿ ಸೌತ್ ಇಂಡಿಯಾ ಪೇಪರ್ ಮಿಲ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಮಹದೇವ್, ಅನಾರೋಗ್ಯದಿಂದಿದ್ದ ತಮ್ಮ ಮಕ್ಕಳಿಬ್ಬರಿಗೆ ಔಷಧಿ ತೆಗೆದುಕೊಂಡು ತಾಂಡವಪುರಕ್ಕೆ ಹಿಂದಿರುಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ಪ್ರಕರಣ ದಾಖಲಿಸಿಕೊಂಡಿರುವ ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು, ಬೈಕ್ ಮತ್ತು ಲಾರಿಯನ್ನು ವಶಕ್ಕೆ ಪಡೆದು, ಪರಾರಿಯಾಗಿರುವ ಚಾಲಕನ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಕಡ್ಡಾಯ ಕಾನೂನಿಗೆ ಆಗ್ರಹ

ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ

ಮೈಸೂರು,ಜು.1(ಎಂಟಿವೈ)– ರಾಜ್ಯದಲ್ಲಿ ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗ ನೀಡುವ ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದ ಕರವೇ ಕಾರ್ಯಕರ್ತರು, ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವಭೌಮರು. ಆದರೆ, ಕನ್ನಡಿಗರಿಗೆ ದೊರಕಬೇಕಾದ ಅವಕಾಶಗಳು ಅನ್ಯ ಭಾಷಿಗರ ಪಾಲಾಗುತ್ತಿವೆ. ದೇಶದ ವಿವಿಧೆಡೆಯಿಂದ ರಾಜ್ಯಕ್ಕೆ ಭಾರಿ ಪ್ರಮಾಣದಲ್ಲಿ ವಲಸಿಗರು ಬಂದು ನೆಲೆಸಿದ್ದಾರೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರಿನಂತಹ ಮಹಾನಗರದಲ್ಲಿ ವಲಸೆ ಪ್ರಮಾಣ ಮಿತಿಮೀರಿದೆ. ಇದರಿಂದ ರಾಜ್ಯದಲ್ಲಿ ಕನ್ನಡಿಗರಿಗೆ ಉದ್ಯೋಗ ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡಿಗರಿಗೆ ನ್ಯಾಯ ಒದಗಿಸಲು ಕಾನೂನು ರೂಪಿಸಿ, ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಕನ್ನಡ ನೆಲದಲ್ಲಿ ಕನ್ನಡಿಗರಿಗೇ ಉದ್ಯೋಗದಲ್ಲಿ ಆದ್ಯತೆ ದೊರಕಬೇಕೆಂದು ಹಲವು ದಶಕಗಳಿಂದ ಹೋರಾಟ ಮಾಡಲಾಗುತ್ತಿದೆ. ಆದರೆ, ಸಂಬಂಧ ಡಾ.ಸರೋಜಿನಿ ಮಹಿಷಿ ವರದಿ ಜಾರಿಯಾಗಿಲ್ಲ. ಖಾಸಗಿ ಸಂಸ್ಥೆಗಳು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಬೇರೆ ರಾಜ್ಯದವರನ್ನು ನೇಮಿಸಿಕೊಳ್ಳುತ್ತಿದ್ದಾರೆ. 2019ರಲ್ಲಿ ಕಾರ್ಮಿಕ ಇಲಾಖೆಯ ಮೂಲಕ ನಿಯಮಗಳಿಗೆ ಬದಲಾವಣೆ ತಂದು ಕನ್ನಡಿಗರಿಗೆ ಉದ್ಯೋಗ ನೀಡಬೇಕೆಂದು ಸೂಚಿಸಿದ್ದರೂ ಧಿಕ್ಕರಿಸುವ ಪ್ರವೃತ್ತಿ ಮುಂದುವರೆದಿದೆ. ಕಾಯ್ದೆ ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ಈ ವಿಚಾರದಲ್ಲಿ ಸರ್ಕಾರ ಇಚ್ಛಾಶಕ್ತಿ ತೋರಬೇಕು. ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯ್ದೆ–1946ರ ಅನ್ವಯ ರಾಜ್ಯ ಸರ್ಕಾರವು ಬಲಿಷ್ಠವಾದ ಕಾನೂನು ರೂಪಿಸಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಎಲ್ಲಾ ಖಾಸಗಿ ಸಂಸ್ಥೆಯ ಸಿ, ಡಿ ದರ್ಜೆಯ ಹುದ್ದೆಗಳಲ್ಲಿ ಶೇ.100ರಷ್ಟು ಕನ್ನಡಿಗರಿಗೆ ಮೀಸಲಿಡಬೇಕು. ಇತರ ಹುದ್ದೆಗಳಲ್ಲಿ ಶೇ.80ರಷ್ಟು ಅವಕಾಶ ಕೊಡಬೇಕು. 15 ವರ್ಷಗಳ ಕಾಲ ರಾಜ್ಯದಲ್ಲಿ ನೆಲೆಸಿರುವ ಜನರನ್ನು ಕನ್ನಡಿಗರು ಎಂದು ಪರಿಗಣಿಸುವ ನಿಯಮವನ್ನು ಬದಲಿಸಬೇಕು. ಕಡ್ಡಾಯವಾಗಿ ಕನ್ನಡ ಬರವಣಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಕನ್ನಡಿಗರು ಎಂದು ಪರಿಗಣಿಸಬೇಕು ಎಂದೂ ಒತ್ತಾಯಿಸಿದರು.

ನಿಯಮಾವಳಿ ಪಾಲಿಸದ ಸಂಸ್ಥೆಗಳಿಗೆ ನೀಡಿರುವ ಮಾನ್ಯತೆ ರದ್ದುಗೊಳಿಸಿ, ಅವುಗಳಿಗೆ ಕೊಟ್ಟಿರುವ ಭೂಮಿ, ವಿವಿಧ ಸೌಲಭ್ಯವನ್ನು ವಾಪಸ್ ಪಡೆದುಕೊಳ್ಳಬೇಕು. ಕೇಂದ್ರ ಸರ್ಕಾರದ ಇಲಾಖೆಗಳು, ಸಾರ್ವಜನಿಕ ವಲಯದ ಘಟಕಗಳಲ್ಲಿ ಗ್ರೂಪ್ ಸಿ, ಡಿ ದರ್ಜೆ ಹುದ್ದೆಗಳಿಗೆ ಕನ್ನಡಿಗರಿಗೆ ಶೇ.100ರಷ್ಟು ಮೀಸಲಾತಿ ನೀಡಬೇಕು. ಈ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕಲ್ಪಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಸರ್ಕಾರ ರೂಪಿಸುವ ಕಾನೂನನ್ನು ಸಮರ್ಪಕವಾಗಿ ಜಾರಿಗೆ ತರಲು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರ ನೀಡಬೇಕು ಎಂದು ಆಗ್ರಹಿಸಿದರು.

ಸಂಘಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್, ಮುಖಂಡರಾದ ಲೋಕೇಶ್, ಶ್ರೀನಿವಾಸ್, ಶಿವು, ಸುನೀಲ್, ಹೇಮಂತ್, ಮೋಹನ್ ಕುಮಾರಿ, ಪುಷ್ಪಲತಾ ಇನ್ನಿತರು ಪಾಲ್ಗೊಂಡಿದ್ದರು



ರಾಜ್ಯದಲ್ಲಿ ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗಾವಕಾಶ ಕಾನೂನು ರೂಪಿಸಿ ಜಾರಿಗೊಳಿಸುವಂತೆ ಆಗ್ರಹಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗರುಡನ್ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಪೊಕ್ರಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮುಂಜ್ಯಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶತಭಿಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ(3ಡಿ) (ತೆ): ಬೆ.11.45ಕ್ಕೆ, ಮ.3.15ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ಸಂ.6.45ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.30ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.9.45ಕ್ಕೆ, ಪ್ಯಾರಡೈಸ್ (ಮ): ರಾ.7.30ಕ್ಕೆ.
ಸ್ಕ್ರೀನ್ 3	ಎ ಕ್ವೈಟ್ ಪ್ಲೇಸ್ ಡೇ ಒನ್ (ಇಂ): ಬೆ.10.50ಕ್ಕೆ, ರಾ.10.10ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.25ಕ್ಕೆ, ಕೋಟಿ (ಕ): ರಾ.7.10ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ(3ಡಿ) (ತೆ): ಬೆ.9.45ಕ್ಕೆ, ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಬೆ.10.45ಕ್ಕೆ, ಮ.3.35ಕ್ಕೆ, ಕರ್ಮದೊಳಗೆ (ಕ): ಮ.1.40ಕ್ಕೆ, ಕೋಟಿ (ಕ): ಸಂ.6.25ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಬೆ.10.30ಕ್ಕೆ, ಮ.2.30ಕ್ಕೆ, ಸಂ.6ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅರ್ಜಿ ಆಹ್ವಾನ

ಮೈಸೂರು.ಜು.1– 2024–25ನೇ ಸಾಲಿಗೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ ದೀನದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ, ವ್ಯಕ್ತಿಗತ ಉದ್ಯಮಶೀಲತೆ (ಸಾಲ ಮತ್ತು ಸಹಾಯಧನ), ಗುಂಪು ಉದ್ಯಮ ಕಾರ್ಯಕ್ರಮದಡಿ, ಗುಂಪು ಉದ್ಯಮ ಕೈಗೊಳ್ಳಲು, ಎಸ್.ಹೆಚ್.ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್ ಕಾರ್ಯಕ್ರಮದಡಿ ಸಾಲ ಪಡೆಯಲು, ಕೌಶಲಾಭಿವೃದ್ಧಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಕಾರ್ಯಕ್ರಮದಡಿ ವಿವಿಧ ತರಬೇತಿಯನ್ನು ಪಡೆಯಲು ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಲು ಆಸಕ್ತ ಅರ್ಹ ಫಲಾನುಭವಿಗಳಿಂದ, ಗುಂಪುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವವರು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಿವಾಸಿಗಳಾಗಿರಬೇಕು, ಬಡತನ ರೇಖೆಗಿಂತ ಕೆಳಗಿನ ಕುಟುಂಬದವರಾಗಿರಬೇಕು. ಅರ್ಜಿಯೊಂದಿಗೆ ರೇಷನ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ನಿವಾಸಿ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಹುಟ್ಟಿದ ತಾರೀಖು ದೃಢೀಕರಣ ಪತ್ರ ಲಗತ್ತಿಸಬೇಕು. ಆಸಕ್ತರು ನಿಗದಿತ ನಮೂನೆಗಳಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು ಕಚೇರಿಗೆ ಸಲ್ಲಿಸಲು ಜುಲೈ 24 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಬಂಧಪಟ್ಟ ಶಾಖೆಯಲ್ಲಿ ವಿಚಾರಿಸಬಹುದು ಹಾಗೂ ಕಚೇರಿಯ ದೂ.ಸಂ:0821–2001931 ಸಂಪರ್ಕಿಸಬಹುದು ಎಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	95.50 ಅಡಿ
ಒಳಹರಿವು	9369 ಕ್ಯೂಸೆಕ್
ಹೊರಹರಿವು	518 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಸೋಮವಾರ	2277 ಅಡಿ
ಒಳಹರಿವು	5560 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ




ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2838.42 ಅಡಿ
ಒಳಹರಿವು	1673 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್



ಹಸಿರು ನಮ್ಮ ಉಸಿರು

ಕೇಂದ್ರದ ಹೊಸ ಕಾನೂನುಗಳಿಗೆ ತಿದ್ದುಪಡಿಗೆ ರಾಜ್ಯ ಸರ್ಕಾರ ಚಿಂತನೆ: ಹೆಚ್.ಕೆ. ಪಾಟೀಲ್

ಬೆಂಗಳೂರು, ಜು.1– ಕೇಂದ್ರ ಸರ್ಕಾರ ಜಾರಿಗೆ ತಂದ ಹೊಸ 3 ಕಾನೂನುಗಳನ್ನು ರಾಜ್ಯ ಸರ್ಕಾರ ವಿರೋಧ ಮಾಡಿದೆ. ಇಂದು ಈ ಬಗ್ಗೆ ವಿಧಾನಸೌಧದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಹೆಚ್.ಕೆ. ಪಾಟೀಲ್, ಕೇಂದ್ರ ಸರ್ಕಾರ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಬದಲಾವಣೆ ಮಾಡಲಾಗಿದೆ. ಯಾವ ಸರ್ಕಾರ ಕಾನೂನು ಮಾಡುತ್ತದೆ, ಅದನ್ನು ಅವರ ಅವಧಿಯಲ್ಲಿ ಜಾರಿ ಮಾಡುವ ನೈತಿಕ ಹಕ್ಕಿದೆ. ಆದರೆ, ಸರ್ಕಾರದ ಅವಧಿ ಮುಗಿದ ಮೇಲೆ ಜಾರಿ ಮಾಡುವುದು ಅನೈತಿಕ ಹಾಗೂ ರಾಜಕೀಯ ಅಸಂಬದ್ಧ ಕ್ರಮವಾಗಿದೆ.



ಈ ಮೂರು ತಾಯಿ ಕಾನೂನುಗಳು, ಸಂವಿಧಾನದ ತಿದ್ದುಪಡಿ ಮಹತ್ವ ಇದಕ್ಕೆ ಕೊಡಲಾಗುತ್ತದೆ. ಈ ಕಾನೂನು ಜಾರಿಯ ಸಂದರ್ಭದಲ್ಲಿ ಎಲ್ಲಾ ಎಚ್ಚರಿಕೆ ಕೈಗೊಳ್ಳಬೇಕು. ಹಿಂದಿನ ಸರ್ಕಾರದ ಕ್ಯಾಬಿನೆಟ್‌ನಲ್ಲಿ ಆದ ನಿರ್ಧಾರ ಇದೀಗ ಜಾರಿಗೊಳಿಸಿದ್ದು ಸರಿಯಲ್ಲ. ಅದನ್ನು ಆಗಲೇ ಜಾರಿ ಮಾಡುವ ಹಕ್ಕು ಅವರಿಗೆ ಇತ್ತು. ಈಗ ಹೊಸ ಸರ್ಕಾರ ಬಂದ ನಂತರ ಜಾರಿ ಮಾಡಿರುವುದು ಅಸಂಬದ್ಧ ಎಂದರು.

2023 ರಲ್ಲಿ ಅಮಿತ್ ಶಾ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದಿದ್ದರು. ಈ ಕಾನೂನುಗಳ ಕುರಿತು ಪರಿಶೀಲನೆ, ಸಲಹೆ ಸೂಚನೆ ಕೇಳಿದ್ದರು. ಆಗ ಸಿದ್ದರಾಮಯ್ಯ ನಮಗೊಂದು ಪತ್ರ ಬರೆದು ಈ ಕಾನೂನುಗಳ ಕುರಿತು ತಜ್ಞರ ಸಮಿತಿ ರಚನೆ ಮಾಡಿ ವರದಿ ನೀಡಲು ಸೂಚಿಸಿದ್ದರು. ಹೀಗಾಗಿ ನಾವು ತಜ್ಞರ ಸಮಿತಿ ವರದಿ ಹಾಗೂ ನನ್ನ ಅಭಿಪ್ರಾಯ ತಿಳಿಸಿ ಸಿಎಂಗೆ ಪತ್ರ ಕಳಿಸಿದ್ದೆ. ಇದನ್ನು ಉಲ್ಲೇಖಿಸಿ ಅಮಿತ್ ಶಾಗೆ ಸಿದ್ದರಾಮಯ್ಯ ಪತ್ರ ಬರೆದು, ವರದಿಯನ್ನು ನೀಡಿದ್ದರು. ನಾವು ಆ ಸುದೀರ್ಘ ಪತ್ರದಲ್ಲಿ ಒಟ್ಟು 23 ಸಲಹೆಗಳನ್ನು ನೀಡಿದ್ದೆವು. ಆದರೆ ಕೇಂದ್ರ ಸರ್ಕಾರ ನಮ್ಮ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ನಮ್ಮ ಯಾವುದೇ ಅಭಿಪ್ರಾಯವನ್ನು ಅದರಲ್ಲಿ ಸೇರಿಸಿಲ್ಲ. ಈಗ ಮಂಡನೆ ಮಾಡಿದ ಮಸೂದೆಯನ್ನೂ ಯಥಾವತ್ತಾಗಿ ಜಾರಿ ಮಾಡಿದ್ದಾರೆ.

ಈ ಹೊಸ ಕಾನೂನಿನಲ್ಲಿ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚು ಇವೆ. ಜೊತೆಗೆ ಗೊಂದಲ ಮೂಡಿಸುವ ತಿದ್ದುಪಡಿಗಳು ಇವಾಗಿವೆ. ಜನಾಭಿಪ್ರಾಯ, ವಕೀಲರ ಅಭಿಪ್ರಾಯ ನಿರ್ಲಕ್ಷ್ಯ ಮಾಡಿ ಕಾನೂನು ಮಾಡಿದ್ದಾರೆ. ಹೀಗಾಗಿ ಈ ಮೂರು ಕಾನೂನುಗಳನ್ನು ರಾಜ್ಯ ಸರ್ಕಾರ ವಿರೋಧ ಮಾಡುತ್ತದೆ. ಇದರ ಜೊತೆಗೆ ಈ ಕಾನೂನುಗಳನ್ನು ತಿದ್ದುಪಡಿ ಮಾಡಬೇಕಾಗಿದೆ.

ಕಾನೂನುಗಳನ್ನು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ ಸಂವಿಧಾನ ಅನುಚ್ಛೇದ 7, 3 ನೇ ಪಟ್ಟಿಯ ಅಧಿಕಾರ ಬಳಸಿ ತಿದ್ದುಪಡಿ ಮಾಡಲು ಅವಕಾಶ ಇದೆ ಸರ್ಕಾರದ ಕ್ರಮಗಳನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುವುದು ಈ ಕಾನೂನಿನ ಅಪರಾಧ ವಾಗಿದೆ. ಇದು ದುರ್ದೈವದ ಸಂಗತಿ. ಈ ನಿಟ್ಟಿನಲ್ಲಿ ಉಪವಾಸ ಸತ್ಯಾಗ್ರಹ ಅಪರಾಧ ಎಂಬುವುದಕ್ಕೆ ತಿದ್ದುಪಡಿ ಮಾಡುತ್ತೇವೆ. ರಾಷ್ಟ್ರಪಿತ, ರಾಷ್ಟ್ರೀಯ ಲಾಂಛನ, ಬಾವುಟಕ್ಕೆ ಅಗೌರವ ತೋರಿಸಿದವರ ವಿರುದ್ಧ ಕ್ರಮಕ್ಕೆ ತಿದ್ದುಪಡಿ ಮಾಡಲು ಸೂಚಿಸಿದ್ದೆವು. ಆದರೆ ಅದಕ್ಕೆ ಕೇಂದ್ರ ಸರ್ಕಾರ ಒಪ್ಪಿಲ್ಲ. ಈ ನಿಟ್ಟಿನಲ್ಲಿ ತಿದ್ದುಪಡಿಗೆ ಸರ್ಕಾರ ಚಿಂತನೆ ನಡೆಸಿದೆ. ಸಂಘಟಿತ ಅಪರಾಧ ಎಂದು ಆರೋಪಿಸಿ, ವ್ಯಕ್ತಿಗಳ ಮೇಲೆ ಮೊಕದ್ದಮೆ ಹೂಡಲು ತನಿಖಾ ಸಂಸ್ಥೆಗಳಿಗೆ ಏಕಪಕ್ಷೀಯ ಮತ್ತು ವಿವೇಚನಾಧಿಕಾರಗಳು ಹೊಸ ಕಾನೂನಿನಲ್ಲಿ ಇದೆ. ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವ ಅಪರಾಧಗಳಿಗೆ 3 ವರ್ಷ ಜೈಲು ಹಾಗೂ ದಂಡಕ್ಕೆ ಅವಕಾಶವಿದೆ ಎಂದಿದ್ದಾರೆ.

ಸೈಬರ್ ಅಪರಾಧ, ಹ್ಯಾಕಿಂಗ್, ಆರ್ಥಿಕ ಅಪರಾಧ, ಅಣ್ವಸ್ತ್ರ ಗೌಪ್ಯತೆ ಹಾಗೂ ತಂತ್ರಜ್ಞಾನ ಮೂಲಕ ವಿಧ್ವಂಸಕ ಕೃತ್ಯ ಎಸಗುವ ಅಪರಾಧಗಳಿಗೆ ಪ್ರತ್ಯೇಕ ಅಧ್ಯಾಯದ ಮೂಲಕ ಕ್ರಮಕ್ಕೆ ತಿದ್ದುಪಡಿ ಮಾಡಲಾಗುತ್ತದೆ. ಮೃತ ದೇಹದ ಮೇಲೆ ಅತ್ಯಾಚಾರ ಎಸಗುವುದು ಅಕ್ಷಮ್ಯ ಅಪರಾಧ ಇದರ ಅಪರಾಧೀಕರಣಗೊಳಿಸುವ ನಿಟ್ಟಿನಲ್ಲಿ ತಿದ್ದುಪಡಿ ಮಾಡುತ್ತೇವೆ.

ಹೊಸ ಕಾಯ್ದೆ ಅಡಿಯಲ್ಲಿ ಪೊಲೀಸ್ ಕಸ್ಟಡಿ ಅವಧಿಯಲ್ಲಿ 90 ದಿನಗಳವರೆಗೆ ಅವಕಾಶ ಇದೆ. ಇದು ದೀರ್ಘಕಾಲದ ಅವದಿಯಾಗುತ್ತದೆ. ಮೊದಲು 15 ದಿನ ಇತ್ತು. ಆದರೆ ಈಗ ಅದನ್ನು ಹೆಚ್ಚು ದಿನಗಳವರೆಗೆ ಮಾಡಿದ್ದಾರೆ ಇದನ್ನು ಕಡತಗೊಳಿಸಲು ತಿದ್ದುಪಡಿ ಮಾಡಬೇಕು. ಅಪರಾಧ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳ ಆಸ್ತಿ ಪಾಸ್ತಿ ಜಪ್ತಿ ಮಾಡಲು ಮೊದಲು ಕೋರ್ಟ್ ಅನುಮತಿ ಬೇಕಾಗಿತ್ತು. ಆದರೆ ಹೊಸ ಕಾನೂನಿನಲ್ಲಿ ಪೊಲೀಸರಿಗೆ ಅನುಮತಿ ನೀಡಲಾ ಗಿದೆ. ಇದನ್ನು ತಿದ್ದುಪಡಿ ಮಾಡಲಾಗುತ್ತದೆ ಎಂದರು. ಪೊಲೀಸ್ ಕಮಿಷನರ್ ಅವರು ಹೊಸ ಕಾನೂನು ಜಾರಿ ಮಾಡುತ್ತೇವೆ ಎಂಬ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು ಜಾರಿ ಮಾಡ್ತೀವಿ ಅಂತ ಹೇಳಿದ್ದಾರೆ. ನಾನು ಲಾ ಮಿನಿಸ್ಟರ್ ಆಗಿ ತಿದ್ದುಪಡಿ ಮಾಡುವ ಅವಕಾಶ ಇದೆ ಮಾಡ್ತೀವಿ. ಸದ್ಯ ಈಗ ಹೊಸ ಕಾನೂನಿನ ಪ್ರಕಾರ ಎಫ್ ಐ ಆರ್ ಆಗುತ್ತಿವೆ. ತಿದ್ದುಪಡಿ ಆದ ಬಳಿಕ ಅದರಂತೆ ಪಾಲಿಸಬೇಕಾಗುತ್ತದೆ ಎಂದರು.

NEET-UG ಮರು ಪರೀಕ್ಷೆ ಫಲಿತಾಂಶ ಪ್ರಕಟ: ವಿದ್ಯಾರ್ಥಿಗಳ ರ‍್ಯಾಂಕಿಂಗ್‌ನಲ್ಲಿ ಬದಲಾವಣೆ

ನವದೆಹಲಿ: ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್–ಯುಜಿ ಪರಿಷ್ಕೃತ ರ‍್ಯಾಂಕಿಂಗ್ ಪಟ್ಟಿಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸೋಮವಾರ ಪ್ರಕಟಿಸಿದೆ. ಈ ಹಿಂದೆ ಮರು ಪರೀಕ್ಷೆ ಬರೆಯಲು ಅನುಮತಿ ಸಿಕ್ಕ 1,563 ಅಭ್ಯರ್ಥಿಗಳಿಗೆ ಈ ಮರು ಪರೀಕ್ಷೆಯನ್ನು ನಡೆಸಲಾಗಿದ್ದು ಅವರ ಪರೀಕ್ಷಾ ಫಲಿತಾಂಶ ಇಂದು ಪ್ರಕಟಗೊಂಡಿದೆ.

ಈ ಫಲಿತಾಂಶ ಪ್ರಕಟದ ಜೊತೆಗೆ ಎಲ್ಲಾ 24 ಲಕ್ಷ ವಿದ್ಯಾರ್ಥಿಗಳ ರ‍್ಯಾಂಕಿಂಗ್ ಕೂಡ ಬದಲಾಗಿದ್ದು, ತಮ್ಮ ತಮ್ಮ ರ‍್ಯಾಂಕಿಂಗ್ ಯಾವ ಹಂತದಲ್ಲಿ ಏರಿಳಿತವಾದಿರಬಹುದು ಎಂಬುದನ್ನು ವಿದ್ಯಾರ್ಥಿಗಳು ಪರಿಶೀಲಿಸುತ್ತಿದ್ದಾರೆ. ಮೇ 5 ರಂದು ನಡೆದ ಮೂಲ ನೀಟ್ ಯುಜಿ ಪರೀಕ್ಷೆಯ ಸಮಯದಲ್ಲಿ ಉಂಟಾದ ಸಮಯದ ನಷ್ಟದಿಂದಾಗಿ ಹೆಚ್ಚುವರಿ ಅಂಕಗಳನ್ನು ಈ 1563 ವಿದ್ಯಾರ್ಥಿಗಳಿಗೆ ನೀಡಲಾಗಿತ್ತು.

ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಈ ಅಭ್ಯರ್ಥಿಗಳು ಪರೀಕ್ಷೆಯನ್ನು ಮರುಪಡೆಯಲು ಅಥವಾ ಗ್ರೇಸ್ ಅಂಕಗಳಿಲ್ಲದೆ ತಮ್ಮ ಮೂಲ ಅಂಕಗಳನ್ನು ಉಳಿಸಿಕೊಳ್ಳುವ ಆಯ್ಕೆಯನ್ನು ಕೊಡಲಾಗಿತ್ತು. ಜೂನ್ 23 ರಂದು ನಡೆದ ಮರು ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳ ಪೈಕಿ 813 ಮಂದಿ ಮಾತ್ರ ಪರೀಕ್ಷೆ ಬರೆಯಲು ಮನಸ್ಸು ಮಾಡಿದ್ದರು. ಜೂನ್ 4 ರಂದು ಘೋಷಿಸಲಾದ ಮೂಲ NEET UG 2024 ಪರೀಕ್ಷೆಯ ಫಲಿತಾಂಶಗಳು, ಪೇಪರ್ ಸೋರಿಕೆ ಮತ್ತು ಅಕ್ರಮಗಳ ಆರೋಪಗಳಿಂದ ವಿವಾದವನ್ನು ಎದುರಿಸಿದ್ದು, ವಿಶೇಷವಾಗಿ ಹೆಚ್ಚಿನ ಸಂಖ್ಯೆಯ ಅಂದರೆ 67 ವಿದ್ಯಾರ್ಥಿಗಳು ಈ ಸಲ 720 ರಲ್ಲಿ 720 ಪರಿಪೂರ್ಣ ಅಂಕಗಳನ್ನು ಪಡೆದು ಒಟ್ಟಾರೆ ನೀಟ್ ಶಿಕ್ಷಣ ವ್ಯವಸ್ಥೆಯ ಬಗ್ಗೆ ಜನರು ಮತ್ತು ಶಿಕ್ಷಣ ತಜ್ಞರಲ್ಲಿ ಅನುಮಾನ ಮೂಡಿಸಿತ್ತು. ಶಿಕ್ಷಣ ಸಚಿವಾಲಯವು ಈ ವಿಷಯವನ್ನು ನಂತರ ಸಿಬಿಐ ತನಿಖೆಗೆ ಒಪ್ಪಿಸಿದ್ದು, ಈಗ ಸಿಬಿಐ ತನಿಖೆ ನಡೆಯುತ್ತಿದೆ.

ಹಾಸನದಲ್ಲಿ ಡೆಂಗ್ಯೂಗೆ 13 ವರ್ಷದ ಬಾಲಕಿ ಬಲಿ

ಹಾಸನ: ಬೆಂಗಳೂರು ಬಳಿಕ ಮಾರಕ ಡೆಂಗ್ಯೂ ಜ್ವರಕ್ಕೆ ಹಾಸನದಲ್ಲೊಂದು ಜೀವ ಬಲಿಯಾಗಿದೆ. 13 ವರ್ಷದ ಬಾಲಕಿ ಡೆಂಗ್ಯೂ ಜ್ವರದಿಂದ ಮೃತಪಟ್ಟ ಘಟನೆ ಹಾಸನ ತಾಲೂಕಿನ ಬೊಮ್ಮನಾಯಕ ಹಳ್ಳಿ ಗ್ರಾಮದಲ್ಲಿ ನಡೆದಿದೆ.



ಅಕ್ಷತಾ (13) ಮೃತ ಬಾಲಕಿ. ಮೂಲತಃ ಅರಕಲಗೂಡು ತಾಲೂಕಿನ ದೊಡ್ಡಮಗ್ಗೆ ಗ್ರಾಮದವರು. ಕೂಲಿ ಕೆಲಸ ಮಾಡುತ್ತಿದ್ದ ಅಪ್ಪಣ್ಣ ಶೆಟ್ಟಿ ಹಾಗೂ ಪದ್ಮಾ ದಂಪತಿ ಪುತ್ರಿ ಅಕ್ಷತಾ, ಹಾಸನದ ಖಾಸಗಿ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದರು.

ಕಳೆದ ಬುಧವಾರ ಜ್ವರಕ್ಕೆ ತುತ್ತಾಗಿದ್ದರು. ನಂತರ ಬಾಲಕಿಗೆ ಬೊಮ್ಮನಾಯಕಹಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಗಿತ್ತು. ಆದಾಗ್ಯೂ ಬಾಲಕಿ ಗುಣಮುಖಳಾಗದೇ ಇದ್ದ ಕಾರಣ ಪೋಷಕರು ಆಕೆಯನ್ನು ಹಾಸನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೂ ಅಕ್ಷತಾ ಆರೋಗ್ಯದಲ್ಲಿ ಚೇತರಿಕೆ ಕಾಣದೇ ಮತ್ತೊಂದು ಆಸ್ಪತ್ರೆಗೆ ದಾಖಲಿಸಿದ್ದರು.

ಬಾಲಕಿ ಸ್ಥಿತಿ ಗಂಭೀರವಾಗುತ್ತಿದ್ದಂತೆ ಜಿಲ್ಲಾಸ್ಪತ್ರೆ ಕರೆದುಕೊಂಡು ಹೋಗುವಂತೆ ಖಾಸಗಿ ಆಸ್ಪತ್ರೆ ವೈದ್ಯರು ತಿಳಿಸಿದ್ದರು. ನಂತರ ಪೋಷಕರು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಕೊನೆಗೆ ಚಿಕಿತ್ಸೆ ಫಲಕಾರಿಯಾಗದೇ ಬಾಲಕಿ ಸಾವನ್ನಪ್ಪಿದ್ದಾಳೆ. ಬಾಲಕಿ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಅತ್ಯಾಚಾರ ಪ್ರಕರಣದ ಆರೋಪದಲ್ಲಿ ಜೈಲಲ್ಲಿದ್ದ ವಕೀಲ ದೇವರಾಜೇಗೌಡರಿಗೆ ಜಾಮೀನು

ಬೆಂಗಳೂರು, ಜು. 1(ಕೆಎಂಶಿ)– ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅಶ್ಲೀಲ ಪೆನ್‌ಡ್ರೈವ್ ಮತ್ತು ಸಿಡಿ ಬಿಡುಗಡೆ ಮಾಹಿತಿಯನ್ನು ಬಹಿರಂಗಪಡಿಸಿ ಕೆಂಗಣ್ಣಿಗೆ ಗುರಿಯಾಗಿದ್ದ ದೇವರಾಜೇಗೌಡ ಅವರಿಗೆ ರಾಜ್ಯ ಹೈಕೋರ್ಟ್ ಇಂದು ಜಾಮೀನು ಮಂಜೂರು ಮಾಡಿದೆ.



ಅತ್ಯಾಚಾರ ಪ್ರಕರಣದಲ್ಲಿ ವಕೀಲ ದೇವರಾಜೇಗೌಡ ಅವರನ್ನು ಹಾಸನ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್‌ನ ಏಕಸದಸ್ಯ ಪೀಠ ದೇವರಾಜೇಗೌಡ ಅವರಿಗೆ ಜಾಮೀನು ಮಂಜೂರು ಮಾಡಿದೆ. ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಿ 2024ರ ಮಾರ್ಚ್ 29ರಂದು ಸಂತ್ರಸ್ತೆ ಪತಿ ದೇವರಾಜೇಗೌಡರ ವಿರುದ್ಧ ದೂರು ನೀಡಿದ್ದರು. ಇದಕ್ಕೂ ಮುನ್ನವೇ ತಮ್ಮ ವಿರುದ್ಧ ಹನಿಟ್ರ್ಯಾಪ್ ನಡೆದಿದೆ ಎಂದು ಮಾರ್ಚ್ 28ರಂದು ಸಂತ್ರಸ್ತೆ ವಿರುದ್ಧವೇ ದೇವರಾಜೇಗೌಡ ದೂರು ದಾಖಲಿಸಿದ್ದರು.

ದೇವರಾಜೇಗೌಡ ಪರ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿ, ಸಂತ್ರಸ್ತೆ ಹೇಳಿದಂತೆ ಘಟನೆ ನಡೆದ 90 ದಿನ ವಿಳಂಬವಾಗಿ ದೂರು ದಾಖಲಿಸಿದ್ದಾರೆ, ಅಷ್ಟೇ ಅಲ್ಲ, ವಿಡಿಯೊ ಕಾಲ್‌ಗಳನ್ನು ಏಕೆ ಸ್ವೀಕರಿಸಿದ್ದರೆಂಬುದಕ್ಕೆ ಸಮರ್ಥನೆ ಕಂಡು ಬಂದಿಲ್ಲ. ಇದೆಲ್ಲವೂ ಕೆಲವು ಶಕ್ತಿಗಳು ತಮ್ಮ ಕಕ್ಷಿದಾರರನ್ನು ಕಟ್ಟಿಹಾಕಲು ಸುಳ್ಳು ದಾಖಲೆ ಸೃಷ್ಟಿಸಿ ಆರೋಪ ಮಾಡಿದ್ದಾರೆ ಎಂದು ವಾದ ಮಂಡಿಸಿ, ಜಾಮೀನಿಗೆ ಮನವಿ ಮಾಡಿದ್ದರು. ವಾದ ಮನ್ನಿಸಿದ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಅರ್ಜಿ ಆಹ್ವಾನ

ಮೈಸೂರು.ಜು.1–ಕೆ.ಆರ್.ನಗರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕ–ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2024–25ನೇ ಸಾಲಿನ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 10 ಕೊನೆಯ ದಿನಾಂಕವಾಗಿದೆ. ವಿವರಗಳಿಗೆ ಕೆ.ಆರ್. ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯ ದೂ.08223–262230.